ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಗುರುವಾರ, ಏಪ್ರಿಲ್ 13, 2023

ಸಂಪುಟ : 49 ಸಂಚಿಕೆ : 331 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com

## 40 ವರ್ಷಗಳ ಇತಿಹಾಸದ ಮತಯಂತ್ರ

ಭಾರತದ ಚುನಾವಣೆಯ ಪ್ರಮುಖ ಅಂಶಗಳಲ್ಲಿ ಮತಯಂತ್ರ ಸಹ ಒಂದಾಗಿದೆ. ಅಮೆರಿಕ ಸೇರಿದಂತೆ, ಹಲವಾರು ಮುಂದುವರಿದ ದೇಶಗಳು ಈಗಲೂ ಮತಪತ್ರಗಳನ್ನು ಬಳಸುತ್ತಿರುವಾಗ, ಭಾರತ ಮಾತ್ರ ವಿದ್ಯುನ್ಮಾನ ಮತಯಂತ್ರದಲ್ಲಿ ಪ್ರಮುಖ ಹೆಜ್ಜೆ ಇಟ್ಟಿದೆ.



ಮತಯಂತ್ರ ಬಳಕೆ: ಮುಂದುವರೆದ ದೇಶಗಳನ್ನು ಹಿಂದಿಕ್ಕಿದ ಭಾರತ

1977ರಲ್ಲಿ ಮುಖ್ಯ ಚುನಾವಣಾ ಆಯುಕ್ತರಾಗಿದ್ದ ಎಸ್.ಎಲ್. ಶಕ್ದರ್ ಅವರು ಮತಯಂತ್ರಗಳ ಬಳಕೆ ಬಗ್ಗೆ ಪ್ರಸ್ತಾಪಿಸಿದ್ದರು. 1980-81ರ ವೇಳೆಗೆ ಸರ್ಕಾರಿ ಸ್ವಾಮ್ಯದ ಇ.ಸಿ.ಐ.ಎಲ್. ಹಾಗೂ ಬಿ.ಇ.ಎಲ್. ಕಂಪನಿಗಳು ಮತಯಂತ್ರಗಳ ಮಾದರಿ ಪ್ರದರ್ಶಿಸಿದ್ದವು. 1982-83ರಲ್ಲಿ ಮೊದಲ ಬಾರಿ ಕೇರಳದ ಪರವೂರು ಕ್ಷೇತ್ರದಲ್ಲಿ ಮತಯಂತ್ರಗಳನ್ನು ಸೀಮಿತವಾಗಿ ಬಳಸಲಾಗಿತ್ತು. ಇದಾಗಿ 40 ವರ್ಷಗಳು ಉರುಳಿವೆ. ಮತಯಂತ್ರಗಳು ಚುನಾವಣೆಯ ಅವಿಭಾಜ್ಯ ಅಂಗದಂತಾಗಿವೆ.

ಆದರೂ, ಮತಯಂತ್ರಗಳ ಬಗ್ಗೆ ಆಗಾಗ ಆಕ್ಷೇಪಗಳು ಕೇಳಿ ಬರುತ್ತಲೇ ಇರುತ್ತವೆ. ಹಳೆಯ ಕಾಲದ ಮತಪತ್ರದ ಪದ್ಧತಿ ಜಾರಿಗೆ ಬಂದಲ್ಲಿ ಚುನಾವಣೆ ನಂಬಿಕಾರ್ಹವಾಗುತ್ತದೆ ಎಂಬ ಮಾತುಗಳನ್ನೂ ಕೆಲವರು ಹೇಳುತ್ತಾರೆ. ಆದರೆ, ಮತಯಂತ್ರಗಳಿಗಿಂತ ಮುನ್ನಾ ಕಾಲದ ಚುನಾವಣಾ ವರದಿಗಳನ್ನು ನೋಡಿದರೆ ಬೇರೆಯದೇ ಚಿತ್ರಣ ಸಿಗುತ್ತದೆ.

ಮತಯಂತ್ರಗಳ ಮುಂಚಿನ ಆ ದಿನಗಳಲ್ಲಿ ಮತಗಟ್ಟೆಗಳ ವಶ, ಬಾಹುಬಲವುಳ್ಳವರು ಮತಗಟ್ಟೆ ಅಧಿಕಾರಿಗಳನ್ನು ಬೆದರಿಸಿ ಇಲ್ಲವೇ ಆಮಿಷ ಒಡ್ಡಿ ಮತಗಳನ್ನು ತಮ್ಮ ಅಭ್ಯರ್ಥಿಯ ಪರವಾಗಿ ಚಲಾವಣೆ ಮಾಡಿಕೊಳ್ಳುವ ಘಟನೆಗಳು ನಡೆಯುತ್ತಿದ್ದವು. ಸರ್ಕಾರಿ ಮತಯಂತ್ರದ ದುರುಪಯೋಗದ ಆರೋಪಗಳೂ ಸಾಮಾನ್ಯವಾಗಿದ್ದವು.

ಅಲ್ಲದೇ, ಎಷ್ಟೋ ಜನ ಸರಿಯಾಗಿ ಮತ ಚಲಾಯಿಸದೇ ಅಸಿಂಧು ಮತಗಳ ಸಂಖ್ಯೆ ಹೆಚ್ಚಿರುತ್ತಿತ್ತು. ಅಸಿಂಧು ಮತಗಳು ಕೆಲವೊಮ್ಮೆ ನಿರ್ಣಾಯಕವಾಗಿರುತ್ತಿದ್ದವು. ಹೀಗಾಗಿ ಈ ಬಗ್ಗೆ ದೂರು, ತಕರಾರು ಹಾಗೂ ವ್ಯಾಜ್ಯಗಳು ಉಂಟಾಗುತ್ತಿದ್ದವು. ಮತಪತ್ರಗಳ ಮುದ್ರಣ, ಮತಗಟ್ಟೆಗಳಿಗೆ ಸಾಗಣೆ, ವಾಪಸ್ ತರುವುದು, ಎಣಿಕೆ ಇತ್ಯಾದಿ ಹರಸಾಹಸ ತಪ್ಪಿದೆ. ಆ ದಿನಗಳಲ್ಲಿ ಎರಡು ದಿನಗಳ ಕಾಲ ಮತಗಳ ಎಣಿಕೆ ಕಾರ್ಯ ಪೂರ್ಣಗೊಳ್ಳುತ್ತಿರಲಿಲ್ಲ. ಈಗ ಐದಾರು ಗಂಟೆಗಳಲ್ಲೇ ಎಣಿಕೆ ಕಾರ್ಯ ಪೂರ್ಣಗೊಳ್ಳುತ್ತಿದೆ. ಇದರ ಜೊತೆಗೆ, ವೋಟರ್ ವೆರಿಫೈಯಬಲ್ ಪೇಪರ್ ಆಡಿಟ್ (3ನೇ ಪುಟಕ್ಕೆ)

### ಮತಯಂತ್ರ ಕಾಲದಲ್ಲೂ ಮತಪತ್ರಗಳ ಬಳಕೆ

ಮತಯಂತ್ರ ಬಳಕೆ ಜಾರಿಗೆ ಬಂದ ನಂತರವೂ ಮತಪತ್ರಗಳಿಗೆ ಮೊರೆ ಹೋಗಬೇಕಾದ ಸಂದರ್ಭಗಳೂ ಎದುರಾಗಿವೆ. 1996ರಲ್ಲಿ ಅವಿಭಜಿತ ಆಂಧ್ರ ಪ್ರದೇಶದ ನಲ್ಗೊಂಡ ಲೋಕಸಭಾ ಕ್ಷೇತ್ರದಲ್ಲಿ 480 ಹಾಗೂ ಕರ್ನಾಟಕದ ಬೆಳಗಾವಿ ಕ್ಷೇತ್ರದಲ್ಲಿ 454 ಅಭ್ಯರ್ಥಿಗಳು ಕಣದಲ್ಲಿದ್ದರು. ಆಗಿನ ಮತಯಂತ್ರಗಳಿಗೆ ಇಷ್ಟೊಂದು ಸಂಖ್ಯೆಯ ಅಭ್ಯರ್ಥಿಗಳನ್ನು ನಿಭಾಯಿಸುವ ಶಕ್ತಿ ಇರಲಿಲ್ಲ. ಹೀಗಾಗಿ ಚುನಾವಣಾ ಆಯೋಗ ಮತಪತ್ರಗಳ ಮೊರೆ ಹೋಗಬೇಕಾಯಿತು.

ಆ ಸಂದರ್ಭದಲ್ಲಿ ಲೋಕಸಭಾ ಚುನಾವಣೆಗೆ ನಿಲ್ಲಲು 500 ರೂ. ಹಾಗೂ ವಿಧಾನಸಭಾ ಚುನಾವಣೆಗೆ ನಿಲ್ಲಲು 250 ರೂ. ಠೇವಣಿ ದಾಖಲಿಸಿದ್ದರೆ ಸಾಕಿತ್ತು. ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಅಭ್ಯರ್ಥಿಗಳಿಗೆ ಈ ಮೊತ್ತ ಕ್ರಮವಾಗಿ 250 (3ನೇ ಪುಟಕ್ಕೆ)

### ಸುಪ್ರೀಂ ಮತಯಂತ್ರ ಅಸಿಂಧುಗೊಳಿಸಿತ್ತು !

ಭಾರತದಲ್ಲಿ ಮೊದಲ ಬಾರಿಗೆ ಮತಯಂತ್ರಗಳನ್ನು ಬಳಸಿದ್ದು 1982ರಲ್ಲಿ. ಕೇರಳದ ಪರವೂರ್ ವಿಧಾನಸಭಾ ಕ್ಷೇತ್ರದಲ್ಲಿನ 84 ಮತಗಟ್ಟೆಗಳ ಪೈಕಿ 50ರಲ್ಲಿ ಮತಯಂತ್ರಗಳನ್ನು ಪ್ರಾಯೋಗಿಕವಾಗಿ ಬಳಸಲಾಗಿತ್ತು. ಸಿ.ಪಿ.ಐ.ನ ಶಿವನ್ ಪಿಳ್ಳೈ ಹಾಗೂ ಕಾಂಗ್ರೆಸ್‌ನ ಎ.ಸಿ. ಜೋಸೆ ನಡುವೆ ಈ ಕ್ಷೇತ್ರದಲ್ಲಿ ಬಿರುಸಿನ ಸ್ಪರ್ಧೆ ಇತ್ತು. ಚುನಾವಣೆಯಲ್ಲಿ ಪಿಳ್ಳೈ ಗೆದ್ದಿದ್ದರು. ಆದರೆ, ಈ ಚುನಾವಣೆಯಲ್ಲಿ ಮತಯಂತ್ರ ಬಳಸಿದ್ದನ್ನು ಪ್ರಶ್ನಿಸಿ ಜೋಸೆ ಕೋರ್ಟ್ ಮೊರೆ ಹೋದರು. 1984ರಲ್ಲಿ ಈ ಬಗ್ಗೆ ತೀರ್ಪು ನೀಡಿದ ಸುಪ್ರೀಂ ಕೋರ್ಟ್, ಮತಯಂತ್ರಗಳ ಬಳಕೆ ಕಾನೂನು ಬಾಹಿರ ಎಂದು ತೀರ್ಪು ನೀಡಿ, ಚುನಾವಣೆ ರದ್ದುಗೊಳಿಸಿತು. ಈ ಹಿನ್ನೆಲೆಯಲ್ಲಿ 1989ರಲ್ಲಿ ಜನಪ್ರತಿನಿಧಿ ಕಾಯ್ದೆಗೆ ತಿದ್ದುಪಡಿ ತಂದ ನಂತರ, ಮತಯಂತ್ರಗಳ ಬಳಕೆ ಕಾನೂನಾತ್ಮಕ ಮಾನ್ಯತೆ ಪಡೆಯಿತು.

### ಮರೆಯಾದ ಮತಗಟ್ಟೆ ಗೌಪ್ಯತೆ

ಮತಯಂತ್ರ ಜಾರಿಗೆ ಬಂದ ನಂತರ ಕಂಡು ಬರುತ್ತಿರುವ ಪ್ರಮುಖ ಸಮಸ್ಯೆ ಎಂದರೆ ಮತಗಟ್ಟೆಗಳಲ್ಲಿ ಒಟ್ಟು ಮತಗಳು ಯಾರ ಪರವಾಗಿ ಚಲಾವಣೆಯಾಗಿವೆ ಎಂಬ ವಿಷಯದಲ್ಲಿ ಗೌಪ್ಯತೆ ಕಾಯ್ದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದಕ್ಕೂ ಮುಂಚೆ ಚಲಾವಣೆಯಾದ ಎಲ್ಲ ಮತಪತ್ರಗಳನ್ನು ಮಿಶ್ರಣ ಮಾಡಿ ಎಣಿಕೆ ಮಾಡಲಾಗುತ್ತಿತ್ತು. ಇದರಿಂದಾಗಿ ನಿರ್ದಿಷ್ಟ ಪ್ರದೇಶದ ಜನರು ಯಾರ ಪರವಾಗಿ ಮತ ಚಲಾಯಿಸಿದ್ದಾರೆ ಎಂಬುದು ಗೊತ್ತಾಗುತ್ತಿರಲಿಲ್ಲ. ಈ ಸಮಸ್ಯೆ ಬಗೆಹರಿಸಲು ಚುನಾವಣಾ ಆಯೋಗ ಟೋಟಲೈಜರ್ ಎಂಬ ಉಪಕರಣ ರೂಪಿಸಿದೆ. ಈ ಮೂಲಕ 14 ಮತಯಂತ್ರಗಳಲ್ಲಿ ಚಲಾವಣೆಯಾದ ಮತಗಳನ್ನು ಒಟ್ಟಿಗೆ ಎಣಿಕೆ ಮಾಡಬಹುದು. ಇದರಿಂದಾಗಿ ನಿರ್ದಿಷ್ಟ ಮತಗಟ್ಟೆಯ ಜನರು ಯಾವ ರೀತಿ ಮತ ಚಲಾಯಿಸಿದ್ದಾರೆ ಎಂಬುದು ಗೊತ್ತಾಗುವುದಿಲ್ಲ. ಆದರೆ, ತಾಂತ್ರಿಕ ವಿಷಯಗಳೂ ಸೇರಿದಂತೆ ಹಲವಾರು ವಿಷಯಗಳು ಪರಿಶೀಲನೆಯಲ್ಲಿವೆ. ಈ ವಿಷಯ ನ್ಯಾಯಾಲಯದ ಎದುರಿರುವ ಕಾರಣ ಟೋಟಲೈಜರ್ ಬಳಸುತ್ತಿಲ್ಲ ಎಂದು ಚುನಾವಣಾ ಆಯೋಗ ಹೇಳಿದೆ.

# ಇಂದಿನಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ

ಬೆಂಗಳೂರು, ಏ. 12 - ರಾಜ್ಯ ವಿಧಾನಸಭಾ ಚುನಾವಣೆಗೆ ನಾಳೆಯಿಂದ ನಾಮಪತ್ರ ಸಲ್ಲಿಕೆ ಪ್ರಾರಂಭವಾಗಲಿದೆ.

ಕೇಂದ್ರ ಚುನಾವಣಾ ಆಯೋಗ ಏಪ್ರಿಲ್ 13 ರಂದು ಚುನಾವಣಾ ಅಧಿಸೂಚನೆ ಹೊರಡಿಸಲಿದ್ದು, ಆ ತಕ್ಷಣದಿಂದಲೇ ನಾಮಪತ್ರ ಸಲ್ಲಿಕೆ ಕಾರ್ಯಾರಂಭಗೊಳ್ಳಲಿದೆ.

ನಾಮಪತ್ರ ಸಲ್ಲಿಕೆಗೆ ಏಪ್ರಿಲ್ 20 ರವರೆಗೂ ಅವಕಾಶವಿರುತ್ತದೆ. ಏಪ್ರಿಲ್ 21 ರಂದು ನಾಮಪತ್ರ ಪರಿಶೀಲನೆ ನಡೆಯಲಿದ್ದು, ನಾಮಪತ್ರ ಹಿಂಪಡೆಯಲು ಏಪ್ರಿಲ್ 24 ಕಡೆ ದಿನವಾಗಿದೆ.

ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಿಗೂ ಮೇ 10 ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. ರಾಜ್ಯದಲ್ಲಿ ಒಟ್ಟಾರೆ 5.24 ಕೋಟಿ ಮತದಾರರಿದ್ದು, ಪುರುಷರು 2.63 ಕೋಟಿ ಇದ್ದರೆ, ಮಹಿಳೆಯರು 2.60 ಕೋಟಿ ಮತದಾನದ ಹಕ್ಕು ಪಡೆದಿದ್ದಾರೆ. ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ಎಸ್‌ಸಿಗೆ 36, ಎಸ್‌ಟಿಗೆ 15 ಕ್ಷೇತ್ರ ಮೀಸಲಿರಿಸಿ, ಉಳಿದ ಕ್ಷೇತ್ರಗಳನ್ನು ಸಾಮಾನ್ಯ ವರ್ಗಕ್ಕೆ ಮೀಸಲಿಡಲಾಗಿದೆ.

ಪ್ರತಿ ಮತಗಟ್ಟೆಗೆ ಸರಾಸರಿ 883 ಮತದಾರರಂತೆ ಒಟ್ಟು 58,282 ಮತಗಟ್ಟೆಗಳನ್ನು ಸ್ಥಾಪಿಸಲಾಗುತ್ತಿದೆ. ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಮತಗಟ್ಟೆಗಳಿರಲಿವೆ. ನ್ಯಾಯಸಮ್ಮತ ಮತ್ತು ಪಾರದರ್ಶಕ ಚುನಾವಣೆ ನಡೆಸಲು ಆಯೋಗ ಎಲ್ಲಾ ರೀತಿಯ ಕ್ರಮ ಕೈಗೊಂಡಿದೆ. ಚುನಾವಣಾ ಉಸ್ತುವಾರಿಗಾಗಿ ಆಯೋಗ 2500 ಹಿರಿಯ ಅಧಿಕಾರಿಗಳನ್ನು ವಿವಿಧ ಹಂತಗಳಲ್ಲಿ (2ನೇ ಪುಟಕ್ಕೆ)

## 869 ಮತಗಟ್ಟೆಗಳ ಮತದಾನದ ನೇರ ಪ್ರಸಾರ: ಕಾಪಶಿ

ದಾವಣಗೆರೆ, ಏ. 12 – ಬರುವ ವಿಧಾನಸಭಾ ಚುನಾವಣೆಗೆ ನಾಳೆ ಗುರುವಾರದಿಂದ ನಾಮಪತ್ರ ಸಲ್ಲಿಕೆ ಆರಂಭವಾಗಲಿದೆ. ಇದಕ್ಕಾಗಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರ್ವತ್ರಿಕ ರಜಾ ದಿನಗಳಾದ ಏಪ್ರಿಲ್ 14 ಹಾಗೂ 16 ಹೊರತು ಪಡಿಸಿ ಉಳಿದ ದಿನಗಳಂದು ಪ್ರತಿದಿನ ಬೆಳಿಗ್ಗೆ 11ರಿಂದ ಮಧ್ಯಾಹ್ನ 3ರವರೆಗೆ ನಾಮಪತ್ರ ಸಲ್ಲಿಸಬಹುದು. ನಾಮಪತ್ರ ಸಲ್ಲಿಕೆಗೆ ಏ.20ರ ಗುರುವಾರ ಕೊನೆಯ ದಿನ ಎಂದರು.



ದಾವಣಗೆರೆ ಉತ್ತರ ಹಾಗೂ ದಕ್ಷಿಣ ಕ್ಷೇತ್ರಗಳಿಗೆ ಪಾಲಿಕೆಯಲ್ಲಿ, ಮಾಯಕೊಂಡಕ್ಕೆ ದಾವಣಗೆರೆ ತಹಶೀಲ್ದಾರ್ ಕಚೇರಿಯಲ್ಲಿ, ಜಗಳೂರಿಗೆ ತಾಲ್ಲೂಕು ಕಚೇರಿ, ಹರಿಹರ, ಚನ್ನಗಿರಿ ಹಾಗೂ ಹೊನ್ನಾಳಿ ಕ್ಷೇತ್ರಗಳಿಗೆ ಸಂಬಂಧಿಸಿದ ತಹಶೀಲ್ದಾರ್ ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಸಬಹುದು ಎಂದರು.

ಜಿಲ್ಲೆಯಲ್ಲಿ ಇದುವರೆಗೂ 7,18,953 ಪುರುಷ, 7,16,640 ಮಹಿಳೆ, 116 ತೃತೀಯ ಲಿಂಗಿ ಹಾಗೂ 466 ಸೇವಾ ಮತದಾರರೂ ಸೇರಿದಂತೆ 14,36,175 ಮತದಾರರನ್ನು ಗುರುತಿಸಲಾಗಿದೆ. ಮತಪಟ್ಟಿಗೆ ಸೇರ್ಪಡೆಯಾಗಲು ಅರ್ಜಿ ಸಲ್ಲಿಸುವ ಅವಧಿ ಮುಗಿದಿದ್ದು, ಅಂತಿಮ ಮತದಾರರ ಪಟ್ಟಿ ಏ.20ರ ವೇಳೆಗೆ ಸಿದ್ಧವಾಗಲಿದೆ ಎಂದವರು ಹೇಳಿದರು.

ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಿಗೆ ಒಟ್ಟು 1,685 ಮತಗಟ್ಟೆಗಳನ್ನು ರೂಪಿಸಲಾಗುವುದು. ಈ ಪೈಕಿ 869 ಮತಗಟ್ಟೆಗಳ ಮತದಾನ ಪ್ರಕ್ರಿಯೆಯನ್ನು ವೆಬ್ ಕಾಸ್ಟಿಂಗ್ ಮೂಲಕ ನೇರ ಪ್ರಸಾರ ಮಾಡಲಾಗುವುದು. ಈ ಹಿಂದೆ ಶೇ.10-15ರಷ್ಟು ಮತಗಟ್ಟೆಗಳ ನೇರ ಪ್ರಸಾರ ಇರುತ್ತಿತ್ತು. ಈ ಬಾರಿ ಶೇ.50 ಮತಗಟ್ಟೆಗಳ ನೇರ ಪ್ರಸಾರ ಮಾಡಲಾಗುವುದು ಎಂದರು. ಮತಗಟ್ಟೆ ಅಧಿಕಾರಿಗಳಿಗೆ ಮೊದಲ ಹಂತದ ತರಬೇತಿ ನೀಡಲಾಗಿದೆ. ಏ.30ರಂದು ಎರಡನೇ ಹಂತದ ತರಬೇತಿ (2ನೇ ಪುಟಕ್ಕೆ)

### 80 ಮೀರಿದವರಿಂದ ಮತಗಟ್ಟೆಯಲ್ಲೇ ಮತದಾನಕ್ಕೆ ಒಲವು

ಜಿಲ್ಲೆಯಲ್ಲಿ 80 ವರ್ಷ ಮೀರಿದ ಹಾಗೂ ವಿಕಲಚೇತನರಾದ ಒಟ್ಟು 46,790 ಮತದಾರರನ್ನು ಗುರುತಿಸಲಾಗಿದೆ. ಇವರು ಮನೆಗಳಲ್ಲೇ ಮತದಾನ ಮಾಡಲು 12ಡಿ ಫಾರಂಗಳನ್ನು ವಿತರಿಸಲಾಗುತ್ತಿದೆ. ಇದುವರೆಗೂ 43,643 ಜನರಿಗೆ ಫಾರಂ ವಿತರಿಸಿದ್ದು, 3,147 ಮತದಾರರು ಅವರ ವಿಳಾಸಗಳಲ್ಲಿ ದೊರೆತಿಲ್ಲ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಹೇಳಿದರು. ಏ.17ರವರೆಗೆ ಇವರು ಮನೆಗಳಿಂದಲೇ ಮತದಾನಕ್ಕೆ ಅರ್ಜಿ ಸಲ್ಲಿಸಲು ಅವಕಾಶವಿದೆ. ಆದರೆ, ಇದುವರೆಗೂ ಬಂದಿರುವ ಮಾಹಿತಿಯ ಪ್ರಕಾರ 80 ವರ್ಷದ ಮೀರಿದವರಲ್ಲಿ ಬಹುತೇಕರು ಮತಗಟ್ಟೆಗೇ ತೆರಳಿ ಮತದಾನ ಮಾಡಲು ಬಯಸಿದ್ದಾರೆ ಎಂದರು.

# ಜಿಲ್ಲೆಯ ಎಲ್ಲಾ ಬಿಜೆಪಿ ಅಭ್ಯರ್ಥಿಗಳು ಪ್ರಕಟ

## ಉತ್ತರಕ್ಕೆ ಲೋಕಿಕೆರೆ ನಾಗರಾಜ್, ದಕ್ಷಿಣಕ್ಕೆ ಅಜಯ್‌ಕುಮಾರ್ ಮಾಯಕೊಂಡಕ್ಕೆ ಬಸವರಾಜ ನಾಯ್ಕ, ಚನ್ನಗಿರಿಗೆ ಶಿವಕುಮಾರ್



ನವದೆಹಲಿ, ಏ. 12 - ಬರುವ ಮೇ 10 ರಂದು ನಡೆಯಲಿರುವ ಕರ್ನಾಟಕ ವಿಧಾನಸಭೆ ಚುನಾವಣೆಗೆ ಬಿಜೆಪಿ ತನ್ನ ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಇಂದು ರಾತ್ರಿ ಬಿಡುಗಡೆ ಮಾಡಿದ್ದು, ಈ ಪಟ್ಟಿಯಲ್ಲಿ ದಾವಣಗೆರೆ ಜಿಲ್ಲೆಯ ಬಾಕಿ ಉಳಿದಿದ್ದ ನಾಲ್ಕು ಕ್ಷೇತ್ರಗಳ ಅಭ್ಯರ್ಥಿಗಳ ವಿವರ ಇದೆ.

ದಾವಣಗೆರೆ ಉತ್ತರ ಕ್ಷೇತ್ರಕ್ಕೆ ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ್, ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ನಗರ ಪಾಲಿಕೆ ಮಾಜಿ ಮಹಾಪೌರರೂ ಆಗಿರುವ ಹಾಲಿ ಸದಸ್ಯ ಬಿ.ಜಿ. ಅಜಯ್ ಕುಮಾರ್, ಮಾಯಕೊಂಡಕ್ಕೆ ಮಾಜಿ ಶಾಸಕ ಎಂ. ಬಸವರಾಜ ನಾಯ್ಕ, ಚನ್ನಗಿರಿ ಕ್ಷೇತ್ರಕ್ಕೆ ತುಮ್‌ಕೋಸ್ ಮಾಜಿ ಅಧ್ಯಕ್ಷ ಹೆಚ್.ಎಸ್. ಶಿವಕುಮಾರ್ ಅವರಿಗೆ ಟಿಕೆಟ್ ನೀಡಲಾಗಿದೆ.

ಬಿಜೆಪಿ ನಿನ್ನೆ ಬಿಡುಗಡೆ ಮಾಡಿದ್ದ ಮೊದಲ ಪಟ್ಟಿಯಲ್ಲಿ ಹರಿಹರದಿಂದ ಮಾಜಿ ಶಾಸಕ ಬಿ.ಪಿ. ಹರೀಶ್, ಜಗಳೂರಿನಿಂದ ಹಾಲಿ ಶಾಸಕ ಎಸ್.ವಿ. ರಾಮಚಂದ್ರ, ಹೊನ್ನಾಳಿಯಿಂದ ಹಾಲಿ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರುಗಳಿಗೆ ಟಿಕೆಟ್ ನೀಡಲಾಗಿತ್ತು. ಇದರಿಂದಾಗಿ ಜಿಲ್ಲೆಯ ಎಲ್ಲಾ ಏಳು ಕ್ಷೇತ್ರಗಳಿಗೆ ಬಿಜೆಪಿ ತನ್ನ ಅಭ್ಯರ್ಥಿಗಳನ್ನು ಪ್ರಕಟಿಸಿದಂತಾಗಿದೆ.

### 6 ಶಾಸಕರಿಗೆ ತಪ್ಪಿದ ಟಿಕೆಟ್

ಬಿಜೆಪಿ ಪ್ರಕಟಿಸಿದ ಅಭ್ಯರ್ಥಿಗಳ ಎರಡನೇ ಪಟ್ಟಿಯಲ್ಲಿ ಆರು ಹಾಲಿ ಶಾಸಕರು ಟಿಕೆಟ್ ಪಡೆಯಲು ಸಾಧ್ಯವಾಗಿಲ್ಲ. ಲಂಚ ಪ್ರಕರಣದಲ್ಲಿ ಸಿಲುಕಿರುವ ಚನ್ನಗಿರಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರಿಗೆ ಟಿಕೆಟ್ ನಿರಾಕರಿಸ ಲಾಗಿದೆ. ಅವರ ಕುಟುಂಬದವರಿಗೂ ಟಿಕೆಟ್ ನೀಡಿಲ್ಲ.

ಮೂಡಿಗೆರೆ ಶಾಸಕ ಎಂ.ಪಿ. ಕುಮಾರಸ್ವಾಮಿ, ಬೈಂದೂರಿನ ಸುಕುಮಾರ ಶೆಟ್ಟಿ, ಹಾವೇರಿಯ ನೆಹರೂ ಓಲೇಕಾರ್, ಮಾಯಕೊಂಡದ ಪ್ರೊ. ಲಿಂಗಣ್ಣ ಹಾಗೂ ಕಲಘಟಗಿಯ ಸಿ.ಎಂ. ನಿಂಬಣ್ಣ ನವರ್ ಟಿಕೆಟ್ ವಂಚಿತ ಹಾಲಿ ಶಾಸಕರು.

### ಹರಪನಹಳ್ಳಿ ಕ್ಷೇತ್ರಕ್ಕೆ ರೆಡ್ಡಿ



ಬಿಜೆಪಿ ಬಿಡುಗಡೆ ಮಾಡಿರುವ ಎರಡನೇ ಪಟ್ಟಿಯಲ್ಲಿ ಹರಪನಹಳ್ಳಿ ಕ್ಷೇತ್ರಕ್ಕೆ ಹಾಲಿ ಶಾಸಕ ಕರುಣಾಕರ ರೆಡ್ಡಿ ಅವರಿಗೆ ಟಿಕೆಟ್ ನೀಡಲಾಗಿದೆ.

# ಮತಪಟ್ಟಿಯಲ್ಲಿ ಲಕ್ಷಾಂತರ ಅಕ್ರಮ ಹೆಸರು

**ಚುನಾವಣಾ ಆಯೋಗಕ್ಕೆ ದೂರು ನೀಡಲು ಡಿಕೆಶಿ ನಿರ್ಧಾರ**

ಬೆಂಗಳೂರು, ಏ. 12 - ಚಿನ್ನ, ಹಣ, ಹಣ್ಣು, ಕುರಿ, ಮೇಕೆ, ಹಸು, ಚಪ್ಪಲಿ ಕದಿಯುವವರನ್ನು ನೋಡಿದ್ದೇವೆ. ಆದರೆ ಬಿಜೆಪಿ ಮತ ಕದಿಯುತ್ತದೆ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಬಿಜೆಪಿಯು ಖಾಸಗಿ ಸಂಸ್ಥೆ ಮೂಲಕ 8600 ನಕಲಿ ಬೂತ್ ಅಧಿಕಾರಿಗಳನ್ನು ನೇಮಿಸಿ ಅಕ್ರಮವಾಗಿ ಮತದಾರರ ಮಾಹಿತಿ ಸಂಗ್ರಹಿಸಿ, ಅಕ್ರಮವಾಗಿ ಮತದಾರರ ಹೆಸರನ್ನು ಮತದಾರ ಪಟ್ಟಿಯಿಂದ ಕೈಬಿಡಲಾಗಿತ್ತು. ಇಡೀ ರಾಜ್ಯದಲ್ಲಿ ಲಕ್ಷಾಂತರ ಹೆಸರುಗಳನ್ನು ಅಕ್ರಮವಾಗಿ ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದ್ದು, ಆದರೆ ಚುನಾವಣಾ ಆಯೋಗ ಕೇವಲ 3 ಕ್ಷೇತ್ರಗಳಲ್ಲಿ ಮಾತ್ರ ಗಮನಹರಿಸಿತ್ತು ಎಂದು ಆರೋಪಿಸಿದರು.

ಬಿಜೆಪಿಯವರಿಂದ ಪಟ್ಟಿ ಪಡೆದು ಹೆಚ್ಚುವರಿ ಮತ ಸೇರಿಸಲು ಚುನಾವಣಾ ಆಯೋಗದ ಕಣ್ಣು ಮುಚ್ಚಿಸಿ ಅಕ್ರಮ ಮಾಡಲಾಗುತ್ತಿದೆ. ಮಹದೇವಪುರ ಕ್ಷೇತ್ರದಲ್ಲಿ ಒಂದು ಮತವನ್ನು 2-3 ಕಡೆ ಸೇರಿಸಲಾಗಿದೆ. ಒಂದೇ ಹೆಸರು, ತಂದೆ ಹೆಸರು ಎಲ್ಲಾ ಒಂದೇ ಆಗಿದ್ದು, ಮತದದಾರರ ಫೋಟೋ ಮಾತ್ರ ಬೇರೆ ಬೇರೆ. ನಮ್ಮ ಬಳಿ 42,222 ಅಕ್ರಮ ಹೆಸರು ಸೇರಿಸಿರುವ ದಾಖಲೆ ಇವೆ. ಚುನಾವಣಾ ಆಯೋಗದ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ. ಫಾರಂ 6,7, 8 ಯಾವುದೂ ಇಲ್ಲದೇ ಈ ಹೆಸರು ಸೇರಿಸಲಾಗಿದೆ. ಚುನಾವಣಾಧಿಕಾರಿಗಳು ಹೊಸ ಮತದಾರರ ಸೇರ್ಪಡೆ ಅಭಿಯಾನದ ಹೆಸರಲ್ಲಿ ಈ ಅಕ್ರಮ ಮಾಡಿದ್ದಾರೆ ಎಂದು ಆರೋಪಿಸಿದರು. ಚುನಾವಣಾ ಆಯೋಗಕ್ಕೆ ನಾವು ಮತ್ತೊಂದು ಅಧಿಕೃತ ದೂರು ನೀಡುತ್ತೇವೆ. ಆಯೋಗ ಕೂಡಲೇ ಎ ಆರ್ ಓ, ಬಿಎಲ್ ಓ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ಈ ಕ್ಷೇತ್ರದ ಮತದಾರರ ಪಟ್ಟಿ ಮತ್ತೊಮ್ಮೆ ಪರಿಷ್ಕರಣೆ ಆಗಬೇಕು. ಇದು ಸೂಕ್ಷ್ಮ ವಿಚಾರವಾಗಿದ್ದು, ನಕಲಿ ಅರ್ಜಿಗಳ ಮೂಲಕ ಈ ಅಕ್ರಮ ಮಾಡಲಾಗಿದೆ ಎಂದರು.

# ಬಿಜೆಪಿಯಲ್ಲಿ ಬಂಡಾಯದ ಬೇಗೆ

ಬೆಂಗಳೂರು, ಏ. 12 - ರಾಜ್ಯ ವಿಧಾನಸಭೆಗೆ ಆಡಳಿತಾರೂಢ ಬಿಜೆಪಿ ಮೊದಲ ಪಟ್ಟಿ ಪ್ರಕಟಿಸುತ್ತಿದ್ದಂತೆ ಬಂಡಾಯದ ಬೇಗುದಿ ಎದ್ದಿದೆ.

ಪಕ್ಷದ ಹಿರಿಯ ನಿಷ್ಠಾವಂತ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಸೇರಿದಂತೆ ಕೆಲವು ಹಿರಿಯ ನಾಯಕರು ಪಕ್ಷದ ವಿರುದ್ಧ ಬಂಡಾಯ ಎದ್ದು ಚುನಾವಣಾ ಕಣಕ್ಕಿಳಿಯಲು ಮುಂದಾಗಿದ್ದಾರೆ.

ಶೆಟ್ಟರ್ ಅವರ ಮನವೊಲಿಸಲು ವರಿಷ್ಠರು ದೆಹಲಿಗೆ ಕರೆಸಿಕೊಂಡು ಸಮಾಲೋಚನೆ ನಡೆಸಿದ್ದಾರೆ.

ಇದರ ನಡುವೆಯೇ ಜೆಡಿಎಸ್‌ನ ಹಿರಿಯ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಶೆಟ್ಟರ್ ಅವರನ್ನು ಸಂಪರ್ಕಿಸಿ, ಸಮಾಲೋಚನೆ ಮಾಡಿದ್ದಾರೆ.

ಈ ಮಧ್ಯೆ ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ್ ಸವದಿ ತಮ್ಮ ವಿಧಾನ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ, ಬಿಜೆಪಿ ತೊರೆದು, ಕಾಂಗ್ರೆಸ್ ಇಲ್ಲವೇ ಜೆಡಿಎಸ್ ಸೇರಲು ಮುಂದಾಗಿದ್ದಾರೆ.

ಇದೇ ರೀತಿ ಮಾಜಿ ಸಚಿವ ಆರ್. ಶಂಕರ್ ತಮ್ಮ ವಿಧಾನಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ರಾಣೇಬೇನ್ನೂರು ಕ್ಷೇತ್ರದಿಂದ ಬಿಜೆಪಿಯ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ಮುಂದಾಗಿದ್ದಾರೆ.

ಇದೇ ಮಾದರಿಯಲ್ಲಿ ಸುಮಾರು 36 ವಿಧಾನಸಭಾ ಕ್ಷೇತ್ರಗಳಲ್ಲಿ ಹಾಲಿ ಶಾಸಕರು ಇಲ್ಲವೇ ಪಕ್ಷದ ಮುಖಂ ಡರು ಬಂಡಾಯ ಎದ್ದು ಕಣಕ್ಕಿಳಿಯಲು ಮುಂದಾಗಿದ್ದಾರೆ. ಬಿಜೆಪಿಯಲ್ಲಿ ಬಂಡಾಯ ಎದ್ದಿರುವ ಪ್ರಮುಖರನ್ನು ಸೆಳೆದುಕೊಳ್ಳಲು ಕಾಂಗ್ರೆಸ್ ಹಾಗೂ ಜೆಡಿಎಸ್ ಇಡೀ ದಿನ ಕಸರತ್ತು ನಡೆಸಿವೆ.

## ಸದಸ್ಯತ್ವಕ್ಕೆ ಸವದಿ ರಾಜೀನಾಮೆ



ಬೆಳಗಾವಿ, ಏ. 12 - ಮುಂಬರುವ ವಿಧಾನಸಭಾ ಚುನಾವಣೆಗೆ ಟಿಕೆಟ್ ನಿರಾ ಕರಿಸಿರುವ ಹಿನ್ನೆಲೆಯಲ್ಲಿ ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದಾಗಿ ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ್ ಸವದಿ ಹೇಳಿದ್ದಾರೆ. ಬೆಳಗಾವಿಯ ಅಥಣಿ ಕ್ಷೇತ್ರದಲ್ಲಿ ಹಾಲಿ ಶಾಸಕ ಮಹೇಶ್ ಕುಮಟಳ್ಳಿ ಅವರಿಗೆ ಬಿಜೆಪಿ ಟಿಕೆಟ್ ನೀಡಿದೆ. ಈ ಹಿಂದೆ ಸವದಿ (2ನೇ ಪುಟಕ್ಕೆ)

## ಪರಿಷತ್‌ಗೆ ಶಂಕರ್ ರಾಜೀನಾಮೆ



ಬೆಂಗಳೂರು, ಏ. 12 – ಪರಿಷತ್ ಸದಸ್ಯ ಆರ್. ಶಂಕರ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ವಿಧಾನಸಭಾ ಚುನಾವಣೆಗೆ ಬಿಜೆಪಿ ಟಿಕೆಟ್ ನೀಡದ ಹಿನ್ನೆಲೆಯಲ್ಲಿ ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಪರಿಷತ್ ಅಧ್ಯಕ್ಷ ಬಸವರಾಜ ಹೊರಟ್ಟಿ ಭೇಟಿ ಮಾಡಿದ ಶಂಕರ್, ಕೈಬರಹದ ರಾಜೀನಾಮೆ ಪತ್ರ ನೀಡಿದ್ದಾರೆ. ರಾಣೇಬೆನ್ನೂರು ಕ್ಷೇತ್ರದಿಂದ (3ನೇ ಪುಟಕ್ಕೆ)

## ಅಂಗಾರ ರಾಜಕೀಯ ನಿವೃತ್ತಿ



ಮಂಗಳೂರು, ಏ. 12 - ಮುಂಬ ರುವ ವಿಧಾನಸಭಾ ಚುನಾವಣೆಗೆ ಟಿಕೆಟ್ ನಿರಾಕರಿಸಿರುವ ಹಿನ್ನೆಲೆಯಲ್ಲಿ ಆರು ಬಾರಿ ಶಾಸಕರಾಗಿದ್ದ ಸಚಿವ ಎಸ್. ಅಂಗಾರ ಅವರು ರಾಜಕೀಯ ನಿವೃತ್ತಿ ಘೋಷಿಸಿದ್ದಾರೆ. ಅವರು ದಕ್ಷಿಣ ಕನ್ನಡದ ಸುಳ್ಯ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು. ಟಿಕೆಟ್ ನಿರಾಕರಣೆಯಿಂದ ಅಸಮಾಧಾನ ಗೊಂಡಿದ್ದ ಅವರು, ಪಕ್ಷಕ್ಕಾಗಿ ಶ್ರದ್ಧೆಯಿಂದ ದುಡಿದ ವರನ್ನು ಈ ರೀತಿ ನಡೆಸಿಕೊಳ್ಳಬಾರದು ಎಂದಿದ್ದಾರೆ. (3ನೇ ಪುಟಕ್ಕೆ)

## ಕೃಷಿ ಸಹಕಾರ ಸಂಘಗಳಿಗೆ ಪೆಟ್ರೋಲ್ ಪಂಪ್

ನವದೆಹಲಿ, ಏ. 12 – ಪ್ರಸಕ್ತ ಸಗಟು ಪೆಟ್ರೋಲ್ ಹಾಗೂ ಡೀಸೆಲ್ ಡೀಲರ್‌ಶಿಪ್ ಅನುಮತಿ ಹೊಂದಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಪಿ.ಎ.ಸಿ.ಎಸ್.), ಸಗಟು ಮಾರಾಟವನ್ನು ಚಿಲ್ಲರೆ ಮಾರಾಟ ಘಟಕಗಳಾಗಿ ಪರಿವರ್ತಿಸಲು ಒಂದು ಬಾರಿಯ ಅವಕಾಶ ನೀಡಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಹೊಸ ಪೆಟ್ರೋಲ್ ಬಂಕ್‌ಗಳಿಗೆ ಅನುಮತಿ ನೀಡುವಾಗ ಪಿ.ಎ.ಸಿ.ಗಳಿಗೆ ಆದ್ಯತೆ ನೀಡಲಾಗುವುದು. ಇವುಗಳಿಗೆ ಅಡುಗೆ ಅನಿಲದ ಏಜೆನ್ಸಿ ಸಹ ನೀಡಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಸಹಕಾರ ಸಚಿವ ಅಮಿತ್ ಷಾ ಅವರು ಪೆಟ್ರೋಲಿಯಂ ಸಚಿವ ಹರ್‌ದೀಪ್ ಸಿಂಗ್ ಪುರಿ ಜೊತೆ ಚರ್ಚೆ ನಡೆಸಿದ ನಂತರ ಈ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ.

## ಹೈಕಮಾಂಡ್ ಭೇಟಿ ಮಾಡಿದ ಶೆಟ್ಟರ್ : ಟಿಕೆಟ್ ನೀಡುವ ಸಾಧ್ಯತೆ

ನವದೆಹಲಿ, ಏ. 12 – ಬಿಜೆಪಿ ಹಿರಿಯ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರು ಹೈಕಮಾಂಡ್ ಭೇಟಿ ಮಾಡಿದ್ದು, ಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸುವುದಾಗಿ ಹೇಳಿದ್ದಾರೆ. ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾರನ್ನು ಬುಧವಾರ ಭೇಟಿ ಮಾಡಿರುವ ಅವರು, ಟಿಕೆಟ್ ನಿರಾಕರಿಸಿರುವ ಬಗ್ಗೆ ನೇರವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಭೇಟಿ ನಂತರ ಪತ್ರಕರ್ತರೊಂದಿಗೆ ಮಾತನಾಡಿರುವ ಶೆಟ್ಟರ್, ಇನ್ನೊಂದು ಅವಕಾಶ ನೀಡುವಂತೆ ಕೇಳಿದ್ದೇನೆ. ನಡ್ಡಾರಿಗೆ ಎಲ್ಲವನ್ನೂ ವಿವರಿಸಿದ್ದೇನೆ. ಈ ಬಗ್ಗೆ ಇತರರ ಜೊತೆ ಚರ್ಚಿಸಿ ನಿರ್ಧರಿಸುವುದಾಗಿ ಅವರು ಹೇಳಿದ್ದಾರೆ ಎಂದರು.

ಭೇಟಿಯ ವೇಳೆ ಶೆಟ್ಟರ್ ಜೊತೆ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರೂ ಇದ್ದರು. ಶೆಟ್ಟರ್ ಅವರಿಗೆ ಟಿಕೆಟ್ ನೀಡುವ ಸಾಧ್ಯತೆಗಳಿವೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

## ಹಣದುಬ್ಬರ 15 ತಿಂಗಳಲ್ಲೇ ಕಡಿಮೆ ಹಂತಕ್ಕೆ

ನವದೆಹಲಿ, ಏ. 12 – ಕಳೆದ ಮಾರ್ಚ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ 15 ತಿಂಗಳಲ್ಲೇ ಅತಿ ಕಡಿಮೆ ಶೇ.5.66ಕ್ಕೆ ತಲುಪಿದೆ. ಇದು ರಿಸರ್ವ್ ಬ್ಯಾಂಕ್‌ನ ಅಪೇಕ್ಷಿತ ಮಟ್ಟವಾದ ಶೇ.6ರ ಹತ್ತಿರದಲ್ಲಿದೆ.

ಚಿಲ್ಲರೆ ಹಣದುಬ್ಬರ ಫೆಬ್ರವರಿಯಲ್ಲಿ ಶೇ.6.44ರಷ್ಟಿತ್ತು. ವರ್ಷದ ಹಿಂದೆ ಇದೇ ಅವಧಿಯಲ್ಲಿ ಚಿಲ್ಲರೆ ಹಣದುಬ್ಬರ ಶೇ.6.95ರಷ್ಟಿತ್ತು. ಈ ಹಿಂದೆ ಡಿಸೆಂಬರ್ 2021ರಲ್ಲಿ ಹಣದುಬ್ಬರ ಶೇ.5.66ರಷ್ಟಿತ್ತು.

## ಹದಡಿ ಗ್ರಾಮದ ಶ್ರೀಮತಿ ದೇವೀರಮ್ಮ ನಿಧನ



ದಾವಣಗೆರೆ ತಾಲ್ಲೂಕಿನ ಹದಡಿ ಗ್ರಾಮದ ದಿ|| ಸುಂಕದಾರ್ ಮಹಾದೇವಪ್ಪನವರ ಧರ್ಮಪತ್ನಿ **ಶ್ರೀಮತಿ ದೇವೀರಮ್ಮ** (77 ವರ್ಷ) ಅವರು, ದಿನಾಂಕ 12-04-2023ರ ಬುಧವಾರ ರಾತ್ರಿ 8 ಗಂಟೆಗೆ ನಿಧನರಾದರು.

ಮೂವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13-04-2023ರ ಗುರುವಾರ ಮಧ್ಯಾಹ್ನ 2 ಗಂಟೆಗೆ ದಾವಣಗೆರೆ ತಾಲ್ಲೂಕು ಹದಡಿ ಗ್ರಾಮದಲ್ಲಿರುವ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು :
- ಎಸ್. ಚಂದ್ರಪ್ಪ, ಹದಡಿ
- ಎಂ. ಸುರೇಶ್, ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ಬೆಂಗಳೂರು.
- ಎಸ್. ಶಿವಮೂರ್ತಿ, ಹದಡಿ

ಮತ್ತು ಸುಂಕದಾರ್ ವಂಶಸ್ಥರು, ಹದಡಿ ಹಾಗೂ ಬಂಧು-ಮಿತ್ರರು.

# ರಾಣೇಬೆನ್ನೂರು : ಹೆಳವರು, ಕೂಲಿ ಕಾರ್ಮಿಕರಲ್ಲಿ ಮತದಾನದ ಜಾಗೃತಿ ಅವಶ್ಯ



ರಾಣೇಬೆನ್ನೂರು, ಏ. 12- ಸಾವಿರಾರು ಸಂಖ್ಯೆಯಲ್ಲಿ ಗುಳೇ (ವಲಸೆ) ಬಂದಿರುವ ಹೆಳವರು ಮತ್ತು ಕೂಲಿಗಾಗಿ ವಿವಿಧ ಗ್ರಾಮಗಳಲ್ಲಿ ಬಂದು ಬಿಡಾರ ಹೂಡಿರುವ ಕುಟುಂಬಗಳನ್ನು ಪತ್ತೆ ಹಚ್ಚಿ ಅವರವರ ಜಿಲ್ಲೆಗಳಿಗೆ, ಊರುಗಳಿಗೆ ಕಳುಹಿಸಿಕೊಟ್ಟು, ಆಯಾ ಮತಗಟ್ಟೆಯಲ್ಲಿ ಮತದಾನದಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸುವಂತೆ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ರವೀಂದ್ರಗೌಡ ಎಫ್. ಪಾಟೀಲ್ ಒತ್ತಾಯಿಸಿದರು.

ರಾಣೇಬೆನ್ನೂರು ತಾಲ್ಲೂಕಿನ ಮುಷ್ಟೂರು, ಮಾಗೋಡ ಗ್ರಾಮಗಳಲ್ಲಿ ಹಲವಾರು ದಿನಗಳಿಂದ ಬಿಡಾರ ಹೂಡಿರುವ ನೂರಾರು ಹೆಳವ ಕುಟುಂಬಗಳೊಂದಿಗೆ ನಡೆದ ಮತದಾನ ಜಾಗೃತಿಯ ಸಂವಾದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಉಚಿತವಾಗಿ ಸರ್ಕಾರಿ ಬಸ್‌ಗಳಲ್ಲಿ ಅಥವಾ ಇತರೇ ವಾಹನಗಳಲ್ಲಿ ಹೆಳವರು ಮತ್ತು ಕೂಲಿ ಕಾರ್ಮಿಕರನ್ನು ಕಳುಹಿಸಿಕೊಡುವಂತಹ ಜವಾಬ್ದಾರಿ ಕೆಲಸಗಳನ್ನು ಕೂಡ ಆಯಾ ಜಿಲ್ಲಾ ಆಡಳಿತ ಜಿಲ್ಲಾಡಳಿತ, ಜಿಲ್ಲಾ ಮತ್ತು ತಾಲ್ಲೂಕು ಸ್ವಿಪ್ ಸಮಿತಿಯವರು ಮಾಡಬೇಕೆಂದು ಆಗ್ರಹಿಸಿದರು.

ಮತದಾರರಿಗೆ ಕೇವಲ ಮತದಾನ ಜಾಗೃತಿ, ಮತ ಯಂತ್ರಗಳ ಮಾಹಿತಿಗಷ್ಟೇ ಸೀಮಿತವಾಗದೇ ಜಗತ್ತಿನ ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಈ ಭಾರತದಲ್ಲಿ ಮತದಾನಕ್ಕಿರುವ ಮಹತ್ವವನ್ನು ಎತ್ತಿ ಹಿಡಿಯಬೇಕೆಂದು ಜಿಲ್ಲಾಡಳಿತ ಮತ್ತು ಚುನಾವಣಾ ಆಯೋಗಕ್ಕೆ ಆಗ್ರಹಿಸಿದರು.

ಇ.ವಿ.ಎಂ.ವಿ.ವಿ. ಪ್ಲಾಟ್‌ನಂತಹ ಮಿಷನ್‌ಗಳ ಬಗ್ಗೆ ಅರಿವೇ ಇಲ್ಲದ ಹೆಳವರಿಗೆ ಮತದಾನದ ಮಹತ್ವವನ್ನು ತಿಳಿಹೇಳಿ ಅವರಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್, ಜಿಲ್ಲಾ ಮತ್ತು ತಾಲ್ಲೂಕು ಸ್ವೀಪ್ ಸಮಿತಿ ಮತ್ತು ಚುನಾವಣಾ ಆಯೋಗಕ್ಕೆ ಇಂಥ ಗುಳೇ (ವಲಸೆ) ಬಂದಿರುವ ಮತದಾರರ ಬಗ್ಗೆ ಗಮನ ಹರಿಸುವಂತೆ ಒತ್ತಾಯಿಸಿದರು.

ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಯಲ್ಲಾಪುರ, ಹಳಿಯಾಳ ತಾಲೂಕುಗಳಿಂದ ಬಂದಿರುವ ಇಂತಹ ಅನೇಕರು ನಮ್ಮ ಗ್ರಾಮೀಣ ಭಾಗದಲ್ಲಿ ಬಿಡಾರ ಹೂಡಿದ್ದಾರೆ. ಇವರ ಬಗ್ಗೆ ಇದುವರೆಗೂ ಗಮನ ಹರಿಸಿ ಜಿಲ್ಲಾಡಳಿತಕ್ಕೆ ಮಾಹಿತಿ ನೀಡದೇ ಇರುವ ಅಧಿಕಾರಿಗಳ ಬೇಜವಾಬ್ದಾರಿಯನ್ನು ಪಾಟೀಲರು ಈ ಸಂದರ್ಭದಲ್ಲಿ ಖಂಡಿಸಿದರು.

# ಹಿಂದೆಂದೂ ಆಗದ ಕೆಲಸಗಳು ಬಿಜೆಪಿ ಆಡಳಿತದಲ್ಲಾಗಿವೆ

## ಕೊಕ್ಕನೂರು : ಬಿಜೆಪಿ ಎಸ್ಸಿ ಮೋರ್ಚಾ ಸಮಾವೇಶದಲ್ಲಿ ಹನಗವಾಡಿ ವೀರೇಶ್



ಮಲೇಬೆನ್ನೂರು, ಏ.12- ದೇಶದಲ್ಲಿ 75 ವರ್ಷಗಳಲ್ಲಿ ಆಗದ ಕೆಲಸಗಳು ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದಲ್ಲಾಗಿವೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಹೇಳಿದರು.

ಕೊಕ್ಕನೂರು ಗ್ರಾಮದಲ್ಲಿ ಇಂದು ಸಂಜೆ ಹಮ್ಮಿಕೊಂಡಿದ್ದ ಜಿಲ್ಲಾ ಬಿಜೆಪಿ ಎಸ್ಸಿ ಮೋರ್ಚಾ ಸಮಾವೇಶದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ದೇಶದಲ್ಲಿ ವಿದ್ಯುತ್ ಸಂಪರ್ಕ ಇಲ್ಲದೇ ಇದ್ದ ಎಸ್ಸಿ-ಎಸ್ಟಿ ಜನ ವಾಸಿಸುವ 10 ಸಾವಿರ ಹಳ್ಳಿಗಳಿಗೆ ಮೋದಿ ಅವರು ಪ್ರಧಾನಿ ಆದ ನಂತರ ವಿದ್ಯುತ್ ಸಂಪರ್ಕ ಕಲ್ಪಿಸಿಕೊಟ್ಟಿದ್ದಾರೆ.

ಎಸ್ಟಿ ಜನಾಂಗಕ್ಕೆ ಸೇರಿದ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಮಾಡುವ ಮೂಲಕ ಹೊಸ ಇತಿಹಾಸ ನಿರ್ಮಿಸಲಾಗಿದೆ. ಸಿದ್ದರಾಮಯ್ಯನವರು ಸಾಮಾಜಿಕ ನ್ಯಾಯ ನೀಡುವ ಕೆಲಸ ಮಾಡುವುದನ್ನು ಬಿಟ್ಟು 10 ಕೆ.ಜಿ ಅಕ್ಕಿ ಕೊಡುತ್ತೇನೆಂದು ಮಾತ್ರ ಹೇಳುತ್ತಾರೆ.

ಜನಕ್ಕೆ ಅಕ್ಕಿಗಿಂತ ಅಗತ್ಯ ಸೌಲಭ್ಯ ಒದಗಿಸುವ ಕೆಲಸ ಮಾಡಬೇಕಿದೆ ಎಂದು ವೀರೇಶ್ ಹೇಳಿದರು.

ನರೇಂದ್ರ ಮೋದಿ ಅವರಿಗೆ ಮತ್ತಷ್ಟು ಶಕ್ತಿ ತುಂಬಲು ಕರ್ನಾಟಕದಲ್ಲಿ ಬಿಜೆಪಿ 120 ಸ್ಥಾನಗಳನ್ನು ಗೆಲ್ಲಿಸಲು ಸಂಕಲ್ಪ ಮಾಡಲಾಗಿದೆ. ಹರಿಹರ ಕ್ಷೇತ್ರದಲ್ಲಿ ನಾನೂ ಆಕಾಂಕ್ಷಿಯಾಗಿದ್ದೆ. ಆದರೆ, ಪಕ್ಷದ ವರಿಷ್ಠರು ಹರೀಶ್ ಅವರಿಗೆ ಟಿಕೆಟ್ ನೀಡಿದ್ದಾರೆ. ಅವರ ತೀರ್ಮಾನವನ್ನು ಗೌರವಿಸುವ ಮೂಲಕ ಹರೀಶ್ ಅವರ ಗೆಲುವಿಗೆ ಶಕ್ತಿ ಮೀರಿ ಶ್ರಮಿಸುತ್ತೇನೆಂದು ವೀರೇಶ್ ಹೇಳಿದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿ, ನಾವು ಮೊದಲೇ ಹೇಳಿದ್ದಂತೆ ಬಿಜೆಪಿ ಟಿಕೆಟ್ ಘೋಷಣೆ ಮಾಡಿರುವ ಬಿ.ಪಿ.ಹರೀಶ್ ಅವರನ್ನು ಬಹುಮತದಿಂದ ಗೆಲ್ಲಿಸುತ್ತೇವೆ ಎಂದು ಪೂಜಾರ್ ಹೇಳಿದರು.

ಮಾಜಿ ಶಾಸಕ ಹಾಗೂ ಬಿಜೆಪಿ ಅಭ್ಯರ್ಥಿ ಬಿ.ಪಿ.ಹರೀಶ್ ಮಾತನಾಡಿ, ಬಿಜೆಪಿ ಸರ್ಕಾರ ಎಲ್ಲರ ಹೋರಾಟಗಳಿಗೆ ಮನ್ನಣೆ ನೀಡಿ, ಅವರ ಬೇಡಿಕೆಗಳನ್ನು ಈಡೇರಿಸಿದ್ದು, ಈ ಬಾರಿ ರಾಜ್ಯದಲ್ಲಿ ಬಿಜೆಪಿ ಅತಿ ಹೆಚ್ಚು ಸ್ಥಾನಗಳನ್ನು ಗೆಲ್ಲುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದರು.

ಬಿಜೆಪಿ ವರಿಷ್ಠರು ಈ ಬಾರಿಯೂ ನನಗೆ ಟಿಕೆಟ್ ಘೋಷಣೆ ಮಾಡಿರುವುದನ್ನು ಆಕಾಂಕ್ಷಿಗಳಾಗಿದ್ದ ಹನಗವಾಡಿ ವೀರೇಶ್ ಮತ್ತು ಚಂದ್ರಶೇಖರ್ ಪೂಜಾರ್ ಅವರು ಒಪ್ಪಿಕೊಂಡು ನನ್ನ ಗೆಲುವಿಗೆ ಶ್ರಮಿಸುವುದಾಗಿ ಹೇಳಿರುವುದು ನನಗೆ ಅಷ್ಟೇ ಅಲ್ಲದೇ, ಪಕ್ಷದ ಕಾರ್ಯಕರ್ತರಿಗೂ ಸಂತಸ ತಂದಿದೆ ಎಂದು ಹರೀಶ್ ಹೇಳಿದರು.

ರಾಜ್ಯ ಬಿಜೆಪಿ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಓಲೇಕಾರ್ ಅವರು ಸಮಾವೇಶವನ್ನು ಉದ್ಘಾಟಿಸಿದರು. ಜಿಲ್ಲಾ ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ಕೃಷ್ಣಕುಮಾರ್ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ಹರಿಹರ ಕ್ಷೇತ್ರದ ಪ್ರಭಾರಿ ಜೀವನಮೂರ್ತಿ, ಬಾತಿ ಚಂದ್ರಶೇಖರ್, ಕೆ.ಎನ್.ಹಳ್ಳಿ ಕುಬೇರಪ್ಪ, ಸಾಲಕಟ್ಟೆ ಸಿದ್ದಪ್ಪ, ಕೆ.ಬೇವಿನಹಳ್ಳಿ ಹಾಲೇಶ್, ಉಕ್ಕಡಗಾತ್ರಿ ಪ್ರಕಾಶ್, ನಂದಿಗುಡಿ ಶ್ರೀಕಾಂತ್, ಜಿಗಳಿ ಚಂದ್ರಪ್ಪ, ಹುಗ್ಗಿ ರಾಮಚಂದ್ರ, ಅಜಿತ್ ಸಾವಂತ್, ಐರಣಿ ಮಹೇಶ್ವರಪ್ಪ, ಆದಾಪುರ ವೀರೇಶ್, ಹುಗ್ಗಿ ಮಹಾಂತೇಶ್, ಐರಣಿ ಅಣ್ಣಪ್ಪ, ಕೂಸಗಟ್ಟಿ ಬಸವರಾಜ್, ಓ.ಬಿ. ನಿಂಗನಗೌಡ ಮತ್ತಿತರರು ವೇದಿಕೆಯಲ್ಲಿದ್ದರು.

# ಹರಿಹರ : 650 ಸಿಬ್ಬಂದಿಗಳಿಗೆ ಚುನಾವಣಾ ತರಬೇತಿ



ಹರಿಹರ, ಏ.12-ವಿಧಾನಸಭಾ ಚುನಾವಣೆ ನಿಮಿತ್ತ ನಗರದ ಮರಿಯ ನಿವಾಸ ಶಾಲಾ ಆವರಣದಲ್ಲಿ ಎ.ಆರ್.ಓ. ಮತ್ತು ಎ.ಪಿ.ಆರ್. ಸೇರಿದಂತೆ ಇತರೆ ಸುಮಾರು 650 ಸಿಬ್ಬಂದಿಗಳಿಗೆ ಚುನಾವಣೆ ಕಾರ್ಯ ನಿರ್ವಹಣೆ ಬಗ್ಗೆ ತರಬೇತಿ ನೀಡಲಾಯಿತು. ಈ ಸಂದರ್ಭದಲ್ಲಿ ಚುನಾವಣಾ ಅಧಿಕಾರಿ ಉದಯಕುಮಾರ್ ಕುಂಬಾರ, ತಹಶೀಲ್ದಾರ್ ಪೃಥ್ವಿ ಸಾನಿಕಂ, ಪೌರಾಯುಕ್ತ ಐಗೂರು, ತಹಶೀಲ್ದಾರ್ ಶಶಿಧರಯ್ಯ ಮತ್ತಿತರರು ಉಪಸ್ಥಿತರಿದ್ದರು.

# ನಾಮಪತ್ರ ಸಲ್ಲಿಕೆ ಪ್ರಕ್ರಿಯೆ

(1ನೇ ಪುಟದಿಂದ) ನೇಮಿಸಲಾಗಿದೆ. ಚುನಾವಣಾ ಸಂದರ್ಭದಲ್ಲಿ ಅವ್ಯವಹಾರಗಳನ್ನು ತಡೆಗಟ್ಟಲು ರಾಜ್ಯಾದ್ಯಂತ ಪ್ರಮುಖ ಕೇಂದ್ರಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿದೆ.

ಚುನಾವಣಾ ವೇಳಾಪಟ್ಟಿಗೂ ಮುನ್ನವೇ ಜೆಡಿಎಸ್ 92 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿತ್ತು. ಆನಂತರ ಕಾಂಗ್ರೆಸ್ ಎರಡು ಹಂತಗಳಲ್ಲಿ 166 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಟಿಸಿದೆ.

ಆಡಳಿತಾರೂಢ ಬಿಜೆಪಿ ಅಧಿಸೂಚನೆ ಹೊರಡಿಸು ಎರಡು ದಿನಗಳ ಮುಂಚೆ 189 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದೆ.

# 869 ಮತಗಟ್ಟೆಗಳ ಮತದಾನದ ನೇರ ಪ್ರಸಾರ : ಜಿಲ್ಲಾಧಿಕಾರಿ ಕಾಪಶಿ

(1ನೇ ಪುಟದಿಂದ) ನೀಡಲಾಗುವುದು ಎಂದು ಹೇಳಿದರು. ಈವರೆಗೆ 55,039 ಮತದಾರರ ಪಿ.ವಿ.ಸಿ. ಗುರುತಿನ ಚೀಟಿಗಳನ್ನು ವಿತರಿಸಲಾಗಿದೆ. ಇನ್ನೂ 11,776 ಚೀಟಿಗಳನ್ನು ಮುದ್ರಿಸಲಾಗುತ್ತಿದ್ದು, ಏ.25ರ ಒಳಗೆ ವಿತರಿಸಲಾಗುವುದು ಎಂದು ತಿಳಿಸಿದರು.

# ದೊಡ್ಡಬಾತಿಯಲ್ಲಿ ಮತದಾರರ ಜಾಗೃತಿ ಕಾರ್ಯಕ್ರಮ



ದಾವಣಗೆರೆ, ಏ.13- ದೊಡ್ಡಬಾತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮತದಾರ ಆಂದೋಲನ ಜಾಗೃತಿ ಕಾರ್ಯಕ್ರಮವು ಬುಧವಾರ ಸಂಜೆ ಕರ್ನಾಟಕ ಪಬ್ಲಿಕ್ ಶಾಲೆಯ ಮುಖ್ಯೋಪಾಧ್ಯಾಯರು, ಬಿಎಲ್‌ಓಗಳು, ಅಂಗನವಾಡಿ, ಆಶಾ ಕಾರ್ಯಕರ್ತರು, ಗ್ರಾ.ಪಂ.ನ ಅಭಿವೃದ್ಧಿ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರ ಸಮ್ಮುಖದಲ್ಲಿ ನಡೆಯಿತು.

# ನಗರದಲ್ಲಿ ಇಂದು ಚಿಂತನೆ, ಸಂವಾದ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಟ್ರಸ್ಟ್ ಕಚೇರಿಯಲ್ಲಿ ಇಂದು ಸಂಜೆ 6 ಗಂಟೆಗೆ ಬಸವಣ್ಣನ ಜಗ, ಜೀವ ಕಲ್ಯಾಣ ವಿಚಾರಗಳ ಕುರಿತು ಚಿಂತನೆ ಮತ್ತು ಸಂವಾದ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದಲ್ಲಿ ಚಿಂತಕ ಶಿವನಕೆರೆ ಬಸವಲಿಂಗಪ್ಪ, ಎಂ. ಗಂಗಾಧರಪ್ಪ, ಗುರುಮೂರ್ತಿ, ಪ್ರೊ.ಎಂ.ಬಸವರಾಜ್, ಡಾ.ನಾಗರಾಜ್ ಆಚಾರ್, ಕೆ.ಆರ್.ಸಿದ್ದಪ್ಪ, ಮಹಾಂತೇಶ್ ಅಗಡಿ, ಲಾಯರ್ ಸಿದ್ದಯ್ಯ, ಮಲ್ಲಾಬಾದಿ ಬಸವರಾಜ್ ಮತ್ತಿತರರು ಭಾಗವಹಿಸುವರು.

# ನಗರದಲ್ಲಿ ನಾಳೆ ಶ್ರೀ ವೀರಭದ್ರೇಶ್ವರ ಸ್ವಾಮಿ ಗುಗ್ಗಳ



ದಾವಣಗೆರೆ, ಏ.12- ನಗರದ ಶಾಮನೂರು ರಸ್ತೆಯಲ್ಲಿರುವ ಶ್ರೀ ಮಹಾಗಣಪತಿ ಮತ್ತು ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 14ರ ಶುಕ್ರವಾರ ಮುಂಜಾನೆ 5 ಗಂಟೆಗೆ ಶ್ರೀ ವೀರಭದ್ರೇಶ್ವರ ಸ್ವಾಮಿಗೆ ರುದ್ರಾಭಿಷೇಕ, 7ಕ್ಕೆ ಮಹಾರಾಜಪೇಟೆಯಿಂದ ಗುಗ್ಗಳ ಕಾರ್ಯಕ್ರಮ, ನಂತರ ಕೆಂಡದಾರ್ಚನೆ ದೇವಸ್ಥಾನದ ಆವರಣದಲ್ಲಿ ನೆರವೇರುವುದು. ಎಡೆಯೂರು ಕ್ಷೇತ್ರದ ಶ್ರೀ ರೇಣುಕಾ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು ಎಂದು ಸೇವಾ ಟ್ರಸ್ಟ್ ಕಮಿಟಿ ಪರವಾಗಿ ವೀರಯ್ಯ ಸ್ವಾಮಿ ತಿಳಿಸಿದರು.

# ಸದಸ್ಯತ್ವಕ್ಕೆ ಸವದಿ ರಾಜೀನಾಮೆ

(1ನೇ ಪುಟದಿಂದ) ಈ ಕ್ಷೇತ್ರವನ್ನು ಮೂರು ಬಾರಿ ಪ್ರತಿನಿಧಿಸಿದ್ದರು. ಆದರೆ, 2018ರಲ್ಲಿ ಸೋಲು ಕಂಡಿದ್ದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಸವದಿ, ಪಕ್ಷದ ಪ್ರಾಥಮಿಕ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರ್ಧರಿಸಿದ್ದೇನೆ ಎಂದು ಘೋಷಿಸಿದ್ದಾರೆ.

# 7 - 8ನೇ ವಾರ್ಡ್‌ನಲ್ಲಿ ಇಂದು ಎಸ್ಸೆಸ್ ಪ್ರಚಾರ

ನಗರ ಪಾಲಿಕೆಯ 7 ಮತ್ತು 8ನೇ ವಾರ್ಡ್‌ನ ವಿವಿಧ ಪ್ರದೇಶಗಳಲ್ಲಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ



ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಅವರ ಪ್ರಚಾರ ಕಾರ್ಯಕ್ರಮವು ಇಂದು ಬೆಳಿಗ್ಗೆ 10.30 ಕ್ಕೆ ಹೊಂಡದ ಸರ್ಕಲ್‌ನ ರಾಜ ವೀರ ಮದಕರಿ ನಾಯಕ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಹಾಗೂ ಗುಲಾಬ್ ಷಾ ವಲಿ ದರ್ಗಾಕ್ಕೆ ಪೂಜೆ ಸಲ್ಲಿಸಿ ಆರಂಭಗೊಳ್ಳಲಿದೆ.

ಮಹಾಪೌರ ಬಿ.ಹೆಚ್. ವಿನಾಯಕ, ಶ್ರೀಮತಿ ಲಕ್ಷ್ಮೀದೇವಿ ಬಿ.ವೀರಣ್ಣ, ಶ್ರೀಮತಿ ಹೆಚ್. ಗೌರಮ್ಮ ಎಸ್.ಎನ್. ಚಂದ್ರಪ್ಪ, ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಅವರುಗಳು ಪ್ರಚಾರದಲ್ಲಿ ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

# ಹರಿಹರ ಕ್ಷೇತ್ರದಲ್ಲಿ ಜೆಡಿಎಸ್‌ಗೆ ಹಿಂದೆಂದೂ ಕಾಣದಷ್ಟು ಬೆಂಬಲ

## ಮಲೇಬೆನ್ನೂರಿನ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಎಸ್. ಶಿವಶಂಕರ್ ಸಂತಸ



ಮಲೇಬೆನ್ನೂರು, ಏ.12- ಹರಿಹರ ಕ್ಷೇತ್ರದಲ್ಲಿ ಜೆಡಿಎಸ್‌ಗೆ ಹಿಂದೆಂದೂ ಕಾಣದಷ್ಟು ಜನ ಬೆಂಬಲ ವ್ಯಕ್ತವಾಗುತ್ತಿದ್ದು, ಜನರು ಸ್ವಯಂ ಪ್ರೇರಿತರಾಗಿ ನಮ್ಮೊಂದಿಗೆ ಕೈ ಜೋಡಿಸುತ್ತಿದ್ದಾರೆ ಎಂದು ಮಾಜಿ ಶಾಸಕ ಹಾಗೂ ಜೆಡಿಎಸ್ ಅಭ್ಯರ್ಥಿ ಹೆಚ್.ಎಸ್. ಶಿವಶಂಕರ್ ಸಂತಸ ವ್ಯಕ್ತಪಡಿಸಿದರು.

ಪಟ್ಟಣದ ವೀರಭದ್ರೇಶ್ವರ ರೈಸ್ ಮಿಲ್ ಆವರಣದಲ್ಲಿ ಇಂದು ಸಂಜೆ ಹಮ್ಮಿಕೊಂಡಿದ್ದ ಜೆಡಿಎಸ್ ಕಾರ್ಯಕರ್ತರ ಸಭೆಯ ನೇತೃತ್ವ ವಹಿಸಿ ಅವರು ಮಾತನಾಡಿದರು.

ನಾವು ಕಳೆದ 2 ತಿಂಗಳಿನಿಂದ ಕ್ಷೇತ್ರದಲ್ಲಿ ಪ್ರಚಾರ ಮಾಡುತ್ತಿದ್ದೇವೆ. ಈಗಾಗಲೇ ಶೇ. 70 ರಷ್ಟು ಮತ ಯಾಚನೆ ಕಾರ್ಯ ಮುಗಿದಿದ್ದು, ಉಳಿದ ಕೆಲಸವನ್ನು ಇದೇ ದಿನಾಂಕ 17 ರಂದು ನಾಮಪತ್ರ ಸಲ್ಲಿಸಿದ ನಂತರ ಮಾಡುತ್ತೇವೆ ಎಂದು ಅವರು ತಿಳಿಸಿದರು.

ಹರಿಹರ ಕ್ಷೇತ್ರದಲ್ಲಿ ಕಳೆದ 5 ವರ್ಷಗಳಲ್ಲಿ ಅಭಿವೃದ್ಧಿ ಶೂನ್ಯವಾಗಿದ್ದು, ಅಸಮರ್ಥ ಶಾಸಕರನ್ನು ಆಯ್ಕೆ ಮಾಡಿದ್ದಕ್ಕೆ ಜನ ಪಶ್ಚಾತ್ತಾಪ ಪಟ್ಟಿದ್ದಾರೆ.

ಈಗ ಬಿಜೆಪಿ ಟಿಕೆಟ್ ಪಡೆದಿರುವ ಬಿ.ಪಿ. ಹರೀಶ್ ಅವರು ತಮ್ಮದೇ ಸರ್ಕಾರವಿದ್ದರೂ ಭೈರನಪಾದ ಏತ ನೀರಾವರಿ ಯೋಜನೆ ಜಾರಿಗೆ ಅನುದಾನ ಬಿಡುಗಡೆ ಮಾಡಿಸದೆ ಅಧಿಕಾರಿಗಳ ವರ್ಗಾವಣೆಯಲ್ಲೇ ಕಾಲ ಕಳೆದರು. ಇಂತಹವರನ್ನು ಜನ ಇನ್ನೆಂದೂ ಬೆಂಬಲಿಸಬಾರದೆಂದು ಮನವಿ ಮಾಡಿದ ಶಿವಶಂಕರ್ ಅವರು ಕೊಟ್ಟ ಮಾತಿನಂತೆ ಅಧಿಕಾರಕ್ಕೆ ಬಂದ ತಿಂಗಳೊಳಗೆ ರೈತರ ಸಾಲ ಮನ್ನಾ ಮಾಡಿದ ಕುಮಾರಸ್ವಾಮಿ ಅವರನ್ನು ಮತ್ತೆ ಸಿಎಂ ಮಾಡಲು ರಾಜ್ಯದ ಜನ ನಿರ್ಧರಿಸಿದ್ದಾರೆ.

ಭ್ರಷ್ಟಾಚಾರ ಮಾಡುವ, ಸುಳ್ಳು ಹೇಳುವ ಡಬ್ಬಲ್ ಇಂಜಿನ್ ಸರ್ಕಾರದಿಂದ ಜನರಿಗೆ ಯಾವುದೇ ಪ್ರಯೋಜನವಾಗಿಲ್ಲ. ಸಿದ್ದರಾಮಯ್ಯ ಅವರಿಂದಾಗಿ ಸಮ್ಮಿಶ್ರ ಸರ್ಕಾರ ಪತನವಾಯಿತು. ಹಾಗಾಗಿ ಜನ ಬಿಜೆಪಿ-ಕಾಂಗ್ರೆಸ್ ಬಿಟ್ಟು ಜೆಡಿಎಸ್ ಬೆಂಬಲಿಸುವ ವಿಶ್ವಾಸ ನನಗಿದೆ ಎಂದು ಶಿವಶಂಕರ್ ಹೇಳಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಬಿ. ಚಿದಾನಂದಪ್ಪ, ಹರಿಹರ ನಗರಸಭೆ ಸದಸ್ಯ ಆರ್.ಸಿ. ಜಾವೀದ್, ಪುರಸಭೆ ಮಾಜಿ ಸದಸ್ಯರಾದ ಯುಸೂಫ್, ಜಿಯಾವುಲ್ಲಾ, ನಿವೃತ್ತ ಶಿಕ್ಷಕ ಗೋವಿಂದಪ್ಪ ಸಾವಜ್ಜಿ, ಆದಾಪುರ ವಿಜಯಕುಮಾರ್, ಮುಖಂಡ ಶೇರ್ ಅಲಿ ಮಾತನಾಡಿದರು.

ಸಿರಿಗೆರೆ ಪರಮೇಶ್ವರಗೌಡ, ಹಳ್ಳಿಹಾಳ್ ಶಾಂತನಗೌಡ, ಪುರಸಭೆ ಸದಸ್ಯ ಟಿ. ಹನುಮಂತಪ್ಪ, ಮಾಜಿ ಸದಸ್ಯ ಮಹಾಲಿಂಗಪ್ಪ, ಸೈಯದ್ ಖಾಲಿದ್, ಭಾಷಾ, ಹಬೀಬ್, ಸಿ. ಅಬ್ದುಲ್‌ಹಾದಿ, ಎಂ.ಆರ್. ಮಹಾದೇವಪ್ಪ, ಹೊಸಳ್ಳಿ ಕರಿಬಸಪ್ಪ, ಶ್ಯಾವಿಗಿ ಅನಿತಾ, ನಿಟ್ಟೂರು ಸಂಜೀವಮೂರ್ತಿ, ನಿವೃತ್ತ ಶಿಕ್ಷಕ ಹನುಮಂತಪ್ಪ ಮುದ್ದೇರ್ ಸೇರಿದಂತೆ, ಇನ್ನೂ ಅನೇಕರು ಭಾಗವಹಿಸಿದ್ದರು.

# ನಗರದಲ್ಲಿ ಇಂದು 'ನೃತ್ಯ ತರಂಗಿಣಿ' ಬೇಸಿಗೆ ಶಿಬಿರದ ಸಮಾರೋಪ

ಜಿಲ್ಲಾ ಶಿಶು ಕಲ್ಯಾಣ ಮಂಡಳಿ ವತಿಯಿಂದ ಹಮ್ಮಿಕೊಂಡಿದ್ದ 'ನೃತ್ಯ ತರಂಗಿಣಿ' ಬೇಸಿಗೆ ಶಿಬಿರದ (ಸಮೂಹ ನೃತ್ಯ) ಸಮಾರೋಪ ಸಮಾರಂಭ ಇಂದು ಸಂಜೆ 5.30 ಕ್ಕೆ ವನಿತಾ ಸಮಾಜದ ಆವರಣದಲ್ಲಿನ ಸತ್ಯಸಾಯಿ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಮಾಜಿ ಸಚಿವರೂ, ಜಿಲ್ಲಾ ಶಿಶು ಕಲ್ಯಾಣ ಮಂಡಳಿ ಗೌರವಾಧ್ಯಕ್ಷರಾದ ನಾಗಮ್ಮ ಕೇಶವಮೂರ್ತಿ ಅಧ್ಯಕ್ಷತೆ ವಹಿಸುವರು. ನೂಪುರ ಕಲಾ ಸಂಸ್ಥೆ ಸಂಸ್ಥಾಪಕ ನಿರ್ದೇಶಕಿ ಬಿ.ಎಸ್. ಬೃಂದಾ, ನೃತ್ಯ ನಿರ್ದೇಶಕ ಈ.ಎನ್. ರಾಹುಲ್ ಅತಿಥಿಗಳಾಗಿ ಆಗಮಿಸಲಿದ್ದಾರೆ.

## ಪವಾಡರಂಗವ್ವನಹಳ್ಳಿ ಚಂದ್ರನಾಯ್ಕ.ಡಿ ನಿಧನ



ದಾವಣಗೆರೆ ಭಗೀರಥ ಸರ್ಕಲ್, ಶಕ್ತಿನಗರ 5ನೇ ಕ್ರಾಸ್ ವಾಸಿ

**ಪವಾಡರಂಗವ್ವನಹಳ್ಳಿ ಚಂದ್ರನಾಯ್ಕ ಡಿ.**

ಇವರು ದಿನಾಂಕ 12.04.2023ರ ಬುಧವಾರ ಬೆಳಿಗ್ಗೆ 10.40 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.04.2023ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ ಪವಾಡರಂಗವ್ವನಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತರು :**

**ಸಿ. ಅನಿಲ್ ಕುಮಾರ್ ನಾಯ್ಕ**, ಜಿಲ್ಲಾ ಬಿಜೆಪಿ ಎಸ್ಸಿ ಮೋರ್ಚಾ ಕೋಶಾಧ್ಯಕ್ಷರು, ಯುವ ಮುಖಂಡರು, ಮಾಯಕೊಂಡ ವಿಧಾನಸಭಾ ಕ್ಷೇತ್ರ.

ಧರ್ಮಪತ್ನಿ : ಶ್ರೀಮತಿ ಪಾರ್ವತಿಬಾಯಿ ಚಂದ್ರನಾಯ್ಕ .ಡಿ

ಮಕ್ಕಳು : ಶ್ರೀ ಪದ್ಮ, ಶ್ರೀ ಅಂಬಾ ಪ್ರಸಾದ್ ರಾಥೋಡ್

ಶ್ರೀಮತಿ ಚೇತನ, ಶ್ರೀ ಸಿ. ಅನಿಲ್ ಕುಮಾರ್ ನಾಯ್ಕ

ಶ್ರೀಮತಿ ಶಶಿಕಲಾ, ಶ್ರೀ ಅರವಿಂದ್ ಕುಮಾರ್ ಸಿ.

ಶ್ರೀಮತಿ ದೀಪಾ, ಶ್ರೀ ರಾಜಕುಮಾರ್ ಪೂಜಾರ್

ಶ್ರೀಮತಿ ಆಶಾ, ಶ್ರೀ ಶಿವಕುಮಾರ್ ಹಾಗೂ

ಬಂಧುಗಳು ಮತ್ತು ಪವಾಡರಂಗವ್ವನಹಳ್ಳಿ ಗ್ರಾಮಸ್ಥರು.

ಮೊ : 98862 40025

# ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಬೇಸಿಗೆಯ ಹಿನ್ನೆಲೆಯಲ್ಲಿ ಸಾಮಾಜಿಕ ಸೇವಾ ಸಂಸ್ಥೆ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ದಾನಿಗಳ ನೆರವಿನೊಂದಿಗೆ 1 ತಿಂಗಳ ಪರ್ಯಂತ ಸಾರ್ವಜನಿಕರಿಗೆ ಉಚಿತ ಮಜ್ಜಿಗೆ ವಿತರಿಸುವ ಕಾರ್ಯಕ್ರಮವನ್ನು ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ಹಮ್ಮಿಕೊಳ್ಳ ಲಾಗಿದೆ. ನಿವೃತ್ತ ಅಭಿಯಂತರರಾದ ಎನ್. ರೇವಣಸಿದ್ದಪ್ಪ ಅವರು ಇಂದಿನ ಮಜ್ಜಿಗೆ ದಾನಿಗಳಾಗಿದ್ದಾರೆ ಎಂದು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ತಿಳಿಸಿದ್ದಾರೆ. ಕರುಣಾ ಜೀವ ಕಲ್ಯಾಣ ಟ್ರಸ್ಟಿನ ಸತ್ಕಾರ್ಯಗಳಾದ ಮಜ್ಜಿಗೆ, ಗಾಡಿ, ಸೈಕಲ್, ನೀರಿನ ಬಾನಿ ವಿತರಣೆ ಇತ್ಯಾದಿಗಳಿಗೆ ದಾನ ಮಾಡಲಿಚ್ಛಿಸುವವರು ಎಂ.ಬಿ. ಮಧುಸೂದನ್ (98806 -02121ಅಥವಾ 95380-24444) ಅವರನ್ನು ಸಂಪರ್ಕಿಸಬಹುದು.

## ಸಿ. ರಮೇಶ್ ಮಹೇಂದ್ರಕರ್ ನಿಧನ



ದಾವಣಗೆರೆ ಕೊಂಡಜ್ಜಿ ರಸ್ತೆ ವಿಜಯನಗರ ಬಡಾವಣೆ, 2ನೇ ಮೇನ್ 5ನೇ ಕ್ರಾಸ್ ವಾಸಿ

**ಸಿ. ರಮೇಶ್ ಮಹೇಂದ್ರಕರ್**

ಇವರು ದಿನಾಂಕ 12.4.2023ರ ಬುಧವಾರ ರಾತ್ರಿ 9.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 74 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಸಹೋದರ, ಸಹೋದರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.04.2023ರ ಗುರುವಾರ ಮಧ್ಯಾಹ್ನ 1 ಗಂಟೆಗೆ ನಗರದ ಪಿ.ಬಿ ರಸ್ತೆಯ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.

ದು:ಖತಪ್ತ ಕುಟುಂಬ ವರ್ಗ : ಮೊ : 74111 37863, 8792699661

# ಹೊನ್ನಾಳಿಯಲ್ಲಿ ಮತದಾನ ಜಾಗೃತಿ ಕಾರ್ಯಕ್ರಮ



ಹೊನ್ನಾಳಿ, ಏ.12- ತಾಲ್ಲೂಕು ಚುನಾವಣಾ ಆಯೋಗ ಹಾಗೂ ಹೊನ್ನಾಳಿ ಪುರಸಭೆ ವತಿಯಿಂದ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಸಂತೆ ಮೈದಾನದಲ್ಲಿ ಮತದಾನ ಜಾಗೃತಿ ಕಾರ್ಯಕ್ರಮವನ್ನು ಕಾರ್ಯನಿರ್ವಹಣಾಧಿಕಾರಿ ರಾಮಭೋವಿ, ತಹಶೀಲ್ದಾರ್ ಹಾಗೂ ಉಪ ಚುನಾವಣಾಧಿಕಾರಿ ತಿರುಪತಿ ಅವರ ಉಪಸ್ಥಿತಿಯಲ್ಲಿ ನಡೆಸಲಾಯಿತು. ಪುರಸಭೆ ಮುಖ್ಯಾಧಿಕಾರಿ ನಿರಂಜನಿ ಹೆಚ್ (ಪ್ರ), ಕಂದಾಯಾಧಿಕಾರಿ ಪಿ.ವಸಂತ, ಸಿಬ್ಬಂದಿಗಳಾದ ಸಿ. ಪರಮೇಶ್ವರನಾಯ್ಕ, ಬಿ.ಜಿ. ಹರ್ಷವರ್ಧನ, ಸಿ ಭಾಗ್ಯಮ್ಮ ಆಕಾಶ್, ಎನ್. ರಂಜಿತ, ಹೆಚ್.ಎಸ್. ಮಹಾಂತೇಶ್ ಮತ್ತಿತರರಿದ್ದರು.

## ದಾವಣಗೆರೆ ಶಾರದಮ್ಮ ನಿಧನ



ದಾವಣಗೆರೆ ದೊಡ್ಡಪೇಟೆ ವಾಸಿ ಯಾಗಿದ್ದ ಹೊನ್ನಾಳಿ ಕುಂಕೋದ ದಿ॥ ಲೋಕಪ್ಪನವರ ಧರ್ಮಪತ್ನಿ ಶ್ರೀಮತಿ ಶಾರದಮ್ಮನವರು (85) ದಿನಾಂಕ 12.4.2023 ಮಧ್ಯಾಹ್ನ 12.30ಕ್ಕೆ ದೈವಾಧೀನರಾಗಿದ್ದು, ಮೃತರು ಮಕ್ಕಳು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದು, ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.4.2023ರ ಗುರುವಾರ 10 ಗಂಟೆಗೆ ದಾವಣಗೆರೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದೆಂದು ಕುಟುಂಬದ ಬಂಧುಗಳು ತಿಳಿಸಿರುವರು.

# ಚುನಾವಣಾ ಅಕ್ರಮ: 46.01 ಲಕ್ಷ ರೂ.ನಗದು, 48 ಲಕ್ಷ ರೂ. ಮೌಲ್ಯದ ವಸ್ತುಗಳು ವಶ: ಡಿಸಿ ಕಾಪಶಿ

ದಾವಣಗೆರೆ, ಏ.12- ನೀತಿ ಸಂಹಿತೆ ಉಲ್ಲಂಘಿಸಿ ಸಾಗಿಸುತ್ತಿದ್ದ ನಗದು ಸೇರಿದಂತೆ ವಿವಿಧ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ಜಿಲ್ಲೆಯಾದ್ಯಂತ ವಿವಿಧ ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ಕೈಗೊಳ್ಳಲಾಗುತ್ತಿದ್ದು, ದಾಖಲೆ ಇಲ್ಲದೇ ಸಾಗಿಸುತ್ತಿದ್ದ ನಗದು, ಚಿನ್ನಾಭರಣ ಸೇರಿದಂತೆ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಏಪ್ರಿಲ್ 12 ರ ಬೆಳಗ್ಗೆ 9 ಗಂಟೆಗೆ ಒಂದೇ ದಿನದಲ್ಲಿ 7 ಪ್ರಕರಣ ದಾಖಲಿಸಲಾಗಿದೆ. ದಾಖಲೆಯಿಲ್ಲದೇ ಸಾಗಿಸುತ್ತಿದ್ದ 46.01 ಲಕ್ಷ ರೂ. ನಗದನ್ನು ವಶಪಡಿಸಿಕೊಳ್ಳಲಾಗಿದೆ. ಅದರಲ್ಲಿ 32.32 ಲಕ್ಷ ರೂ. ನಗದನ್ನು ಆದಾಯ ತೆರಿಗೆ ಇಲಾಖೆಗೆ ಹಸ್ತಾಂತರಿಸಲಾಗಿದೆ.

ಜಿಲ್ಲೆಯಾದ್ಯಂತ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ವಿವಿಧ ತಂಡಗಳನ್ನು ರಚಿಸಲಾಗಿದ್ದು, ಈಗಾಗಲೇ ಕಾರ್ಯಪ್ರವೃತ್ತವಾಗಿವೆ. ಒಟ್ಟು 21 ಫ್ಲೈಯಿಂಗ್ ಸ್ಕ್ವಾಡ್, 37 ಎಸ್‌ಎಸ್‌ಟಿ ತಂಡ ಮೂರು ಪಾಳಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. 9 ಅಬಕಾರಿ ತಂಡಗಳು ಸಹ ಜಿಲ್ಲೆಯಲ್ಲಿ ನಿಗಾವಹಿಸಿವೆ.

145 ಬಂಡಲ್ ಉಳ್ಳ ಪಾತ್ರೆಗಳು ಒಟ್ಟು ಮೌಲ್ಯ 9.26 ಲಕ್ಷ, 66.786 ಕೆಜಿ. ಬೆಳ್ಳಿ ಅಂದಾಜು ಮೌಲ್ಯ 39 ಲಕ್ಷ ರೂ. ಸೇರಿದಂತೆ 48 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

3.63 ಲಕ್ಷ ರೂ. ಮೌಲ್ಯದ 931.36 ಲೀ. ಮದ್ಯ ಹಾಗೂ 56.11 ಸಾವಿರ ರೂ. ಮೌಲ್ಯದ ಡ್ರಗ್ಸ್ ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

## 11.12 ಶತಕೋಟಿ ಡಾಲರ್ ಮೌಲ್ಯದ ಮೊಬೈಲ್ ರಫ್ತು

ನವದೆಹಲಿ, ಏ. 12 – ಭಾರತದ ಮೊಬೈಲ್ ರಫ್ತು ಮೌಲ್ಯ 11.12 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಇದರಲ್ಲಿ ಐಫೋನ್ ಉತ್ಪಾದಿಸುವ ಕಂಪನಿಯಾದ ಆಪಲ್ ಪಾಲು ಅರ್ಧದಷ್ಟಿದೆ ಎಂದು ಕೈಗಾರಿಕಾ ಒಕ್ಕೂಟವಾದ ಐ.ಸಿ.ಇ.ಎ. ತಿಳಿಸಿದೆ.

ಭಾರತದ ಮೊಬೈಲ್ ರಫ್ತು ಪ್ರಮಾಣ 2021-22ರಲ್ಲಿ 45 ಸಾವಿರ ಕೋಟಿ ರೂ. ಆಗಿತ್ತು. ಅದು 2022-23ರಲ್ಲಿ 90 ಸಾವಿರ ಕೋಟಿ ರೂ.ಗಳಿಗೆ ತಲುಪಿದೆ. ಇದರ ಮೌಲ್ಯ 11.12 ಶತಕೋಟಿ ಡಾಲರ್ ಆಗುತ್ತದೆ ಎಂದು ಇಂಡಿಯಾ ಸೆಲ್ಯುಲರ್ ಅಂಡ್ ಎಲೆಕ್ಟ್ರಾನಿಕ್ಸ್ ಅಸೋಸಿಯೇಷನ್ (ಐ.ಸಿ.ಇ.ಎ.) ತಿಳಿಸಿದೆ.

ದೊಡ್ಡ ಪ್ರಮಾಣದ ರಫ್ತಿಲ್ಲದೇ ಯಾವುದೇ ಆರ್ಥಿಕತೆ ಇಲ್ಲವೇ ಆರ್ಥಿಕ ವಲಯ ಜಾಗತಿಕ ಮಟ್ಟದಲ್ಲಿ ಬೆಳೆಯುವುದಿಲ್ಲ. ಮೊಬೈಲ್ ರಫ್ತು ಅಪಾರ ಪ್ರಮಾಣದಲ್ಲಿ ಏರುತ್ತಿದೆ. ಒಂದೇ ವರ್ಷದಲ್ಲಿ ರಫ್ತು ಶೇ.100ರಷ್ಟು ಹೆಚ್ಚಾಗಿದೆ ಎಂದು ಐ.ಸಿ.ಇ.ಎ. ಅಧ್ಯಕ್ಷ ಪಂಕಜ್ ಮೊಹಿಂದ್ರೂ ತಿಳಿಸಿದ್ದಾರೆ.

ಒಂದು ವರ್ಷದಲ್ಲಿ ಎಲೆಕ್ಟ್ರಾನಿಕ್ಸ್ ಉಪಕರಣಗಳ ರಫ್ತು ಶೇ.58ರಷ್ಟು ಹೆಚ್ಚಾಗಿ 1.85 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ ಎಂದವರು ಹೇಳಿದ್ದಾರೆ.

ಭಾರತದಿಂದ 10 ಶತಕೋಟಿ ಡಾಲರ್‌ಗಳ ಮೊಬೈಲ್ ಫೋನ್ ರಫ್ತು ಮಾಡಲು ಕೇಂದ್ರ ಸರ್ಕಾರ ಗುರಿ ಹೊಂದಿತ್ತು.

ಆಪಲ್ ಕಂಪನಿಯ ಐಫೋನ್‌ಗಳ ರಫ್ತು 5.5 ಶತಕೋಟಿ ಡಾಲರ್‌ಗಳಷ್ಟಿದೆ ಎಂದು ಉದ್ಯಮದ ಮೂಲಗಳು ತಿಳಿಸಿವೆ.

ಸ್ಯಾಮ್‌ಸಂಗ್ ಮೊಬೈಲ್ ಫೋನ್‌ಗಳ ರಫ್ತು ಮೌಲ್ಯ 36 ಸಾವಿರ ಕೋಟಿ ರೂ. ಆಗಿದೆ. ಇದು ಒಟ್ಟು ರಫ್ತಿನ ಶೇ.40ರಷ್ಟಾಗಿದೆ.

2025-26ರ ಸಾಲಿನಲ್ಲಿ 300 ಶತಕೋಟಿ ಡಾಲರ್ ಮೌಲ್ಯದ ಎಲೆಕ್ಟ್ರಾನಿಕ್ಸ್ ಉಪಕರಣಗಳ ರಫ್ತಿಗೆ ಕೇಂದ್ರ ಸರ್ಕಾರ ಗುರಿ ಹೊಂದಿದೆ. ಇದರಲ್ಲಿ 120 ಶತಕೋಟಿ ಡಾಲರ್ ರಫ್ತಿನಿಂದ ಪಡೆಯಲು ಉದ್ದೇಶಿಸಲಾಗಿದೆ. ಈ ಅವಧಿಯ ವೇಳೆಗೆ ಮೊಬೈಲ್ ಫೋನ್‌ಗಳ ರಫ್ತು ಪ್ರಮಾಣ 50 ಶತಕೋಟಿ ಡಾಲರ್‌ಗಳಿಗೆ ತಲುಪಬೇಕು ಎಂಬ ಗುರಿ ಇದೆ.

## 47ನೇ ವರ್ಷಕ್ಕೆ ಕಾಗಿನೆಲೆ ಶ್ರೀ ಪಾದಾರ್ಪಣೆ





ಮಲೇಬೆನ್ನೂರು, ಏ. 12 - ಕಾಗಿನೆಲೆ ಕನಕಗುರು ಪೀಠದ ಜಗದ್ಗುರು ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಸೋಮವಾರ ತಮ್ಮ ಸಾರ್ಥಕ ಬದುಕಿನ 46 ವಸಂತಗಳನ್ನು ಪೂರೈಸಿ 47ನೇ ವರ್ಷಕ್ಕೆ ಕಾಲಿಟ್ಟರು.

ಬೆಳ್ಳೂಡಿ ಶಾಖಾ ಮಠದಲ್ಲಿ ಶ್ರೀಗಳನ್ನು ಭೇಟಿ ಮಾಡಿದ ಭಕ್ತರು, ಹುಟ್ಟು ಹಬ್ಬದ ಶುಭಾಶಯ ಕೋರಿ ಶ್ರೀಗಳ ಆಶೀರ್ವಾದ ಪಡೆದು ಕೊಂಡರು.

ಭಕ್ತರು ಅಭಿಮಾನದಿಂದ ತಂದ ಎಲ್ಲಾ ಕೇಕ್‌ಗಳನ್ನು ಕಟ್ ಮಾಡಿದ ಶ್ರೀಗಳು ಭಕ್ತರಿಗೆ ಕೇಕ್ ತಿನ್ನಿಸಿ ಖುಷಿ ಪಟ್ಟರು.

ಕಾಗಿನೆಲೆ ಕನಕ ಗುರು ಪೀಠದ ಹೊಸದುರ್ಗ ಶಾಖಾ ಮಠದ ಶ್ರೀ ಈಶ್ವರಾನಂದ ಪುರಿ ಸ್ವಾಮೀಜಿ, ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಕುಂಚಿಟಿಗ ಗುರು ಪೀಠದ ಶ್ರೀ ಶಾಂತವೀರ ಸ್ವಾಮೀಜಿ, ಹಡಪದ ಅಪ್ಪಣ್ಣ ಗುರುಪೀಠ ಶ್ರೀಗಳು ಮಠಕ್ಕೆ ಆಗಮಿಸಿ ಶ್ರೀಗಳಿಗೆ ಜನ್ಮದಿನದ ಶುಭಾಶಯ ಕೋರಿದರು.

ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ, ಶಾಸಕರಾದ ಎಸ್. ರಾಮಪ್ಪ, ಪಿ.ಟಿ. ಪರಮೇಶ್ವರ ನಾಯ್ಕ್, ಅರುಣ್ ಕುಮಾರ ಪೂಜಾರ್, ಪ್ರಕಾಶ್ ಕೋಳಿವಾಡ, ಮಾಜಿ ಸಚಿವ ಬಿ.ಬಿ. ಚಿಮ್ಮನಕಟ್ಟಿ, ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಜಿ.ಪಂ. ಮಾಜಿ ಸದಸ್ಯರಾದ ಎಂ. ನಾಗೇಂದ್ರಪ್ಪ, ಎಂ.ಆರ್. ಮಹೇಶ್, ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಚಂದ್ರಶೇಖರ್ ಪೂಜಾರ್, ಸಿ.ಎನ್. ಹುಲುಗೇಶ್, ಕುಂಬಳೂರು ವಿರುಪಾಕ್ಷಪ್ಪ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಕೆಪಿಸಿಸಿ ಸದಸ್ಯ ಬಿ. ರೇವಣಸಿದ್ದಪ್ಪ, ಕೆ.ಪಿ. ಗಂಗಾಧರ, ಐರಣಿ ಅಣ್ಣಪ್ಪ, ಹೊನ್ನಾಳಿ ರಂಜಿತ್, ಎಳೆಹೊಳೆ ಕುಮಾರ್, ಡಿ.ಕೆ. ಸಿದ್ದನಗೌಡ, ಪಿ.ಎಸ್. ನಿಜಲಿಂಗಪ್ಪ, ಎಸ್.ಎಂ. ವಸಂತ್, ಮಲ್ಲನಾಯ್ಕನಹಳ್ಳಿ ಶೇಖರಪ್ಪ, ಚಂದ್ರಗುಪ್ತ ಮೌರ್ಯ ಶಾಲೆ ಕಾರ್ಯದರ್ಶಿ ಎಸ್. ನಿಂಗಪ್ಪ, ಪ್ರಾಂಶುಪಾಲರಾದ ಶ್ರೀಮತಿ ಶೃತಿ ಇನಾಂದಾರ್ ಕಾಗಿನೆಲೆ ಕಾಲೇಜಿನ ಪ್ರಾಚಾರ್ಯ ಬೀರೇಶ್ ಸೇರಿದಂತೆ ಇನ್ನೂ ಅನೇಕರು ಮಠಕ್ಕೆ ಆಗಮಿಸಿ ಶ್ರೀಗಳಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು. ಮಾಜಿ ಸಚಿವರಾದ ಹೆಚ್.ಕೆ. ಪಾಟೀಲ್, ಎಸ್.ಎಸ್. ಮಲ್ಲಿಕಾರ್ಜುನ್ ಸೇರಿದಂತೆ ಇನ್ನೂ ಅನೇಕರು ಫೋನ್ ಮೂಲಕ ಶ್ರೀಗಳಿಗೆ ಶುಭಾಷಯ ಕೋರಿದರು.

ವಿಧಾನ ಪರಿಷತ್ ಸದಸ್ಯ ಆರ್. ಶಂಕರ್ ಅವರು 10 ಕುರಿ ಮರಿಗಳನ್ನು ಶ್ರೀಗಳಿಗೆ ನೀಡುವ ಮೂಲಕ ಶುಭಾಶಯ ಕೋರಿ ಗಮನ ಸೆಳೆದರು.

ಹರಿಹರ ಕ್ಷೇತ್ರದ ಕಾಂಗ್ರೆಸ್ ಟಿಕೆಟ್‌ಗಾಗಿ ತೀವ್ರ ಪೈಪೋಟಿ ನಡೆಸುತ್ತಿರುವ ಶಾಸಕ ಎಸ್. ರಾಮಪ್ಪ ಮತ್ತು ನಂದಿಗಾವಿ ಶ್ರೀನಿವಾಸ್ ಒಟ್ಟಾಗಿ ಶ್ರೀಗಳನ್ನು ಸನ್ಮಾನಿಸಿ, ಕೇಕ್ ತಿನ್ನಿಸುವ ಮೂಲಕ ಅಚ್ಚರಿ ಮೂಡಿಸಿದರು.

## ಬಿಜೆಪಿಯಿಂದ 2ನೇ ಪಟ್ಟಿ ಬಿಡುಗಡೆ 23 ಕ್ಷೇತ್ರಗಳ ಅಭ್ಯರ್ಥಿಗಳು ಪ್ರಕಟ

ಬೆಂಗಳೂರು, ಏ. 12 – ವಿಧಾನಸಭಾ ಚುನಾವಣೆಗಾಗಿ ಬಿಜೆಪಿ ಇಂದು ರಾತ್ರಿ ಬಿಡುಗಡೆ ಮಾಡಿರುವ 23 ಅಭ್ಯರ್ಥಿಗಳಿರುವ ಎರಡನೇ ಪಟ್ಟಿಯ ವಿವರ

| |
|---|
| ದೇವರ ಹಿಪ್ಪರಗಿ - **ಸೋಮನಗೌಡ ಪಾಟೀಲ್** |
| ಬಸವನ ಬಾಗೇವಾಡಿ - **ಎಸ್.ಕೆ. ಬೆಳ್ಳುಬ್ಬಿ** |
| ಇಂಡಿ - **ಕಾಸಾಗೌಡ ಬಿರಾದಾರ್** |
| ಗುರುಮಿಠಕಲ್ - **ಲಲಿತಾ ಅನಾಪುರ್** |
| ಬೀದರ್ - **ಈಶ್ವರ್ ಸಿಂಗ್ ಠಾಕೂರ್** |
| ಬಾಲ್ಕಿ- **ಪ್ರಕಾಶ್ ಖಂಡ್ರೆ** |
| ಗಂಗಾವತಿ - **ಪರಣ್ಣ ಮುನವಳ್ಳಿ** |
| ಕಲಘಟಗಿ - **ನಾಗರಾಜ್ ಛಬ್ಬಿ** |
| ಹಾನಗಲ್ - **ಶಿವರಾಜ್ ಸಜ್ಜನರ್** |
| ಹಾವೇರಿ (ಎಸ್‌ಸಿ) - **ಗವಿಸಿದ್ದಪ್ಪ ದ್ಯಾಮಣ್ಣವರ್** |
| ಹರಪನಹಳ್ಳಿ - **ಕರುಣಾಕರ ರೆಡ್ಡಿ** |
| ದಾವಣಗೆರೆ ಉತ್ತರ - **ಲೋಕಿಕೆರೆ ನಾಗರಾಜ್** |
| ದಾವಣಗೆರೆ ದಕ್ಷಿಣ – **ಬಿ.ಜಿ. ಅಜಯ್ ಕುಮಾರ್** |
| ಮಾಯಕೊಂಡ (ಎಸ್‌ಸಿ) - **ಬಸವರಾಜ ನಾಯ್ಕ್** |
| ಚನ್ನಗಿರಿ - **ಶಿವಕುಮಾರ್** |
| ಬೈಂದೂರು - **ಗುರುರಾಜ್ ಗಂಟಿಹೊಳೆ** |
| ಮೂಡಿಗೆರೆ (ಎಸ್‌ಸಿ) - **ದೀಪಕ್ ದೊಡ್ಡಯ್ಯ** |
| ಗುಬ್ಬಿ - **ಎಸ್.ಡಿ. ದಿಲೀಪ್ ಕುಮಾರ್** |
| ಶಿಡ್ಲಘಟ್ಟ- **ರಾಮಚಂದ್ರ ಗೌಡ** |
| ಕೋಲಾರ ಗೋಲ್ಡ್ ಫೀಲ್ಡ್ (ಎಸ್‌ಸಿ) - **ಅಶ್ವಿನಿ ಸಂಪಂಗಿ** |
| ಶ್ರವಣ ಬೆಳಗೊಳ - **ಚಿದಾನಂದ** |
| ಅರಸೀಕರೆ - **ಜಿ.ವಿ. ಬಸವರಾಜ್** |
| ಹೆಗ್ಗಡದೇವನಕೋಟೆ (ಎಸ್‌ಟಿ) - **ಕೃಷ್ಣ ನಾಯ್ಕ್** |

## ಇಫ್ತಿಯಾರ್ ಕೂಟದಲ್ಲಿ ಪ್ರಭಾ ಮಲ್ಲಿಕಾರ್ಜುನ್



### ಮಹಿಳೆಯರೊಂದಿಗೆ ಸಾಧಕ-ಬಾಧಕಗಳ ಚರ್ಚೆ

ದಾವಣಗೆರೆ, ಏ.12- ನಗರದ 12ನೇ ವಾರ್ಡ್‌ನ ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಉರುಬಾನು ಮತ್ತು ಮಾಜಿ ಸದಸ್ಯ ಶಫೀಕ್ ಪಂಡಿತ್ ಅವರ ನೇತೃತ್ವದಲ್ಲಿ ಇಲ್ಲಿನ ಅಹ್ಮದ್ ನಗರದಲ್ಲಿ ಮಹಿಳೆಯರಿಗಾಗಿ ಹಮ್ಮಿಕೊಂಡಿದ್ದ ಇಫ್ತಿಯಾರ್ ಕೂಟದಲ್ಲಿ ಶಾಸಕ ಡಾ. ಶಾಮನೂರು ಶಿವಶಂಕರಪ್ಪನವರ ಪರವಾಗಿ ಅವರ ಸೊಸೆ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಭಾಗವಹಿಸಿದ್ದರು.

ರಂಜಾನ್ ಮಾಸದಲ್ಲಿ ಮಕ್ಕಳು, ಮಹಿಳೆಯರು ಎನ್ನದೇ ಪ್ರತಿಯೊಬ್ಬರೂ ಉಪವಾಸ ಆಚರಣೆ ಮಾಡಲಿದ್ದು, ಸಂಜೆ ಸೂರ್ಯಾಸ್ತದ ಉಪವಾಸ ಬಿಡುವ ವೇಳೆ ಇಫ್ತಿಯಾರ್ ಕೂಟ ನಡೆಸುವರು. ಇಂತಹ ಪವಿತ್ರ ಕಾರ್ಯದಲ್ಲಿ ಭಾಗವಹಿಸಿರುವುದು ನನಗೆ ತುಂಬಾ ಸಂತೋಷವಾಗಿದೆ ಎಂದು ಪ್ರಭಾ ಮಲ್ಲಿಕಾರ್ಜುನ್ ಅಭಿಪ್ರಾಯಪಟ್ಟರು.

ನಂತರ ಮಹಿಳೆಯರೊಂದಿಗೆ ಸ್ಥಳೀಯ ಸಮಸ್ಯೆಗಳ ಬಗ್ಗೆ ಚರ್ಚಿಸಿ ಮಹಿಳೆಯರಿಗೆ ಅನುಕೂಲವಾಗುವಂತೆ ಅನೇಕ ಯೋಜನೆಗಳನ್ನು ಕಾಂಗ್ರೆಸ್ ಪಕ್ಷ ಜಾರಿಗೆ ತಂದಿದ್ದು, ಆ ಯೋಜನೆಗಳನ್ನು ಬಳಸಿಕೊಂಡು ಸ್ವಾವಲಂಬಿಗಳಾಗಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮುಬೀನಾತಾಜ್, ರೇಷ್ಮಾ ತಾಸಿನ್ ಫಾತಿಮಾ, ಸಯೀದಾ ಮಿಜಾಬ್, ಮಹಾನಗರ ಪಾಲಿಕೆ ಸದಸ್ಯ ಜಾಕಿರ್ ಅಲಿ, ಲಾಲ್‌ಪೈಲ್ವಾನ್, ಮುನ್ನಾ, ರಿಯಾಜ್, ನವೀದ್, ಖಲೀಮುಲ್ಲಾ, ಮಹ್ಮದ್ ಅಲಿ ಮತ್ತಿತರರಿದ್ದರು.

## ಗೆಹ್ಲೋಟ್‌ಗೆ ಪ್ರಧಾನಿ ಮೋದಿ ಧನ್ಯವಾದ

ಜೈಪುರ, ಏ. 12 – ರಾಜಸ್ಥಾನದಲ್ಲಿ ರಾಜಕೀಯ ಸಂಘರ್ಷ ನಡೆಯುತ್ತಿದ್ದರೂ ಸಹ, ವಂದೇ ಭಾರತ್ ಎಕ್ಸ್‌ಪ್ರೆಸ್ ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸಿದ್ದಕ್ಕಾಗಿ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್‌ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಧನ್ಯವಾದ ಸಲ್ಲಿಸಿದ್ದಾರೆ.

ಆನ್‌ಲೈನ್ ಮೂಲಕ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಪ್ರಧಾನಿ ಮೋದಿ, ಜೈಪುರದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಗೆಹ್ಲೋಟ್ ಅವರಿಗೆ ಧನ್ಯವಾದ ಸಲ್ಲಿಸಿದ್ದಾರಲ್ಲದೇ, ಅವರನ್ನು ತಮ್ಮ ಸ್ನೇಹಿತ ಎಂದು ಬಣ್ಣಿಸಿದ್ದಾರೆ. ಬಿಜೆಪಿ ನಾಯಕರ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳ ತನಿಖೆ ನಡೆಸಬೇಕೆಂದು ಒತ್ತಾಯಿಸಿ, ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ನಿನ್ನೆ ನಿರಶನ ನಡೆಸಿದ್ದರು. ಇದರಿಂದಾಗಿ ಪೈಲಟ್ ಹಾಗೂ ಗೆಹ್ಲೋಟ್ ನಡುವಿನ ಸಂಘರ್ಷ ಇನ್ನಷ್ಟು ಉಲ್ಬಣಿಸಿತ್ತು.

## ಪ್ರಜಾಪ್ರಭುತ್ವದಲ್ಲಿ ನಂಬಿಕೆಯುಳ್ಳ ಎಲ್ಲರೂ ಮತದಾನ ಮಾಡಬೇಕು

### ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಕರೆ

ದಾವಣಗೆರೆ, ಏ.12- ಮತದಾನ ಪ್ರಕ್ರಿಯೆಯಿಂದ ದೂರ ಉಳಿಯದೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆಯುಳ್ಳ ಪ್ರತಿಯೊಬ್ಬರು ಮತದಾನದಲ್ಲಿ ಪಾಲ್ಗೊಳ್ಳುವ ಮುಖಾಂತರ ತಮ್ಮ ಹಕ್ಕು ಚಲಾಯಿಸಬೇಕು ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಕರೆ ಕೊಟ್ಟರು.

ಬುಧವಾರ ನಗರದ ಹೈಸ್ಕೂಲ್ ಮೈದಾನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಮತದಾರರ ಜಾಗೃತಿ (ಸ್ವೀಪ್) ತ್ರಿಚಕ್ರ ಬೈಕ್ ರ‍್ಯಾಲಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ದೇಶವನ್ನು ಕಟ್ಟುವಲ್ಲಿ ವಿಕಲಚೇತನರ ಪಾತ್ರವೂ ಪ್ರಮುಖವಾಗಿದ್ದು, ವಿಶೇಷ ವಿಕಲಚೇತನರು ಕೂಡ ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು. ಅವರೂ ಸಹ ಪ್ರಜಾಪ್ರಭುತ್ವದ ಭಾಗವಾಗಿದ್ದಾರೆ. ಹಾಗಾಗಿ, ಮೇ 10 ರಂದು ನಡೆಯುವ ವಿಧಾನಸಭಾ ಚುನಾವಣೆ ವೇಳೆ ಎಲ್ಲರೂ ತಪ್ಪದೇ ಮತದಾನ ಮಾಡುವ ಮೂಲಕ ತಮ್ಮ ಹಕ್ಕು ಚಲಾಯಿಸಿ, ಉತ್ತಮ ಪ್ರಜಾಪ್ರತಿನಿಧಿಗಳನ್ನು ಆಯ್ಕೆ ಮಾಡುವ ಜೊತೆಗೆ, ಶೇ.100 ರಷ್ಟು ಮತದಾನಕ್ಕೆ ಸಹಕಾರ ನೀಡಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಸುರೇಶ್ ಇಟ್ನಾಳ್ ಮಾತನಾಡಿ, ಇದೇ ಮೇ 10ರಂದು ನಡೆಯುವ ವಿಧಾನಸಭಾ ಚುನಾವಣೆ ವೇಳೆ ವಿಕಲಚೇತನರು ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ತೊಂದರೆಯಾಗದಂತೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ವಿಕಲಚೇತನರಿಗೆ ರ‍್ಯಾಂಪ್, ರೀಲಿಂಗ್ ಹಾಗೂ ಅಂಧರಿಗೆ ಬ್ರೈಲ್ ಲಿಪಿ ವ್ಯವಸ್ಥೆ ಮಾಡಲಾಗಿದೆ ಎಂದರು.

ಮತಗಟ್ಟೆಗೆ ವಿಕಲಚೇತನರನ್ನು ಕರೆತರಲು ಮತ್ತು ವಾಪಾಸ್ ಕರೆದೊಯ್ಯಲು ಸಾರಿಗೆ ವ್ಯವಸ್ಥೆ, ಶೌಚಾಲಯ, ನೆರಳಿನ ವ್ಯವಸ್ಥೆ ಕಲ್ಪಿಸಲಾಗುವುದು ಎಂದ ಅವರು, ಇದಕ್ಕೆ ಎನ್.ಎಸ್.ಎಸ್. ಮತ್ತು ಎನ್.ಸಿ.ಸಿಯ ವಿದ್ಯಾರ್ಥಿಗಳನ್ನು ಸ್ವಯಂ ಸೇವಕರಾಗಿ ನಿಯೋಜನೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಈ ವೇಳೆ ಜಿಲ್ಲಾ ಹಿರಿಯ ನಾಗರಿಕರ ಹಾಗೂ ವಿಶೇಷಚೇತನ ಮತದಾರರ ನೋಡೆಲ್ ಅಧಿಕಾರಿ ಡಾ. ಕೆ.ಕೆ. ಪ್ರಕಾಶ್, ಮಹೇಶ್ ದೊಡ್ಮನಿ, ಶಾರದಮ್ಮ, ಮಲ್ಲಾನಾಯ್ಕ್ ಸೇರಿದಂತೆ ಮತ್ತಿತರರಿದ್ದರು.

ತ್ರಿಚಕ್ರ ಬೈಕ್ ರ‍್ಯಾಲಿಯು ಹೈಸ್ಕೂಲ್ ಮೈದಾನದಿಂದ ಪ್ರಾರಂಭವಾಗಿ ಜನತಾ ಬಜಾರ್ ರಸ್ತೆಯ ಮುಖಾಂತರ ಪಿ.ಬಿ ರಸ್ತೆ, ಗಾಂಧಿ ವೃತ್ತ, ಜಯದೇವ ವೃತ್ತ ಮಾರ್ಗವಾಗಿ ಡಾ.ಬಿ.ಆರ್ ಅಂಬೇಡ್ಕರ್ ವೃತ್ತ ತಲುಪಿ ಪ್ರತಿಜ್ಞೆ ಮಾಡುವ ಮೂಲಕ ಮುಕ್ತಾಯಗೊಂಡಿತು.

## 40 ವರ್ಷಗಳ ಇತಿಹಾಸದ ಮತಯಂತ್ರ

**(1ನೇ ಪುಟದಿಂದ)** ಟ್ರೇಲ್ (ವಿವಿಪ್ಯಾಟ್) ಸಹ ಜಾರಿಗೆ ತರುವ ಮೂಲಕ ಹೆಚ್ಚಿನ ನಂಬಿಕಾರ್ಹತೆ ಹಾಗೂ ಪಾರದರ್ಶಕತೆ ತರಲಾಗಿದೆ. ಪ್ರತಿ ಕ್ಷೇತ್ರದ ಐದು ಮತಗಟ್ಟೆಗಳ ವಿವಿಪ್ಯಾಟ್‌ಗಳನ್ನು ತಾಳೆ ಹಾಕಲಾಗುತ್ತಿದೆ.

ಮತಯಂತ್ರಗಳು ಜಾರಿಗೆ ಬಂದ ದಿನದಿಂದಲೂ ಅವುಗಳ ಬಗ್ಗೆ ನ್ಯಾಯಾಲಯಗಳಲ್ಲಿ ಪ್ರಕರಣಗಳು ದಾಖಲಾಗುತ್ತಲಿವೆ.

ಆಕ್ಷೇಪಗಳು ಕೇಳಿ ಬರುತ್ತಲೇ ಇವೆ. ಆದರೆ, ನಿರಂತರವಾಗಿ ನ್ಯಾಯಾಲಯಗಳು ಮತಯಂತ್ರಗಳ ಬಳಕೆ ಹಾಗೂ ಸುಧಾರಣೆ ಪರವಾಗಿ ತೀರ್ಪು ನೀಡುತ್ತಾ ಬಂದಿವೆ. ಸದ್ಯಕ್ಕೆ ಮತಯಂತ್ರಗಳಿಗೆ ಪರ್ಯಾಯ ಕಂಡು ಬರುತ್ತಿಲ್ಲ.

### ಮತಯಂತ್ರ ಕಾಲದಲ್ಲೂ ಮತಪತ್ರ ಬಳಕೆ

**(1ನೇ ಪುಟದಿಂದ) ಹಾಗೂ 125 ರೂ. ಆಗಿತ್ತು. ವಿಧಾನಸಭಾ ಚುನಾವಣೆಯ ವಿಷಯಕ್ಕೆ ಬಂದರೆ 1996ರಲ್ಲಿ ತಮಿಳುನಾಡಿನ ಮೊಡಕುರಿಚಿಯಲ್ಲಿ 1,033 ಅಭ್ಯರ್ಥಿಗಳು ಕಣದಲ್ಲಿದ್ದರು. ಇವರಿಗಾಗಿ 'ಮತ ಪುಸ್ತಕ' ಪ್ರಕಟಿಸಲು ಚುನಾವಣಾ ಆಯೋಗಕ್ಕೆ ಹೆಚ್ಚುವರಿ ಸಮಯ ಬೇಕಾಗಿ, ಚುನಾವಣೆಯನ್ನು ಒಂದು ತಿಂಗಳ ಕಾಲ ಮುಂದೂಡಲಾಯಿತು. ಈ ಘಟನೆಗಳ ನಂತರದಲ್ಲಿ ಠೇವಣಿ ಮೊತ್ತವನ್ನು ಗಣನೀಯವಾಗಿ ಹೆಚ್ಚಿಸಲಾಯಿತು.**

## ಪಂಜಾಬ್ ಸೈನಿಕ ನೆಲೆಯಲ್ಲಿ ನಾಲ್ವರು ಸೈನಿಕರ ಹತ್ಯೆ

ನವದೆಹಲಿ, ಏ. 12 – ಪಂಜಾಬ್‌ನ ಭಠಿಂಡಾದ ಸೈನಿಕ ನೆಲೆಯಲ್ಲಿ ನಡೆಸಲಾದ ಗುಂಡಿನ ದಾಳಿಯಲ್ಲಿ ನಾಲ್ವರು ಸೈನಿಕರು ಸಾವನ್ನಪ್ಪಿದ್ದಾರೆ.

ಸೈನಿಕರು ಮಲಗಿದ್ದ ಬೆಳಗಿನ ಜಾವ 4.30ರ ಸಮಯದಲ್ಲಿ ಈ ದಾಳಿ ನಡೆದಿದೆ. ಇದು ಉಗ್ರವಾದಿ ಘಟನೆಯಲ್ಲ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಫಿರಂಗಿ ದಳದಲ್ಲಿ ನಡೆದ ಈ ಘಟನೆಯ ಬಗ್ಗೆ ಸೈನ್ಯದ ಮುಖ್ಯಸ್ಥ ಮನೋಜ್ ಪಾಂಡೆ ಅವರು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ವಿವರ ನೀಡಿದ್ದಾರೆ. ಇಡೀ ಘಟನೆಯ ತನಿಖೆಗೆ ಸೈನ್ಯ ಆದೇಶ ಹೊರಡಿಸಿದೆ. ರಾಜ್ಯ ಪೊಲೀಸರೂ ಪ್ರಕರಣದ ತನಿಖೆ ನಡೆಸಲಿದ್ದಾರೆ.

ದಾಳಿ ನಡೆದ ನಂತರ ಬಿಳಿ ಕುರ್ತಾ ಪೈಜಾಮದಲ್ಲಿದ್ದ ಇಬ್ಬರು ವ್ಯಕ್ತಿಗಳು ಬ್ಯಾರಕ್‌ಗಳಿಂದ ಹೊರ ಬರುವುದನ್ನು ಸೈನಿಕರೊಬ್ಬರು ನೋಡಿದ್ದಾರೆ. ಇವರಲ್ಲಿ ಓರ್ವ ಇನ್ಸಾಸ್ ರೈಫಲ್ ಹಾಗೂ ಇನ್ನೋರ್ವ ಕೊಡಲಿ ಹಿಡಿದಿದ್ದ ಎಂದು ಪೊಲೀಸರು ದಾಖಲಿಸಿರುವ ಎಫ್.ಐ.ಆರ್.ನಲ್ಲಿ ತಿಳಿಸಲಾಗಿದೆ.

ಈ ಘಟನೆಯಲ್ಲಿ ಸಾಗರ್ ಬನ್ನೆ (25), ಯೋಗೇಶ್ ಕುಮಾರ್ (24), ಸಂತೋಷ್ ಎಂ. ನಾಗರಾಜ್ (25) ಹಾಗೂ ಕಮಲೇಶ್ (24) ಅವರು ಸಾವನ್ನಪ್ಪಿದ್ದಾರೆ. ಬನ್ನೆ ಹಾಗೂ ನಾಗರಾಜ್ ಅವರು ಕರ್ನಾಟಕದವರು. ಕಮಲೇಶ್ ಹಾಗೂ ಯೋಗೇಶ್ ತಮಿಳುನಾಡಿನವರು.

## ತೀರ್ಪು ಪೂರ್ಣ ಪ್ರಕಟಿಸದೆ ಭಾಗಶಃ ತಿಳಿಸುವಂತಿಲ್ಲ : ಸುಪ್ರೀಂ

ನವದೆಹಲಿ, ಏ. 12 – ತೀರ್ಪನ್ನು ಸಂಪೂರ್ಣವಾಗಿ ನ್ಯಾಯಾಲಯದಲ್ಲಿ ಪ್ರಕಟಿಸದೇ ಅದರ ಒಂದು ಅಂಶವನ್ನು ತಿಳಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ತೀರ್ಪು ಪ್ರಕಟಿಸದೇ ಅದರ ಒಂದು ಭಾಗವನ್ನು ಮಾತ್ರ ತಿಳಿಸಿದ್ದ ಕರ್ನಾಟಕದ ವಿಚಾರಣಾ ನ್ಯಾಯಾಲಯದ ನ್ಯಾಯಮೂರ್ತಿಯನ್ನು ವಜಾಗೊಳಿಸುವಂತೆಯೂ ಸುಪ್ರೀಂ ಕೋರ್ಟ್ ಆದೇಶಿಸಿದೆ. ಭಾಗಶಃ ತೀರ್ಪು ಪ್ರಕಟಿಸಿದ ನ್ಯಾಯಮೂರ್ತಿ ವಜಾಗೊಳಿಸಿದ್ದನ್ನು ಹೈಕೋರ್ಟ್ ವಿಭಾಗೀಯ ಪೀಠ ತಳ್ಳಿ ಹಾಕಿತ್ತು. ಇದರ ವಿರುದ್ಧ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ವಿ. ರಾಮಸುಬ್ರಮಣ್ಯಂ ಹಾಗೂ ಪಂಕಜ್ ಮಿತ್ತಲ್ ಅವರನ್ನು ಒಳಗೊಂಡ ಪೀಠ, ನ್ಯಾಯಮೂರ್ತಿಗಳ ವರ್ತನೆ ಒಪ್ಪಲಾಗದು ಎಂದು ತಿಳಿಸಿದೆ. ಈ ಪ್ರಕರಣದಲ್ಲಿ ಆಗಿರುವ ಲೋಪಕ್ಕೆ ಸ್ಟೆನೋಗ್ರಾಫರ್ ಕಾರಣ ಎಂದು ಹೇಳುವುದನ್ನು ಒಪ್ಪಲಾಗದು. ಆದರೆ, ಈ ಪಂಚತಂತ್ರ ಕಥೆಯನ್ನು ಹೈಕೋರ್ಟ್ ಒಪ್ಪಿಕೊಂಡಿರುವುದು ದುರದೃಷ್ಟಕರ. ಅಲ್ಲದೇ ಈ ವಿಷಯದಲ್ಲಿ ಸ್ಟೆನೋಗ್ರಾಫರ್ ಸಾಕ್ಷಿಯಾಗಿಯೂ ಆಡಳಿತ ಪರಿಗಣಿಸಿಲ್ಲ ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

ಇಡೀ ದೋಷ ಸ್ಟೆನೋಗ್ರಾಫರ್‌ದು ಎನ್ನಲಾಗಿದ್ದರೆ, ಅವರನ್ನು ಸಾಕ್ಷಿಯಾಗಿ ಕರೆಸಬೇಕಿತ್ತು. ಆದರೆ, ದುರದೃಷ್ಟವಶಾತ್ ಹೈಕೋರ್ಟ್ ಈ ಸಾಕ್ಷಿಯನ್ನು ಪರಿಗಣಿಸಿಲ್ಲ ಎಂದು ಹೇಳಿದೆ.

## ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ



### ಜಾಗೃತಿಯಿಂದ ಕಾರ್ಯನಿರ್ವಹಿಸಲು ಜಿಲ್ಲಾಧಿಕಾರಿ ಸಲಹೆ

ದಾವಣಗೆರೆ, ಏ. 12 - ರಾಜ್ಯ ಸಾರ್ವತ್ರಿಕ ವಿಧಾನಸಭಾ ಚುನಾವಣೆಯು ಮೇ 10 ರಂದು ನಡೆಯಲಿದ್ದು, ಮತಗಟ್ಟೆ ಕೇಂದ್ರಗಳಲ್ಲಿ ಮತಗಟ್ಟೆ ಅಧಿಕಾರಿಗಳು ಅತ್ಯಂತ ಜಾಗರೂಕತೆಯಿಂದ ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಸೂಚಿಸಿದರು.

ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಸಭಾಂಗಣದಲ್ಲಿ ಇಂದು ಜರುಗಿದ ಮತಗಟ್ಟೆ ಪಿ. ಆರ್.ಓ ಹಾಗೂ ಎ.ಪಿ.ಆರ್.ಓ ಅಧಿಕಾರಿಗಳ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಸಾರ್ವತ್ರಿಕ ವಿಧಾನಸಭಾ ಚುನಾವಣೆ ಸಂಬಂಧ ಈಗಾಗಲೇ ಎಲ್ಲಾ ಮತಗಟ್ಟೆ ಕೇಂದ್ರಗಳಿಗೆ ಅಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ತರಬೇತಿ ನಂತರ ಯಾವುದೇ ಲೋಪದೋಷಗಳಿಲ್ಲದಂತೆ, ಅಹಿತಕರ ಘಟನೆಗೆ ಆಸ್ಪದ ಮಾಡಿಕೊಡದಂತೆ ನಿಷ್ಪಕ್ಷಪಾತ, ಪಾರದರ್ಶಕವಾಗಿ ಚುನಾವಣೆ ನಡೆಸಲು ಆದ್ಯತೆ ನೀಡಬೇಕು ಎಂದರು.

ಸೆಕ್ಟರ್ ಅಧಿಕಾರಿ ಕರಿಬಸಪ್ಪ ಮಾತನಾಡಿ, ಮತಗಟ್ಟೆ ಅಧಿಕಾರಿಗಳಿಗೆ ಮಸ್ಟರಿಂಗ್, ಮತದಾನ ಮತ್ತು ಡಿಮಸ್ಟರಿಂಗ್ ಸಂದರ್ಭದಲ್ಲಿ ನಿರ್ವಹಿಸಬೇಕಾದ ಕಾರ್ಯಗಳ ಬಗ್ಗೆ ಪಿ.ಪಿ.ಟಿ ಮೂಲಕ ಮಾಹಿತಿ ನೀಡಿದರು. ಈಗಾಗಲೇ ಮತದಾನ ದಿನಾಂಕವನ್ನು ಚುನಾವಣಾ ಆಯೋಗ ನಿಗದಿಪಡಿಸಿದ್ದು, ಮತಗಟ್ಟೆ ಕೇಂದ್ರಗಳಲ್ಲಿ ಅಧಿಕಾರಿಗಳು ನಿರ್ವಹಿಸಬೇಕಾದ ಕಾರ್ಯಗಳ ಕುರಿತು ವಿವರಿಸಿದರು.

ಕಾರ್ಯಾಗಾರದಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್, ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಉಪ ವಿಭಾಗಾಧಿಕಾರಿ ಶ್ರೀಮತಿ ಎನ್.ದುರ್ಗಶ್ರೀ, ತಹಶೀಲ್ದಾರ್ ಡಾ. ಅಶ್ವತ್ಥ್, ಡಿ.ಡಿ.ಪಿ.ಐ ತಿಪ್ಪೇಶಪ್ಪ ಮತ್ತು ಇತರರು ಉಪಸ್ಥಿತರಿದ್ದರು.

## ಅಂಗಾರ ರಾಜಕೀಯ ನಿವೃತ್ತಿ

**(1ನೇ ಪುಟದಿಂದ)** ಟಿಕೆಟ್ ನಿರಾಕರಿಸಿದ್ದಕ್ಕೆ ಅತೃಪ್ತಿ ಇಲ್ಲ. ಆದರೆ, ಪಕ್ಷ ಹಾಗೂ ಸಮಾಜಕ್ಕಾಗಿ ಕಪ್ಪು ಚುಕ್ಕೆ ಇಲ್ಲದೇ ದುಡಿದ ಕಾರ್ಯಕರ್ತರನ್ನು ನಡೆಸಿಕೊಳ್ಳುವ ರೀತಿ ಇದಲ್ಲ ಎಂದವರು ಹೇಳಿದ್ದಾರೆ. ರಾಜಕೀಯದಿಂದ ನಿವೃತ್ತರಾಗುವುದಾಗಿ ಹೇಳಿರುವ 58 ವರ್ಷದ ಅಂಗಾರ, ಇನ್ನೆಂದೂ ಪಕ್ಷಕ್ಕಾಗಿ ದುಡಿಯುವುದಿಲ್ಲ ಎಂದಿದ್ದಾರೆ. ಸುಳ್ಯ ಕ್ಷೇತ್ರದಿಂದ ಭಾಗೀರಥಿ ಅವರಿಗೆ ಟಿಕೆಟ್ ನೀಡಲಾಗಿತ್ತು. ಅವರು ಈ ಕ್ಷೇತ್ರದಲ್ಲಿ ಮೊದಲ ಬಾರಿ ಸ್ಪರ್ಧಿಸುತ್ತಿದ್ದಾರೆ.

## ಶಂಕರ್ ರಾಜೀನಾಮೆ

**(1ನೇ ಪುಟದಿಂದ)** ಸ್ಪರ್ಧಿಸಲು ಅವರು ಬಯಸಿದ್ದರು. ಆದರೆ, ಈ ಕ್ಷೇತ್ರದಲ್ಲಿ ಅರುಣ್ ಕುಮಾರ್ ಪೂಜಾರ್ ಅವರಿಗೆ ಟಿಕೆಟ್ ನೀಡಲಾಗಿದೆ.

ಪಕ್ಷಾಂತರ ಮಾಡಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ರಚಿಸಲು ನೆರವಾದ ಶಾಸಕರಲ್ಲಿ ಶಂಕರ್ ಸಹ ಒಬ್ಬರಾಗಿದ್ದರು.


**ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ**

**ವಾಣಿಜ್ಯ ಅಸಲು ದಾವೆ ಸಂಖ್ಯೆ. 72/2022**

**ವಾದಿಗಳು :** ಕೆನರಾ ಬ್ಯಾಂಕ್, ಪಿ.ಬಿ. ರಸ್ತೆ ಶಾಖೆ, ದಾವಣಗೆರೆ. *ವಿರುದ್ಧ*

**ಪ್ರತಿವಾದಿಗಳು :** ಮೆ|| ಎಸ್.ಎಸ್. ಕಮ್ಯುನಿಕೇಷನ್ **ಮಾಲೀಕರು :** ಶಫೀವುಲ್ಲಾ ಬಿನ್ ಮೊಹಮ್ಮದ್ ಸಾಬ್ ವಯಸ್ಸು 38 ವರ್ಷ, ವಾಸ : ನಂಜುಂಡಪ್ಪ ನಗರ, ಹೊಳಲ್ಕೆರೆ ರಸ್ತೆ, ಆನಗೋಡು ಗ್ರಾಮ, ದಾವಣಗೆರೆ - 577556.

**ಹೆಚ್ಚುವರಿ ವಿಳಾಸ :** #200/1, ಬಿ.ಬಿ.ಆರ್ ಪ್ಲಾಜಾ ಎನ್.ಆರ್. ರಸ್ತೆ, ದಾವಣಗೆರೆ.

**ಆದೇಶ 5 ನಿಯಮ 20 ರ ವ್ಯವಹಾರ ಪ್ರಕ್ರಿಯಾ ಸಂಹಿತೆ ಪ್ರಕಾರ ಪ್ರತಿವಾದಿಗೆ ಕೋರ್ಟ್ ನೋಟೀಸ್**

ಈ ಮೇಲ್ಕಂಡ ಕೇಸನ್ನು ವಾದಿಯು ಪ್ರತಿವಾದಿಯ ವಿರುದ್ಧ ರೂ. 1174587.50 ಮತ್ತು ಬಡ್ಡಿ ವಸೂಲಾತಿಗಾಗಿ ಸಲ್ಲಿಸಿದ್ದು. ಸದರಿ ದಾವೆಯಲ್ಲಿ ನಿಮ್ಮ ಹಾಜರಾತಿಗಾಗಿ ಘನ ನ್ಯಾಯಾಲಯವು ದಿನಾಂಕ : 29.05.2023 ರಂದು ಮುದ್ದತ್ತು ನಿಗದಿಪಡಿಸಿರುತ್ತದೆ. ಆದ್ದರಿಂದ ಸದರಿ ತಾರೀಖಿನಂದು ನೀವು ಖುದ್ದಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ನಿಮ್ಮ ತಕರಾರು ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಮೇಲ್ಕಂಡ ದಾವೆಯನ್ನು ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುವುದು. ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿನಾಂಕ : 12.04.2023 ರಂದು ನೀಡಲಾಗಿದೆ.

| | |
|---|---|
| ವಾದಿ ಪರ ವಕೀಲರು | ನ್ಯಾಯಾಲಯದ ಆದೇಶದ ಮೇರೆಗೆ, |
| (ಎ.ಎಂ.ಹೆಗಡೆ) | ಮುಖ್ಯ ಆಡಳಿತಾಧಿಕಾರಿಗಳು |
| ದಾವಣಗೆರೆ | ಪ್ರಧಾನ ಜಿಲ್ಲಾ ಮತ್ತು ಸತ್ರ |
| ದಿನಾಂಕ : 12.04.2023 | ನ್ಯಾಯಾಧೀಶರವರ ನ್ಯಾಯಾಲಯ |

**ಮಾನ್ಯ ಗೌರವಾನ್ವಿತ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂ.ಎಫ್.ಸಿ ನ್ಯಾಯಾಲಯ, ದಾವಣಗೆರೆ.**

ಆರ್.ಎ. ನಂ.139/18

**ಅಪೀಲುದಾರರು :** ಮುರಿಗೇಂದ್ರಪ್ಪ ಮತ್ತು ಇತರರು *ವಿರುದ್ಧ*

**ಎದುರುದಾರರು** 1) ಮಂಜುನಾಥ ಮತ್ತು ಇತರರು.

8ಬಿ) ಶಾಂತಮ್ಮ ಕೋಂ ಪರಮೇಶ್ವರಪ್ಪ, ವಯಸ್ಸು : 49 ವರ್ಷ, ವ್ಯವಸಾಯ, ಹಿರೇಕಬ್ಬಾರ ಗ್ರಾಮ, ಹಿರೇಕೆರೂರು ತಾ. ಹಾವೇರಿ ಜಿಲ್ಲೆ.

10) ಕಲ್ಲಪ್ಪ ಬಿನ್ ಶೆಟ್ರು ಮಲ್ಲೇಶಪ್ಪ ವಯಸ್ಸು 32 ವರ್ಷ, ಕಂದಗಲ್ಲು ವಾಸಿ ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

**ಆದೇಶ 5 ನಿಯಮ 20 ಸಿಪಿಸಿ ಪ್ರಕಾರ ತಿಳುವಳಿಕೆ**

ಈ ಮೇಲ್ಕಂಡ ಕೇಸನ್ನು ಅಪೀಲುದಾರರು ಎದುರುದಾರರ ಮೇಲೆ ಈ ಅಪೀಲನ್ನು ಸಲ್ಲಿಸಿರುತ್ತಾರೆ. ಈ ಕೇಸಿನಲ್ಲಿ 8(ಬಿ) ಮತ್ತು 10 ನೇ ಎದುರುದಾರರಿಗೆ ಕೋರ್ಟು ಮೂಲಕ ಸಮನ್ಸ್ ಹೋದಾಗ್ಯೂ ಅವರು ಉದ್ದೇಶ ಪೂರ್ವಕವಾಗಿ ಜಾರಿ ಮಾಡಿಕೊಂಡಿರುವುದಿಲ್ಲ. ಅವರುಗಳು ಅದೇ ವಿಳಾಸದಲ್ಲಿ ಇರುತ್ತಾರೆ.

ಈಗ ಪುನಃ 8(ಬಿ) ಮತ್ತು 10ನೇ ಎದುರುದಾರರಿಗೆ ಕೋರ್ಟಿನವರು ಪತ್ರಿಕಾ ಪ್ರಕಟಣೆ ಮೂಲಕ ನೋಟಿಸು ಜಾರಿ ಮಾಡಲು ಆದೇಶ ಮಾಡಿರುತ್ತಾರೆ. ಈ ಕೇಸಿನ ಮುದ್ದತ್ತು ದಿನಾಂಕ 8.6.2023ಕ್ಕೆ ಇದ್ದು, 8 (ಬಿ) ಮತ್ತು 10 ನೇ ಎದುರುದಾರರು ಆ ದಿನ ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಬೆಳಿಗ್ಗೆ 11 ಗಂಟೆಗೆ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು, ತಪ್ಪಿದ್ದಲ್ಲಿ ಅವರ ಮೇಲೆ ಏಕತರ್ಪೆ ಆದೇಶ ಮಾಡಲಾಗುವುದು ಎಂದು ದಿನಾಂಕ 5.4.2023ರಂದು ಆದೇಶ ಮಾಡಿರುತ್ತದೆ.

ಈ ತಿಳುವಳಿಕೆಯನ್ನು ಇದೇ 2023ನೇ ಇಸ್ವಿ ಏಪ್ರಿಲ್ ಮಾಹೆ 5ನೇ ತಾರೀಖಿನಂದು ನ್ಯಾಯಾಲಯದ ಮುದ್ರೆಯೊಂದಿಗೆ ಹಾಗೂ ನನ್ನ ಸಹಿಯೊಂದಿಗೆ ನೀಡಲಾಗಿದೆ.

| | |
|---|---|
| **ದಿನಾಂಕ : 5.4.2023** | **ನ್ಯಾಯಾಲಯದ ಆದೇಶದ ಮೇರೆಗೆ** |
| **ಸ್ಥಳ : ದಾವಣಗೆರೆ** | **ಶಿರಸ್ತೇದಾರರು** |
| **ಶ್ರೀ ಏಕನಾಥ ಡಿ. ರಾಯ್ಕರ್** | **2ನೇ ಹೆಚ್ಚುವರಿ ಹಿರಿಯ ಸಿವಿಲ್** |
| **ವಕೀಲರು, ದಾವಣಗೆರೆ. ಮೊ : 98440 20566** | **ನ್ಯಾಯಾಲಯ, ದಾವಣಗೆರೆ.** |

**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಕಂಡ ಸ್ಥಿರ ಸೊತ್ತು ಜಮೀನನ್ನು ಕಕ್ಷಿಗಾರರು ಶ್ರೀ ಬಿ.ಕೆ. ಮಹೇಶ್ವರಪ್ಪ ಬಿನ್ ಕೊಟ್ರಪ್ಪ ಎ, ಬನ್ನಿಕೊಡು ಪೋಸ್ಟ್, ಕೆ. ಬೇವಿನಹಳ್ಳಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಹಾಗೂ ಇತರರಿಂದ ಖರೀದಿಸಲು ಇಚ್ಚಿಸಿರುತ್ತಾರೆ.

ಸದರಿ ಷೆಡ್ಯೂಲ್ ಸೊತ್ತನ್ನು ನನ್ನ ಕಕ್ಷಿಗಾರರು ಮೇಲ್ಕಂಡ ಶ್ರೀ ಬಿ.ಕೆ. ಮಹೇಶ್ವರಪ್ಪ ಬಿನ್ ಕೊಟ್ರಪ್ಪ ಎ. ಬನ್ನಿಕೋಡು ಪೋಸ್ಟ್, ಕೆ. ಬೇವಿನಹಳ್ಳಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ವಗ್ಯೆರೆ ಇವರಿಂದ ಖರೀದಿಸುವ ಬಗ್ಗೆ ಯಾರದಾದರೂ ಯಾವುದೇ ರೀತಿಯ ತಂಟೆ, ತಕರಾರು, ವ್ಯಾಜ್ಯ ಅಥವಾ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ 15 ದಿವಸಗಳ ಒಳಗಾಗಿ ಈ ಕೆಳಕಂಡವರಿಗೆ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು, ಸದರಿ 15 ದಿವಸಗಳ ಅವಧಿ ಮೀರಿ ಬರುವ ಯಾವುದೇ ತಂಟೆ ತಕರಾರು, ವ್ಯಾಜ್ಯ ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ,

ಸದರಿ 15 ದಿವಸಗಳ ಅವಧಿ ನಂತರ, ನನ್ನ ಕಕ್ಷಿಗಾರರು ಮೇಲ್ಕಂಡ ಶ್ರೀ ಬಿ.ಕೆ. ಮಹೇಶ್ವರಪ್ಪ ಬಿನ್ ಕೊಟ್ರಪ್ಪ ಎ, ಬನ್ನಿಕೋಡು ಪೋಸ್ಟ್, ಕೆ. ಬೇವಿನಹಳ್ಳಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ವಗ್ಯೆರೆ ಇವರಿಂದ ಷೆಡ್ಯೂಲ್ ಜಮೀನನ್ನು ರಿಜಿಸ್ಟರ್ಡ್ ಕ್ರಯ ಪತ್ರ ಮಾಡಿಸಿಕೊಳ್ಳುವುದರ ಮೂಲಕ ಸೊತ್ತಿನ ಸ್ವಾಧೀನ ಹೊಂದುವರು.

ಸದರಿ ಅವಧಿ ಮೀರಿ ಬರಬಹುದಾದ ಯಾವುದೇ ತಂಟೆ, ತಕರಾರು, ವ್ಯಾಜ್ಯ ಆಕ್ಷೇಪಣೆ ವಗ್ಯೆರೆಗಳು ನನ್ನ ಕಕ್ಷಿಗಾರರನ್ನು ಪ್ರತಿಬಂಧಿಸುವುದಿಲ್ಲ ಹಾಗೂ ನನ್ನ ಕಕ್ಷಿಗಾರರು ಸದರಿ ಶ್ರೀ ಬಿ.ಕೆ. ಮಹೇಶ್ವರಪ್ಪ ಬಿನ್ ಕೊಟ್ರಪ್ಪ ಎ., ಬನ್ನಿಕೋಡು ಪೋಸ್ಟ್, ಕೆ. ಬೇವಿನಹಳ್ಳಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ವಗ್ಯೆರೆ ಇವರಿಂದ ಪಡೆದುಕೊಳ್ಳುವ ಶುದ್ಧ ಕ್ರಯಪತ್ರವನ್ನು ಎಳ್ಳಷ್ಟೂ ಬಾಧಿಸುವುದಿಲ್ಲ. ತಿಳಿಯುವುದು.

**ಷೆಡ್ಯೂಲ್**

ಹರಿಹರ ತಾಲ್ಲೂಕು ಸಬ್‌ರಿಜಿಸ್ಟ್ರಾರ್‌ರವರ ಅಧಿಕಾರಕ್ಕೆ ಒಳಪಟ್ಟ, ಹರಿಹರ ತಾಲ್ಲೂಕು, ಕಸಬಾ ಹೋಬಳಿ, ಸಾಲಕಟ್ಟೆ ಗ್ರಾಮದ ಸರ್ಕಾರಿ ರಿ. ಸರ್ವೆ ನಂ. 68/1 ರಲ್ಲಿ ಪೂರಾ ಕ್ಷೇತ್ರ : 03 ಎಕರೆ - 13 ಗುಂಟೆ ಇದರಲ್ಲಿ (ಬ) ಖರಾಬು 00 ಎಕರೆ - 03 ಗುಂಟೆ ವಜಾ-ಜಾತಾ ನಿವ್ವಳ ಎಕರೆ ಮೂರು, ಗುಂಟೆ ಹತ್ತು (03 ಎಕರೆ 10 ಗುಂಟೆ) ಆಕಾರ ರೂ. 03=38 ಪೈಸೆಯುಳ್ಳ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವ : ಗೋಮಾಳ, ಪಶ್ಚಿಮ ರಸ್ತೆ, ಉತ್ತರ : ವೀರಾಂಜನೇಯ ಇವರ ಜಮೀನು. ದಕ್ಷಿಣ : ರಿ.ಸ. ನಂಬರ್ 68/5ರ ಶಿವರಾಜ ಇವರ ಹಿಸ್ಸೆ ಜಮೀನು.

**ಮಲ್ಲಿಕಾರ್ಜುನ ಕಣವಿ,** ಬಿ.ಎ, ಎಲ್ ಎಲ್ .ಎಂ.
**ವಕೀಲರು, ನಂ.5 & 6, 1ನೇ ಅಂತಸ್ತು,**
**ದಾವಣಗೆರೆ ಆಟೋಮೊಬೈಲ್, ಸೊಸೈಟಿ ಕಾಂಪ್ಲೆಕ್ಸ್,**
**ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್ ಎದುರು,**
**ಪಿ.ಬಿ. ರಸ್ತೆ, ದಾವಣಗೆರೆ-577006.**

**ದಾವಣಗೆರೆ**
**ದಿನಾಂಕ 12.04.2023**

## ಸೆಂಟ್ ಮೇರಿಸ್ ಆವರಣದಲ್ಲಿ ಮತಯಂತ್ರಗಳು



**ಹರಿಹರ**

ಹರಿಹರ, ಏ. 12 - ವಿಧಾನಸಭಾ ಚುನಾವಣೆಯ ನಿಮಿತ್ತವಾಗಿ ನಗರದ ಸೆಂಟ್ ಮೇರಿಸ್ ಶಾಲೆ ಆವರಣದಲ್ಲಿ ವಿದ್ಯುನ್ಮಾನ ಮತಯಂತ್ರಗಳು ಹಾಗೂ ವಿ.ವಿ. ಪ್ಯಾಡ್‌ಗಳು, 274ಬಿವಿ (28) ಬಾಕ್ಸ್, 274 ಸಿ.ಯು. (28) ಬಾಕ್ಸ್ ಹಾಗೂ 257 ವಿ.ವಿ. ಪ್ಯಾಡ್ ತಾತ್ಕಾಲಿಕ ಭದ್ರತಾ ಕೊಠಡಿಯಲ್ಲಿ ಚುನಾವಣೆ ಅಧಿಕಾರಿ ಉದಯ್ ಕುಂಬಾರ್, ತಹಶೀಲ್ದಾರ್ ಪೃಥ್ವಿ ಸಾನಿಕಂ ಪೌರಾಯುಕ್ತ ಐಗೂರು ಬಸವರಾಜ್, ಪಿಸಿಐ ವೀಣಾ ಮತ್ತು ವಿವಿಧ ಪಕ್ಷಗಳ ಮುಖಂಡರ ಸಮ್ಮುಖದಲ್ಲಿ ಇರಿಸಲಾಯಿತು.

ಈ ಸಂದರ್ಭದಲ್ಲಿ ಚುನಾವಣೆ ಅಧಿಕಾರಿ ಉದಯ್ ಕುಮಾರ್ ಕುಂಬಾರ, ತಹಶೀಲ್ದಾರ್ ಪೃಥ್ವಿ ಸಾನಿಕಂ, ಪೌರಾಯುಕ್ತ ಐಗೂರು ಬಸವರಾಜ್, ಪಿಸಿಐ ಹೆಚ್.ಕೆ. ವೀಣಾ, ತಹಶೀಲ್ದಾರ್ ಕಚೇರಿಯ ಸಿಬ್ಬಂದಿಗಳಾದ ಅಶೋಕ, ಹೆಚ್.ಜಿ. ಹೇಮಂತ್ ಕುಮಾರ್, ಸೋಮಶೇಖರ್, ಉಮೇಶ್, ವಿಜಯ ಮಹಾಂತೇಶ್, ಮಂಜುನಾಥ್, ಪ್ರಶಾಂತ್, ಫೈರೋಜ್, ಆರೋಗ್ಯ ಇಲಾಖೆ ಗುರುಪ್ರಸಾದ್, ಪೋಲೀಸ್ ರವಿ, ಜೆಡಿಸ್ ಪಕ್ಷದ ಆಸೀಫ್ ಕನವಳ್ಳಿ, ಆಮ್ ಆದ್ಮಿ ಪಕ್ಷದ ಗಣೇಶ ದುರ್ಗದ, ನಗರಸಭೆ ಸಿಬ್ಬಂದಿಗಳು ಹಾಗೂ ಇತರರು

## ಅಸಮಾಧಾನಿತರ ಜೊತೆ ಮಾತುಕತೆ: ಸಿಎಂ

ಬೆಂಗಳೂರು, ಏ. 12 - ರಾಜ್ಯದ 189 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಘೋಷಣೆಯಾಗಿದ್ದು, ಎಲ್ಲರೂ ಬಹುಮತದಿಂದ ಆಯ್ಕೆಯಾಗಿ ಬಿಜೆಪಿ ಅಧಿಕಾರಕ್ಕೆ ಬರುವ ವಿಶ್ವಾಸವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಹುತೇಕ ಎಲ್ಲ ಕ್ಷೇತ್ರಗಳಲ್ಲಿ ಒಮ್ಮತದ ಸ್ವಾಗತ ದೊರೆತಿದೆ. ಕೆಲವು ಅಸಮಾಧಾನಿತರ ಜೊತೆ ಮಾತನಾಡುವ ಕೆಲಸ ನಡೆದಿದೆ ಎಂದರು.

ಲಕ್ಷ್ಮಣ ಸವದಿ ಅವರೊಂದಿಗೆ ಮಾತಾಡಿದ್ದು, ಯಾವುದೇ ದುಡುಕಿನ ನಿರ್ಧಾರ ಕೈಗೊಳ್ಳಬಾರದು ಎಂದು ತಿಳಿಸಿರುವುದಾಗಿ ಹೇಳಿದರು. ಸವದಿ ಜೊತೆ ಭಾವನಾತ್ಮಕವಾದ ಸಂಬಂಧ ಇದೆ. ಅವರ ಜೊತೆ ನಿರಂತರವಾಗಿ ಸಂಪರ್ಕದಲ್ಲಿದ್ದು, ಅವರು ಕಷ್ಟದಲ್ಲಿದ್ದಾಗ ಪಕ್ಷ ಕೈ ಹಿಡಿದಿದೆ. ಮುಂದೆಯೂ ಅವರ ಕೈ ಹಿಡಿಯುತ್ತದೆ. ಅವರ ಗೌರವ ಕಾಪಾಡಲು ಒಳ್ಳೆಯ ನಿರ್ಧಾರ ಮಾಡಲಾಗುತ್ತದೆ. ಅವರಿಗೆ ಮುಂದೆ ಒಳ್ಳೆಯ ಭವಿಷ್ಯ ಇದೆ ಎಂದರು.

ಬೊಮ್ಮಾಯಿ ಅವರು ಕಾಂಗ್ರೆಸ್‌ಗೆ ಸೇರುತ್ತಿದ್ದರು ಎಂಬ ಸವದಿ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿ, ಈ ವಿಚಾರ ಅಪ್ರಸ್ತುತ. ನಾನು ನನ್ನ ಮನೆಯಲ್ಲಿ ಮಾತ್ರ ಕೂತಿದ್ದೆ. ನಾನು ಯಾವ ಪಕ್ಷಕ್ಕೂ ಹೋಗಿರಲಿಲ್ಲ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅನಂತಕುಮಾರ್ , ಸಿ.ಸಿ ಪಾಟೀಲ್, ಸವದಿ ಬಂದಿದ್ದು ನಿಜ. ಆದರೆ ಕಾಂಗ್ರೆಸ್‌ಗೆ ನಾನು ಹೋಗುತ್ತಿರಲಿಲ್ಲ. ಮಹತ್ವಾಕಾಂಕ್ಷೆಗಳು ಇರಲಿಲ್ಲ ಎಂದರು.

# ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಕರಾಳ ನೆನಪು

1919, ಏಪ್ರಿಲ್ 13, ಭಾರತೀಯರ ಹೃದಯದಲ್ಲಿ ಎಂದೂ ಮಾಸದ ಭೀಕರ ಕೃತ್ಯವೇ ಜಲಿಯನ್ ವಾಲಾ ಬಾಗ್ ಹತ್ಯಾಕಾಂಡ. ಮುಗ್ಧ ಭಾರತೀಯರಿಗೆ ಸಣ್ಣ ಎಚ್ಚರಿಕೆಯನ್ನೂ ನೀಡದೇ, ಏಕಾಏಕಿ ಮನಬಂದಂತೆ ಗುಂಡು ಹಾರಿಸಿ, ತಾಯಿ ಭಾರತೀಯ ಒಡಲನ್ನು ಬ್ರಿಟಿಷರು ರಕ್ತಸಿಕ್ತ ಮಾಡಿದ್ದರು.

**ಹೇಡಿತನದ ಕೃತ್ಯ :** ಅಂದು ಪಂಜಾಬಿನವರ ವಿಶೇಷ ಹಬ್ಬ ಬೈಸಾಕಿ. ಅಮೃತಸರದ ಗೋಲ್ಡನ್ ಟೆಂಪಲ್ ಪಕ್ಕದಲ್ಲೇ ಒಂದು ಪುಟ್ಟ ಉದ್ಯಾನ - ಜಲಿಯನ್ ವಾಲಾ ಬಾಗ್. ಹಬ್ಬದ ನೆಪದಲ್ಲಿ ಜನ ಸಾಮಾನ್ಯರು ಸೇರಿದ್ದರೂ ರೌಲಟ್ ಕಾನೂನು ವಿರೋಧಿಸಿ, ರಾಷ್ಟ್ರ ಜಾಗೃತಿ ಉತ್ತೇಜನಕ್ಕೆ ಉದ್ಯಾನ ಸಾಕ್ಷಿಯಾಗಿತ್ತು. ಇನ್ನೇನು ಸೂರ್ಯ ಮುಳುಗುವ ಸಮಯ, ಸುಂದರ ವಾತಾವರಣ, ಎಲ್ಲರ ಸಂಭ್ರಮ, ನಗು, ಪ್ರಾಣವು ಸೂರ್ಯ ಮುಳುಗುವ ವೇಳೆಗೆ ಸಂಪೂರ್ಣ ಕಮರಿ ಹೋಗಿದ್ದವು.


ಶಸ್ತ್ರಸಜ್ಜಿತ 90 ಸೈನಿಕರಿದ್ದ ಬ್ರಿಟಿಷ್ ತುಕಡಿಯು ಸಣ್ಣ ಮುನ್ಸೂಚನೆಯನ್ನೂ ನೀಡದೇ, ಹೊರಗೆ ಓಡಲು ಅವಕಾಶವೂ ಇಲ್ಲದಂತೆ ಗುಂಡಿನ ಮಳೆ ಹರಿಸಿತು. ಸುಮಾರು 15 ನಿಮಿಷಗಳ ಕಾಲ ಗುಂಡು, ಗುಂಡು, ಗುಂಡು ! ಮಕ್ಕಳು, ವೃದ್ಧರು, ಮಹಿಳೆಯರು ಎಂಬ ಯಾವ ವ್ಯತ್ಯಾಸವಿಲ್ಲದೇ ಸಿಡಿಮದ್ದುಗಳು ಮುಗ್ಧ ಭಾರತೀಯರ ರಕ್ತವನ್ನು ಚಿಮ್ಮಿಸಿದ್ದವು. ಅಂದು ಉಸಿರು ಚೆಲ್ಲಿದ್ದವರು ಐದು ನೂರಕ್ಕೂ ಹೆಚ್ಚು ರಾಷ್ಟ್ರಪ್ರೇಮಿಗಳು. ಇಂಥದ್ದೊಂದು ಭೀಕರ ಕೃತ್ಯಕ್ಕೆ, ಹೇಡಿತನಕ್ಕೆ ಕಾರಣ ಜನರಲ್ ಡೈಯರ್.

**ಉದಮ್ ಎಂಬ ಕಿಚ್ಚು !**

ಈ ಮಾರಣ ಹೋಮವನ್ನು ಉದಮ್ ಸಿಂಗ್ ಎಂಬ ಬಾಲಕ ಕಣ್ಣಾರೆ ನೋಡಿದ್ದ. ತನ್ನವರನ್ನೆಲ್ಲಾ ಕಳೆದುಕೊಂಡಿದ್ದಕ್ಕೆ ಪ್ರತೀಕಾರದ ಪಣ ತೊಟ್ಟಿದ್ದ. ಜಲಿಯನ್ ವಾಲಾಬಾಗ್‌ನ ರಕ್ತಸಿಕ್ತ ಮಣ್ಣನ್ನು ಮನೆಗೆ ಕೊಂಡೊಯ್ದು, ತನ್ನ ಜೀವಿತಾವಧಿವರೆಗೆ ಜೊತೆಗೇ ಇಟ್ಟುಕೊಂಡಿದ್ದ. ಹತ್ಯಾಕಾಂಡ ನಡೆಸಿದ ಡಯರ್ ಮಲಗಿದ್ದಲ್ಲೇ ಪ್ರಾಣ ಬಿಟ್ಟರೂ, ಉದಮ್ ಸಿಂಗ್ ಪ್ರತೀಕಾರದ ಜ್ವಾಲೆ ಆರಿರಲಿಲ್ಲ. ಏಕೆಂದರೆ, ಗುಂಡಿನ ದಾಳಿಗೆ ಜನರಲ್ ಡಯರ್‌ಗೆ ಆದೇಶ ಕೊಟ್ಟಿದ್ದವನೇ ಮೈಕಲ್ ಓಡ್ವೈರ್. ಆತನನ್ನು ಕೊಲ್ಲದೇ ಮಡಿದ ಭಾರತೀಯರ ಹೃದಯಗಳಿಗೆ ಶಾಂತಿಯಿಲ್ಲ ಎಂಬುದು ಉದಮ್ ಕಿಚ್ಚಾಗಿತ್ತು.

ಹತ್ಯಾಕಾಂಡ ನಡೆದು ಬರೋಬ್ಬರಿ 21 ವರ್ಷಗಳ ನಂತರ, ಅಂದರೆ 1940 ಮಾರ್ಚ್ 13 ರಂದು ಲಂಡನ್‌ನಲ್ಲಿಯೇ ಮೈಕೆಲ್‌ನ ಎದೆಗೆ ಗುಂಡಿಕ್ಕುವ ಮೂಲಕ ಉದಮ್ ತನ್ನ ಪ್ರತೀಕಾರ ತೀರಿಸಿಕೊಂಡಿದ್ದ. ತನ್ನ ಮಾತೃಭೂಮಿಯಲ್ಲಿ ಮಾರಣ ಹೋಮ ಮಾಡಿದವನಿಗೆ ಅವನದ್ದೇ ನೆಲಕ್ಕೆ ನುಗ್ಗಿ ಕೊಂದು ಹಾಕಿದ್ದ ಧೀರ ಉದಮ್ ಸಿಂಗ್ ನಂತರ ಅಮರನಾದ.





**ಬಲಿದಾನದ ಫಲ :** ಭಾರತದಲ್ಲಿ ಪ್ರಜಾಪ್ರಭುತ್ವ ನೆಲೆಸಿ, ನಮ್ಮ ದೇಶಕ್ಕೆ ನಾವೇ ಸಾರ್ವಭೌಮರು ಎಂಬ ಕಾಲ ಬರುವವರೆಗೂ ಉದಮ್ ಸಿಂಗ್‌ನಂಥ ಲಕ್ಷಾಂತರ ದೇಶಪ್ರೇಮಿಗಳ ಬಲಿದಾನವಿದೆ. ಅವರೆಲ್ಲರ ಉಸಿರು, ರಕ್ತ, ಹೋರಾಟದ ಫಲವಾಗಿ ನಮಗಿಂದು ಸಂತೃಪ್ತ, ಸ್ವಚ್ಛಂದ ದಿನಗಳು ಲಭಿಸಿವೆ. ನಮ್ಮ ಪಾಲಿಗೆ ಒಲಿದಿರುವ ಈ ಸ್ವತಂತ್ರದ ಬದುಕನ್ನು ನಾವೆಲ್ಲರೂ ಕೂಡಿ ಕಾಪಾಡಿಕೊಳ್ಳಬೇಕಿರುವುದು ನಮ್ಮೆಲ್ಲರ ಹೊಣೆ, ಆದ್ಯ ಕರ್ತವ್ಯವಾಗಿದೆ.

**ತಪ್ಪದೇ ಮತದಾನ ಮಾಡೋಣ :** ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು ಎಂಬ ಮಾತು ನಿಜಕ್ಕೂ ಅರ್ಥಪೂರ್ಣ ಎನಿಸುವುದು ನಾವೆಲ್ಲರೂ ನಮ್ಮ ಸಾಮಾಜಿಕ ಬದ್ಧತೆಯನ್ನು ಮೆರೆದಾಗಲೇ. ಪ್ರಜಾಪ್ರಭುತ್ವದ ಹಬ್ಬವಾದ ಮತದಾನವನ್ನು ನಾವೆಲ್ಲರೂ ತಪ್ಪದೇ ಮಾಡೋಣ. ಕರ್ನಾಟಕದಲ್ಲಿಯೂ ವಿಧಾನಸಭಾ ಸಾರ್ವತ್ರಿಕ ಚುನಾವಣೆಯು ಬರುವ ಮೇ 10ರಂದು ನಡೆಯಲಿದೆ. ಅಂದು ನಾವೆಲ್ಲರೂ ತಪ್ಪದೇ ಮನದಾನ ಮಾಡಿ, ಪ್ರಜಾಪ್ರಭುತ್ವಕ್ಕೆ ಮತ್ತಷ್ಟು ಶಕ್ತಿ, ಕೀರ್ತಿ ತರೋಣ. ನಮಗಾಗಿ ಮಡಿದ ದೇಶವಾಸಿಗಳ ದಿವ್ಯಾತ್ಮಗಳಿಗೆ ಗೌರವ ಸಲ್ಲಿಸೋಣ.

**- ಡಾ. ರವಿ ಕುಮಾರ್ ಟಿ.ಜಿ,** ಮುಖ್ಯಸ್ಥರು
ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ದಾವಣಗೆರೆ

## ಸಾವರ್ಕರ್ ಮಾನಹಾನಿ : ಮೊಮ್ಮಗನಿಂದ ರಾಹುಲ್ ಗಾಂಧಿ ವಿರುದ್ಧ ಪ್ರಕರಣ

ಪುಣೆ, ಏ. 12 – ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಲಂಡನ್‌ನಲ್ಲಿ ಭಾಷಣ ಮಾಡುವಾಗ ಹಿಂದುತ್ವವಾದಿ ವಿ.ಡಿ. ಸಾವರ್ಕರ್ ಮಾನಹಾನಿ ಮಾಡಿದ್ದಾರೆ ಎಂದು ಸಾವರ್ಕರ್ ಮೊಮ್ಮಗ ಮಹಾರಾಷ್ಟ್ರ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಾನಹಾನಿ ಪ್ರಕರಣ ದಾಖಲಿಸಿದ್ದಾರೆ. ಸಾತ್ಯಕಿ ಸಾವರ್ಕರ್ ಅವರು ಐ.ಪಿ.ಸಿ. ಸೆಕ್ಷನ್ 499 ಹಾಗೂ 500 ಅನ್ವಯ ಪ್ರಕರಣ ದಾಖಲಿಸಿದ್ದಾರೆ. ಸಂಬಂಧಿಸಿದ ನ್ಯಾಯಿಕ ಅಧಿಕಾರಿ ಉಪಸ್ಥಿತರಿರಲಿಲ್ಲ. ಹೀಗಾಗಿ ಪ್ರಕರಣದ ಸಂಖ್ಯೆ ಪಡೆಯಲು ಶನಿವಾರ ಬರುವಂತೆ ತಿಳಿಸಲಾಗಿದೆ ಎಂದು ಸಾತ್ಯಕಿ ತಿಳಿಸಿದ್ದಾರೆ.

ಸಾವರ್ಕರ್ ಐದಾರು ಸ್ನೇಹಿತರು ಮುಸ್ಲಿಂ ವ್ಯಕ್ತಿಯೊಬ್ಬರಿಗೆ ಥಳಿಸಿದ್ದರು. ಇದರಿಂದ ನನಗೆ ಸಂತೋಷವಾಗಿತ್ತು ಎಂದು ಸಾವರ್ಕರ್ ಪುಸ್ತಕವೊಂದರಲ್ಲಿ ಬರೆದಿರುವುದಾಗಿ ರಾಹುಲ್ ಗಾಂಧಿ ಲಂಡನ್‌ನಲ್ಲಿ ಹೇಳಿದ್ದರು. ಇದು ಹೇಡಿತನದ ಕೃತ್ಯವಲ್ಲವೇ? ಎಂದು ಪ್ರಶ್ನಿಸಿದ್ದರು ಎಂದು ಸಾತ್ಯಕಿ ಹೇಳಿದ್ದಾರೆ.

ಮೊದಲನೆಯದಾಗಿ ರಾಹುಲ್ ಗಾಂಧಿ ಹೇಳಿದ ಘಟನೆ ಕಟ್ಟು ಕಥೆ. ಈ ರೀತಿಯ ಯಾವುದೇ ಘಟನೆ ನಡೆದಿರಲಿಲ್ಲ. ಸಾವರ್ಕರ್ ಅವರು ವೈಜ್ಞಾನಿಕ ಮನೋಭಾವದ ವ್ಯಕ್ತಿಯಾಗಿದ್ದರು. ಅವರು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರಿಸಿದ್ದರು ಮತ್ತು ಮುಸ್ಲಿಮರು ವೈಜ್ಞಾನಿಕ ವಿಚಾರಧಾರೆ ಅನುಸರಿಸುವಂತೆ ಕರೆ ನೀಡಿದ್ದರು ಎಂದು ಸಾತ್ಯಕಿ ಹೇಳಿದ್ದಾರೆ. ಸಾವರ್ಕರ್ ಈ ಘಟನೆ ನಡೆದಿದೆ ಎಂದು ಬರೆದಿರುವ ಪುಸ್ತಕವನ್ನು ರಾಹುಲ್ ಗಾಂಧಿ ನ್ಯಾಯಾಲಯದ ಎದುರು ಹಾಜರು ಪಡಿಸಲಿ ಎಂದೂ ಸಾತ್ಯಕಿ ಹೇಳಿದ್ದಾರೆ.





**ವಿಕಲಚೇತನರಿಂದ ಮತದಾನದ ಜಾಗೃತಿ ರ್‍ಯಾಲಿ**

**ದಾವಣಗೆರೆ ಹೈಸ್ಕೂಲ್ ಮೈದಾನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಮತದಾರರ ಜಾಗೃತಿ (ಸ್ವೀಪ್) ತ್ರಿಚಕ್ರ ಬೈಕ್ ರ್‍ಯಾಲಿ ನಡೆಯಿತು. ರಾಮ್ ಅಂಡ್ ಕೋ ವೃತ್ತದಲ್ಲಿ ಜಿಲ್ಲಾ ಪಂಚಾಯ್ತಿ ಸಿಇಓ ಸುರೇಶ್ ಹಿಟ್ನಾಳ್ ದೋಸೆ ಹಾಕುವ ಮೂಲಕ ಮತದಾನ ಜಾಗೃತಿ ಮೂಡಿಸಿದರು. (ಬಲಚಿತ್ರ)**

## ಅಕ್ರಮ ಮದ್ಯ: ಅಬಕಾರಿ ಇಲಾಖೆ ದಾಳಿ





ದಾವಣಗೆರೆ ಏ. 12 - ಸಾರ್ವತ್ರಿಕ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ 9,96,542 ರೂ. ಮೌಲ್ಯದ ಅಕ್ರಮ ಮದ್ಯ, ಬಿಯರ್ ಹಾಗೂ ದ್ವಿಚಕ್ರ ವಾಹನವನ್ನು ಅಬಕಾರಿ ಇಲಾಖೆಯಿಂದ ಜಪ್ತು ಪಡಿಸಿಕೊಂಡು ಈ ಸಂಬಂಧ ಒಟ್ಟಾರೆ 101 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಜಿಲ್ಲಾ ಅಬಕಾರಿ ಉಪ ಆಯುಕ್ತರು ತಿಳಿಸಿದ್ದಾರೆ.

ವಿಧಾನಸಭಾ ಚುನಾವಣಾ ಹಿನ್ನೆಲೆಯಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟುವ ಸಲುವಾಗಿ ಜಾರಿ ಮತ್ತು ತನಿಖಾ ಕಾರ್ಯಗಳನ್ನು ಚುರುಕುಗೊಳಿಸಿ ದಾಳಿ ನಡೆಸಲಾಗಿದೆ.ಮಾರ್ಚ್ 29 ರಿಂದ ಏಪ್ರಿಲ್ 9 ರವರೆಗೆ 556.335 ಲೀ. ಮದ್ಯ, 70.870 .ಲೀ. ಬಿಯರ್ ಹಾಗೂ 20 ದ್ವಿಚಕ್ರ ವಾಹನಗಳು ಸೇರಿದಂತೆ ಒಟ್ಟು 9,96,542 ರೂ. ಮೊತ್ತದ ದಾಸ್ತಾನನ್ನು ವಶಪಡಿಸಿಕೊಳ್ಳಲಾಗಿದೆ.

ಮದ್ಯ ಸಾಗಾಣಿಕೆ/ದಾಸ್ತಾನು ಕುರಿತಂತೆ 27 ಘೋರ ಮೊಕದ್ದಮೆಗಳು, ಸಾರ್ವಜನಿಕ ಸ್ಥಳಗಳಲ್ಲಿ ಮದ್ಯ ಮಾರಾಟ ಕುರಿತು 55 ಮೊಕದ್ದಮೆಗಳು ಹಾಗೂ ಮದ್ಯದಂಗಡಿಗಳಲ್ಲಿನ ಸನ್ನದು ಷರತ್ತುಗಳ ಉಲ್ಲಂಘನೆಗಾಗಿ 19 ಬಿ.ಎಲ್.ಸಿ ಮೊಕದ್ದಮೆಗಳನ್ನು ಒಳಗೊಂಡಂತೆ ಒಟ್ಟಾರೆಯಾಗಿ 101 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ.


**ಜೈ ಶ್ರೀಮನ್ನಾರಾಯಣ** ವಿಕಾಸ ತರಂಗಿಣಿ, ದಾವಣಗೆರೆ 28ನೇ ವರ್ಷದ ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ ಏಪ್ರಿಲ್ 1 ರಿಂದ ಮೇ 15ರವರೆಗೆ. ಸ್ಥಳ : ಮಹಾನಗರ ಪಾಲಿಕೆ ಆವರಣ. ಇಂದಿನ ಮಜ್ಜಿಗೆ ಪ್ರಾಯೋಜಕರು : ಶಿವ, ರಾಮ, ಕೃಷ್ಣ, ಮಹಿಳಾ ಭಕ್ತ ಮಂಡಳಿ, ಕಬ್ಬಳ ಕ್ಯಾಂಪ್, ಚನ್ನಗಿರಿ ತಾಲ್ಲೂಕು ಇವರುಗಳ ಸೇವಾರ್ಥ

**ಬೆಂಗಳೂರಲ್ಲಿ ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿದವೆ** ಮಲ್ಲೇಶ್ವರಂ ಮಧ್ಯೆ ಸ್ಥಳದಲ್ಲಿ ದಕ್ಷಿಣ-ಪಶ್ಚಿಮ ಕಾರ್ನರ್ (ಕಮರ್ಷಿಯಲ್) 150x160, ಶೇಷಾದ್ರಿಪುರಂ ಉತ್ತರ-ಪಶ್ಚಿಮ ಕಾರ್ನರ್ (ಕಮರ್ಷಿಯಲ್) 120x80, ಉತ್ತರ 80x120 ಐಗೂರು ವಿಜಯಕುಮಾರ : 99457 02495, ಬಿ.ಆರ್. ನಾಗರಾಜ್ : 90083 08163

**ಸೈಟ್ ಮಾರಾಟಕ್ಕೆ** HITECH HOSPITAL ಹಿಂಭಾಗ 30X38 ಉತ್ತರ-ಪಶ್ಚಿಮ ಕಾರ್ನರ್ 30X40 ಉತ್ತರ ಕಿರಣ್ ಭೂಸನೂರ್ (AGENT) 98440 63409 97315 63409

**ಸೈಟುಗಳು ಮಾರಾಟಕ್ಕಿವೆ** ಹೊಸ ಬನಶಂಕರಿ ಲೇಔಟ್‌ನಲ್ಲಿ 40x45, 40x45 East ಅಕ್ಕ-ಪಕ್ಕ. 30x50 East, 40x43 East 40 ಅಡಿ ರೋಡ್‌ಗಿದೆ. 80x70 West, 60 ಅಡಿ ರೋಡ್‌ಗಿದೆ. ಐನಳ್ಳಿ ಚನ್ನಬಸಪ್ಪ ಏಜೆಂಟ್ 99166 12110

**ಸೈಟ್ ಸೇಲ್‌ಗೆ (KHB)** ಕರ್ನಾಟಕ ಹೌಸಿಂಗ್ ಬೋರ್ಡ್‌ನಲ್ಲಿ ರಿಜಿಸ್ಟರ್ ಖರ್ಚು ಸೇರಿ 1) 30x40 ಉತ್ತರ (31 ಲಕ್ಷ) 2) 20x30 ಪೂರ್ವ (14 ಲಕ್ಷ) 3) 40x60 (59 ಲಕ್ಷ) ಕಿರಣ್ ಭೂಸನೂರ್ (AGENT) 97315 63409 (ಮನೆ ಕಟ್ಟಲು ತುಂಬಾ ಚನ್ನಾಗಿ ಇದೆ)

**ಕರ್ನಾಟಕ ಗೃಹ ಮಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ** 40x60, 40x60 South ಅಕ್ಕ-ಪಕ್ಕ, 40x60 North 100 ಅಡಿ ರೋಡಿಗಿದೆ. 40x60, 40x60 East ಅಕ್ಕ-ಪಕ್ಕ, 40x60 West. ಐನಳ್ಳಿ ಚನ್ನಬಸಪ್ಪ ಏಜೆಂಟ್ 99166 12110

**ಬಾಡಿಗೆಗೆ** ಹಳೇ ಪಿ.ಬಿ. ರಸ್ತೆ, ಶ್ರೀ ಗಂಧ ಲಾಡ್ಜ್ ಪಕ್ಕದಲ್ಲಿ 1) ಗ್ರೌಂಡ್ ಫ್ಲೋರ್ - 800 ಅಡಿ, 2) ಮೊದಲನೇ ಮಹಡಿ - 4000 ಅಡಿ 3) ಎರಡನೇ ಮಹಡಿ - 4000 ಅಡಿ 4) Terrace Floor - 4000 ಅಡಿ 5) Basement - 4000 ಅಡಿ ಸಂಪರ್ಕಿಸಿ : ಮೊ. 94480 28103

**ಬೇಕಾಗಿದ್ದಾರೆ** ಬ್ರಾಂಡೆಡ್ ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ. 98867 57688

**ವಾಣಿಜ್ಯ ಕಟ್ಟಡ ಬಾಡಿಗೆಗೆ** ಹದಡಿ ಮುಖ್ಯ ರಸ್ತೆಯಲ್ಲಿರುವ ಟಿವಿಎಸ್ ಶೋರೂಂ ಪಕ್ಕ ಹಾಗೂ ಉದಯ ಬಜಾರ್ ಎದುರಗಡೆ ಇರುವ ಸುಸಜ್ಜಿತ ವಾಣಿಜ್ಯ ಕಟ್ಟಡ ಬಾಡಿಗೆಗಿದೆ. ನೆಲ ಮಹಡಿ 3800 ಅಡಿಗಳು, ಮೊದಲನೇ ಮಹಡಿ 1600 ಅಡಿಗಳು. ಸೆಲ್ಲರ್ 2400 ಅಡಿಗಳು ಸಂಪರ್ಕಿಸಿ. 96205 95579

**ಬಾಡಿಗೆಗೆ** ಪಿ.ಜೆ. ಬಡಾವಣೆಯಲ್ಲಿ 8ನೇ ಮೇನ್, 8ನೇ ಕ್ರಾಸ್‌ನಲ್ಲಿ ಮೂರು ಬೆಡ್‌ರೂಂ ಮತ್ತು ಒಂದು ಬೆಡ್ ರೂಂ ಮನೆ ಬಾಡಿಗೆಗೆ ಇವೆ. ಸಂಪರ್ಕಿಸಿ : ಮೊ. 94480 28103

**ಕಮರ್ಷಿಯಲ್ ಸೈಟ್ ಮಾರಾಟಕ್ಕೆ (45 ಲಕ್ಷಕ್ಕೆ)** KHB ತುಂಗಭದ್ರಾ ಬಡಾವಣೆಯಲ್ಲಿ 30x51.5 (1545 ಅಡಿ) ದಕ್ಷಿಣ ಮತ್ತು ಉತ್ತರ ರೋಡ್ ಇದೆ ಬನ್ನಿಕೋಡ್‌ನ 60 ಅಡಿ ರಸ್ತೆಗೆ ಬಸವೇಶ್ವರ ಸ್ಕೂಲ್ ಎದುರು ಕಿರಣ್ ಭೂಸನೂರ್ (AGENT) 98440 63409 (ರಿಜಿಸ್ಟರ್ ಖರ್ಚು+ ಕಮೀಷನ್ ಸೇರಿ)

**SPOKEN ENGLISH** * Grammar & Vocabulary * Writing Skills * Pronunciation * Story telling * Public Speaking Call : 98442 39618

**ಲೋನ್ ಕೊಡಲಾಗುತ್ತದೆ** ವ್ಯಾಪಾರ ಸಾಲ, ಆಸ್ತಿ ಸಾಲ, ಆಸ್ತಿ ಖರೀದಿ, ರಿಪೇರಿ ಸಾಲ, ಉದ್ಯೋಗ ಸಾಲ, ವೈಯಕ್ತಿಕ ಸಾಲ ಇನ್ನು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : 74835 24662

**ಸೈಟುಗಳು ಮಾರಾಟಕ್ಕಿವೆ** LIC ಕಾಲೋನಿಯಲ್ಲಿ ಸಿದ್ದವೀರಪ್ಪ ಬಡಾವಣೆಯಲ್ಲಿ ಆಂಜನೇಯ ಬಡಾವಣೆಯಲ್ಲಿ 30x50 West, 30x42 South, 30x40 West, 30x38 North. ಐನಳ್ಳಿ ಚನ್ನಬಸಪ್ಪ ಏಜೆಂಟ್ 99166 12110

**ಜಮೀನು ಮಾರಾಟಕ್ಕಿದೆ** ಶ್ಯಾಗಲೆ ಗ್ರಾಮದಲ್ಲಿ 1 ಎಕರೆ, 15 ಗುಂಟೆ ನೀರಾವರಿ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ : 97434 19009

**EC / ಇಸಿ, E-swathu, Khatha Change Building Licence & Other Property Documents** 96118-66449

**PART TIME JOBS** ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ (ಕೊರಿಯರ್ ಸೌಲಭ್ಯವಿದೆ) 87490 98879

**ಬೇಕಾಗಿದ್ದಾರೆ** ಅನುಭವವುಳ್ಳ ಬಿ.ಕಾಂ ಪದವೀಧರರು ಸೆಕ್ರೆಟರಿ ಹುದ್ದೆಗೆ ಬೇಕಾಗಿದ್ದಾರೆ. ವೈಶ್ಯ ಸೌಹಾರ್ದ ಕೋ-ಆಪ್ ಲಿಮಿಟೆಡ್ ನರಸರಾಜ ರಸ್ತೆ, ದಾವಣಗೆರೆ. 78923 94568, 85531 86185

**ಗೋಡೌನ್ ಬಾಡಿಗೆಗಿದೆ** ಆವರಗೆರೆ, ದಾವಣಗೆರೆಯಲ್ಲಿ 5500 ಚದುರಡಿ ವಿಸ್ತೀರ್ಣವುಳ್ಳ, ವಿದ್ಯುತ್, ನೀರು, ಪಾರ್ಕಿಂಗ್, ಬಾತ್ ರೂಂ ಮತ್ತು ಕಾಂಪೌಂಡ್ ಸಹಿತ ಸುಸಜ್ಜಿತ ಗೋಡೌನ್ ಬಾಡಿಗೆಗಿದೆ. 98444 30813

**ಜೆ ಸಿ ಬಿ ಆಪರೇಟರ್ ಬೇಕಾಗಿದ್ದಾರೆ** ತಿಂಗಳಿಗೆ 18000/- ರೂಪಾಯಿಗಳು 88842 28109 98444 92885 97319 99977

**ಬೇಕಾಗಿದ್ದಾರೆ** ಬ್ಯೂಟಿಷಿಯನ್ ಕೆಲಸಕ್ಕೆ ಬೇಕಾಗಿದ್ದಾರೆ. ಸಮಯ : ಬೆಳಿಗ್ಗೆ 10 ರಿಂದ ರಾತ್ರಿ 8 ರವರೆಗೆ. 81974 43214

**ಮನೆ ಬಾಡಿಗೆಗೆ** ಸರಸ್ವತಿ ಬಡಾವಣೆ 'ಬಿ' ಬ್ಲಾಕ್, 1ನೇ ಮೇನ್, 4ನೇ ಕ್ರಾಸ್, ಕೆ.ಎಸ್.ಎಸ್. ಕಾಲೇಜ್ ಎದುರು ರಸ್ತೆ, ಶ್ರೀಕರ #829/15, ಪೂರ್ವ ದಿಕ್ಕು, 2 ಬೆಡ್ ರೂಂ, ಬೋರ್ / ಮುನ್ಸಿಪಲ್ ನೀರು, ಕಾರ್ ಪಾರ್ಕಿಂಗ್, 1ನೇ ಮಹಡಿಯಲ್ಲಿ ಮನೆ ಬಾಡಿಗೆಗೆ ಇದೆ. 96203 99426

**ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ** ವರ್ಕ್ ಫ್ರಮ್ ಹೋಮ್ (ಟೆಲಿ ಕಾಲಿಂಗ್), (ಪಾರ್ಟ್ ಟೈಮ್ / ಫುಲ್ ಟೈಮ್) ಆಫೀಸ್ ವರ್ಕ್ (ಟೆಲಿಕಾಲಿಂಗ್) (ಪಾರ್ಟ್ ಟೈಮ್ / ಫುಲ್ ಟೈಮ್) (ಯಾವುದೇ ಶುಲ್ಕ ಇರುವುದಿಲ್ಲ) ಸಂಬಳ : 20000-32000 ವಿದ್ಯಾರ್ಹತೆ : SSLC, PUC & Any Degree ಫೋ: 90082 37715

**ಬೇಕಾಗಿದ್ದಾರೆ** * ಶಾಲೆಗೆ ವಾಹನ ಚಾಲಕರು * ಸೆಕ್ಯೂರಿಟಿ ಗಾರ್ಡ್ ಏಜೆನ್ಸಿ * ಶಾಲಾ ಆಯಾ ಕೆಲಸಕ್ಕೆ ನುರಿತ ಆಯಾಗಳು ಎಂಇಎಸ್ ಕಾಲೇಜ್ ಆಂಜನೇಯ ಬಡಾವಣೆ, ದಾವಣಗೆರೆ. 98804 36414

**ADDITIONAL INCOME OPPORTUNITY** Looking for Business Associate partners TATA New Branch @ Davanagere › House wife › Retired › Businessman Age : 30 to 60 Years. 98447 45856

**ಬೇಕಾಗಿದ್ದಾರೆ** ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಲು ಶಿಕ್ಷಕ / ಶಿಕ್ಷಕಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ : BA, B.Ed, MA, M.Ed, B.Sc, B.Com, ಜೊತೆ ಉತ್ತಮ ಇಂಗ್ಲೀಷ್ ಮಾತನಾಡಬಲ್ಲವರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ : 91488 61033, 91481 33799

**WANTED** Any Degree with Computer knowledge is must. for Male & Female. Contact : Excellent Electronics, #2137/1, 4th Main, 3rd Cross, MCC A Block, Davanagare. 577004. Tel No. 98865 15100

**COMMERICAL SPACE FOR RENT** Ground Floor 950 Sq.ft KTG Nagar, 8th Cross, K.B Extension, Nittuvalli Road, Davanagere. 99452 21313

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ** ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ : 91642 22937

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)** ನಿಮ್ಮ ಮನೆ ಮತ್ತಿತರ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ: ಮೊ. 9538777582 ಕೆಲಸ 100% ಗ್ಯಾರಂಟಿ.

**Avoid Mosquitoes** Mosquito Nets for doors & windows Sri Gowri Enterprises #7C2, 4th cross Near Shaneshwara Temple Karur Industrial Area, P.B Road, Davanagere -577006 72049 94628

**JOBS** HR, Civil Engineer, Autocad Draftsman, Telecallers, CRM, Billing, sales, Graphic Designer, Office Manager, Marketing, Cashier, Digital Marketing 98444 92888

**WANTED** Labour Welfare / HR (HOD) Officer 8-10 Years Experience. from Shamanur Pharma Health Care Pvt. Ltd., 374, 4th Main, P.J Extension Davanagere. 98441 20003

**TEACHERS WANTED** LKG-UKG- 4 POSTS. Kan-2, Eng-2, Maths-2, EVS - 2 Contact : Vidya Vikas Convent Behind Araike Hospital, Davanagere. 83109 32579

**ಕೆಲಸಕ್ಕೆ ಬೇಕಾಗಿದ್ದಾರೆ** ದಾವಣಗೆರೆ ಶಾಖೆಯಲ್ಲಿ ರಿಕವರಿ & ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ ಶಿವಸಂಗಮ ಚಿಟ್ಸ್ ಪ್ರೈ.ಲಿ., ಶಿವಸಂಗಮ ಫೈನಾನ್ಸ್ (ರಿ.) ಸ್ಥಳ : ಡಾ|| ಬಿ.ಆರ್. ಶಿವಶಂಕರ್ ನಾಗರತ್ನಮ್ಮ ಸಂಕೀರ್ಣ, 4ನೇ ಮೇನ್, ಪಿ.ಜೆ. ಬಡಾವಣೆ, ರಾಂ & ಕೋ ಸರ್ಕಲ್ ಹತ್ತಿರ, ದಾವಣಗೆರೆ. ಶಾಖೆಗೆ ಸಂಪರ್ಕಿಸಿ : ಬೆಳಿಗ್ಗೆ 10 ರಿಂದ ಸಂಜೆ 6ರ ವರೆಗೆ 8197220933, 7353329440

**ಬೇಸಿಗೆಯ ಬಿಸಿ-ಬಿಸಿ ಆಫರ್** RO + UV ವಾಟರ್ ಫಿಲ್ಟರ್, 5499/- ರೂ. ಮಾತ್ರ. Fully automatic ಗ್ಯಾಸ್ ಗೀಸರ್ 3499/- ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ: ಮರುತ್ ಎಂಟರ್‌ಪ್ರೈಸಸ್ YMC ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ. 98868 96574, 98458 67574

**ಸೈಟುಗಳು ಮಾರಾಟಕ್ಕಿವೆ** ವಿವೇಕಾನಂದ ಬಡಾವಣೆ 40x60, 30x50 ಉತ್ತರ, 30x42 ಪಶ್ಚಿಮ, ಶಿವಕುಮಾರ ಬಡಾವಣೆ 30x40 ಉತ್ತರ, ಹಳೆ ಬನಶಂಕರಿ ಬಡಾವಣೆ 46x53 ಪಶ್ಚಿಮ-ದಕ್ಷಿಣ ಕಾರ್ನರ್, ಡಾಲರ್ಸ್ ಕಾಲೋನಿ 30x45 ಉತ್ತರ 50x50 ಉತ್ತರ. 95385 65909

**2 BHK ಮನೆ ಬಾಡಿಗೆಗಿದೆ** 2 ಬೆಡ್ ರೂಂ ಮನೆ, 1ನೇ ಫ್ಲೋರ್ ಸಿದ್ದವೀರಪ್ಪ ಬಡಾವಣೆ, 10ನೇ ಕ್ರಾಸ್, ಪಶ್ಚಿಮ ಬಾಗಿಲು, # 3711/E, ಸಾಯಿಬಾಬಾ ನಿಲಯ, ಮುನ್ಸಿಪಲ್, ಬೋರ್ ನೀರಿನ ವ್ಯವಸ್ಥೆಯಿರುತ್ತದೆ. 6362 624711, 99648 58493

**Learn For Future Career ADVANCED EXCEL** The Institute of Accounts & Tax Management (IATM), 2nd main, 6th cross, Ram & Co Circle, P.J. Exten, Davangere. Call for more Information On Course 97438 06120, 98867 63469

**ಲೈಂಗಿಕ ನಿಶ್ಶಕ್ತಿಗೆ ನಿರಾಶರಾಗಬೇಡಿ** ಶೀಘ್ರ, ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ. ದಾವಣಗೆರೆ: 2 & 3ರಂದು ಬಸವರಾಜ ಲಾಡ್ಜ ಪಿ.ಬಿ. ರಸ್ತೆ. ಡಾ|| ಎಚ್.ಆಯ್. ದೊಡ್ಡಮನಿ ದ್ಯಾಮಣಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್‌ಸ್ಟ್ಯಾಂಡ ಎದುರಿಗೆ, ಹುಬ್ಬಳ್ಳಿ M:9740523710

**JOB OPPORTUNITY** FEMALE OFFICE ASSISTANT For reputed Educational Institution Proficient in computer skills, office management and customer handling. For Contact : 97312 18567 send C.V-hardsoftdvg@gmail.com

**WANTED** Sr/ Jr Accounts executive M.com, B.com 2+ years of experience. Hostel supervisor Plumber, electrician, STP operator, Residential Engg, Carpenter, Car/ Bus Driver Min 5+ yrs of experience. 90199-64655

**WANTED** Sonalika Tractor Showroom SS India Tractors, Channagiri. ಮಲೇಬೆನ್ನೂರು, ಹೊನ್ನಾಳಿ ನಮ್ಮ ಶೋರೂಂ ಶಾಖೆಗಳಿಗೆ ಸೇಲ್ಸ್ ಮ್ಯಾನೇಜರ್, ಸೇಲ್ಸ್ ಎಕ್ಸಿಕ್ಯೂಟಿವ್ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ : 78996 77771

**CHANGE OF NAME** B SATISH (OLD NAME) R/O #122/2 Shamanuru Davangere - 577004, Have Changed My As B.C. Satish (New Name) Vide Affidavit Sworn Before Notary H.M. Doddagoudar Notary Public Davangere. Dated 12-04-2023.

**ಪ್ರವೇಶ ಪ್ರಕಟಣೆ** ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಮಾನಸ ಕಮ್ಯೂನಿಟಿ ಕಾಲೇಜ್ (ರಿ) LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002. 97402 58276

**ಪ್ರವೇಶ ಪ್ರಕಟಣೆ** SSLC, PUC -(Arts/Com/Sci) NURSERY TEACHER TRAINING (NTC) BA , B.COM, BBA, MBA (ALL) ಶ್ರೀ ಗಂಗೋತ್ರಿ ಕರೆಸ್ಪಾಂಡೆನ್ಸ್ ಕಾಲೇಜ್, ಲಾಯರ್ ರೋಡ್, ದಾವಣಗೆರೆ. 8660235013

**ಸಾಲಗಳಿಗಾಗಿ ಸಂಪರ್ಕಿಸಿ** ಮನೆ ಕಟ್ಟಲು, ಖರೀದಿ, ಅಡಮಾನ, ಸೈಟ್ ಖರೀದಿ ಮತ್ತು ಫೈನಾನ್ಸ್ ಕಂಪನಿಗಳ ಸಾಲ ನಮ್ಮ ಬ್ಯಾಂಕಿಗೆ ಸಾಲ ವರ್ಗಾವಣೆಗೆ ಇಂದೇ ಕರೆ ಮಾಡಿ (ಬಡ್ಡಿ ದರ ವಾರ್ಷಿಕ 8.5%) ಫೋ. : 99455 22287

# ಸಿವಿಜಿಲ್ ಆಪ್ ಬಳಕೆ; ಚುನಾವಣಾ ಅಕ್ರಮಗಳ ಮೇಲೆ ಹದ್ದಿನ ಕಣ್ಣು: ಡಿಸಿ



ದಾವಣಗೆರೆ, ಏ.12- ಸಾರ್ವತ್ರಿಕ ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ದಂತೆ ಮತದಾರರಿಗೆ ಸಹಾಯ ಮತ್ತು ಚುನಾವಣಾ ಅಕ್ರಮಗಳ ಮೇಲೆ ಹದ್ದಿನ ಕಣ್ಣಿಟ್ಟಿದ್ದು ಮಾದರಿ ನೀತಿ ಸಂಹಿತೆ ಜಾರಿಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ಜಿಲ್ಲೆಯಾದ್ಯಂತ ವಿವಿಧೆಡೆ ಚೆಕ್‌ಪೋಸ್ಟ್‌ಗಳಲ್ಲಿ ತೀವ್ರ ನಿಗಾ ವಹಿಸಲಾಗಿದ್ದು, ಅದರಂತೆ ಎಲ್ಲಾ ತಾಲ್ಲೂಕುಗಳಲ್ಲಿ ಮತ್ತು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಂಟ್ರೋಲ್ ರೂಂ ಸ್ಥಾಪಿಸಿ ಸಾರ್ವಜನಿಕರ ಮಾಹಿತಿಗೆ ಸಹಾಯವಾಣಿ ಹಾಗೂ ಟೋಲ್‌ಫ್ರೀ ನಂಬರ್‌ಗಳ ಮೂಲಕ ನಿಯಂತ್ರಿಸಲಾಗುತ್ತಿದೆ.

ಚುನಾವಣೆ ಅಕ್ರಮಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದಲ್ಲಿ ಕಂಟ್ರೋಲ್ ರೂಂ ಸ್ಥಾಪಿಸಲಾಗಿದ್ದು, 1950 ಮತ್ತು 18004251342 ಟೋಲ್‌ಫ್ರೀ ನಂಬರ್‌ಗಳ ಮೂಲಕ ಸಾರ್ವಜನಿಕರಿಂದ ಕರೆಗಳನ್ನು ಸ್ವೀಕರಿಸಲಾಗುತ್ತಿದೆ. ಮಾ.29 ರಿಂದ ಏಪ್ರಿಲ್ 12 ರ ವರೆಗೆ ಒಟ್ಟು 228 ದೂರುಗಳನ್ನು ಸ್ವೀಕರಿಸಲಾಗಿದೆ. ಇದರಲ್ಲಿ ಮತದಾರರ ಪಟ್ಟಿಯ ಮಾಹಿತಿ, ಮತದಾರರ ಹೆಸರು ಬದಲಾವಣೆ, ಚುನಾವಣಾ ಗುರುತಿನ ಚೀಟಿಗಳ ಬಗ್ಗೆ ಮಾಹಿತಿ ನೀಡಲಾಗಿದೆ.

ಸಿವಿಜಿಲ್ ಆಪ್ ಮೂಲಕವು ಚುನಾವಣೆ ಅಕ್ರಮಗಳ ಬಗ್ಗೆ ದೂರು ಸ್ವೀಕರಿಸಲಾಗುತ್ತಿದೆ. ಸಿವಿಜಿಲ್ ಸಿಟಿಜನ್ ಆಪ್ ಡೌನ್‌ಲೋಡ್ ಮಾಡಿಕೊಂಡು ಚುನಾವಣೆ ಅಕ್ರಮ, ಮಾದರಿ ನೀತಿ ಸಂಹಿತೆ ಉಲ್ಲಂಘನೆಗೆ ಸಂಬಂಧಿಸಿದಂತೆ ಫೋಟೋ ಸಹಿತ ಮಾಹಿತಿ ಹಾಕಿದ 20 ನಿಮಿಷಗಳಲ್ಲಿ ಪರಿಹಾರ ದೊರಕಲಿದೆ. ಸಿವಿಜಿಲ್ ಆಪ್ ಮೂಲಕ ಸಾರ್ವಜನಿಕರು ನೇರವಾಗಿ ಫೋಟೋ, ವಿಡಿಯೋ ಮತ್ತು ಆಡಿಯೋ ಸೆರೆ ಹಿಡಿದು ಕಳುಹಿಸಿದ ತಕ್ಷಣ ನಿಯಂತ್ರಣ ಕೊಠಡಿಗೆ ತಲುಪಲಿದ್ದು, ಎಫ್.ಎಸ್.ಟಿ. ತಂಡವು 10 ನಿಮಿಷದೊಳಗಾಗಿ ಸ್ಥಳಕ್ಕೆ ಆಗಮಿಸಿ ಕ್ರಮ ಕೈಗೊಳ್ಳಲಿದ್ದು ಇದು ಸಿವಿಜಿಲ್‌ನ ವಿಶೇಷತೆಯಾಗಿದೆ.

ಜಿಲ್ಲೆಯಲ್ಲಿ ಸಿವಿಸಿಲ್ ಆಪ್ ಪರಿಶೀಲನೆಗೂ ಪ್ರತ್ಯೇಕ ತಂಡ ಕಾರ್ಯ ನಿರ್ವಹಿಸುತ್ತಿದೆ. ಇದುವರೆಗೂ 26 ದೂರುಗಳು ಸ್ವೀಕಾರವಾಗಿವೆ. ಅದರಲ್ಲಿ 12 ಸಾರ್ವಜನಿಕ ಸ್ಥಳಗಳಲ್ಲಿ ರಾಜಕೀಯ ಪಕ್ಷಗಳ ಚಿನ್ಹೆ, ಮುಖಂಡರ ಭಿತ್ತಿಪತ್ರಗಳಿಗೆ ಸಂಬಂಧಿಸಿದ್ದಾಗಿದೆ. ಅವುಗಳನ್ನು ಸ್ವೀಕರಿಸಿ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಇನ್ನೂ ಪರಿಣಾಮಕಾರಿಯಾಗಿ ಚುನಾವಣಾ ಅಕ್ರಮಗಳನ್ನು ತಡೆಗಟ್ಟಲು ಸಾರ್ವಜನಿಕರು ಸಿವಿಜಿಲ್ ಆಪ್ ಡೌನ್‌ಲೋಡ್ ಮಾಡಿಕೊಂಡು ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳು ಕಂಡುಬಂದಾಗ ಇದನ್ನು ಸೆರೆ ಹಿಡಿದಲ್ಲಿ ಸಹಾಯಕವಾಗಲಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

## ಹರಪನಹಳ್ಳಿ : ಇಂದು ಚಿಣ್ಣರ ಬೇಸಿಗೆ ರಂಗ ಶಿಬಿರ

ಕತ್ತಲೆ ಬೆಳಕು ಟ್ರಸ್ಟ್‌ವತಿಯಿಂದ ಪಟ್ಟಣದ ಕಾಶಿ ಮಠದ ಆವರಣದಲ್ಲಿ ಇಂದಿನಿಂದ ಇದೇ ದಿನಾಂಕ 30ರವರೆಗೆ ಚಿಲಿಪಿಲಿ ಸಮಾಗಮದ ಮೂಲಕ 7ರಿಂದ 14 ವರ್ಷದ ಮಕ್ಕಳಿಂದ ಚಿಣ್ಣರ ಬೇಸಿಗೆ ರಂಗ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್‌ನ ನಿರ್ದೇಶಕರಾದ ಅರುಣ್ ರಂಗಾಯಣ, ಶ್ಯಾಮಲ ತಿಳಿಸಿದ್ದಾರೆ.

ಶಿಬಿರದಲ್ಲಿ ರಂಗ ಗೀತೆ, ರಂಗಾಟ, ಕೋಲಾಟ, ದೊಡ್ಡಾಟ, ಅಭಿನಯ, ಮೈಮ್, ಕಥೆ, ಕವಿತೆ ವಾಚನ, ಚಿತ್ರಕಲೆ, ಆರ್ಟ್-ಕ್ರಾಫ್ಟ್ ಮುಖವಾಡ ತಯಾರಿ ಹಾಗೂ ಶಿಬಿರದ ಕೊನೆಯಲ್ಲಿ ರಂಗಭೂಮಿಯ ಸೃಜನಶೀಲ ಚಟುವಟಿಕೆಗಳಿಂದ ಮಕ್ಕಳಿಂದ ನಾಟಕ ಪ್ರದರ್ಶನ ನಡೆಯಲಿದೆ. ಮಾಹಿತಿಗಾಗಿ 88809 66608, 99008 35621 ಸಂಪರ್ಕಿಸಬಹುದು.

# ಟೆಲಿಕಾಲಿಂಗ್ ಮೂಲಕ ಮತ ಸೆಳೆಯುವ ಯತ್ನ : ಕಾಂಗ್ರೆಸ್ ಆರೋಪ, ಮಾತಿನ ವಾಗ್ವಾದ



ದಾವಣಗೆರೆ, ಏ. 12- ಟೆಲಿಕಾಲ್ ಮೂಲಕ ಮತದಾರರನ್ನು ಸೆಳೆಯುವ ಪ್ರಯತ್ನವನ್ನು ಬಿಜೆಪಿಯವರು ಮಾಡುತ್ತಿದ್ದಾರೆಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ಚೇತನಾ ಹೋಟೆಲ್ ಬಳಿ ಎದುರಿಗಿದ್ದ ಟೆಲಿಕಾಲಿಂಗ್ ಕಚೇರಿ ಮುಂದೆ ಬುಧವಾರ ರಾತ್ರಿ ವಾಗ್ವಾದಕ್ಕಿಳಿದರು. ಪರಸ್ಪರ ವಾದ-ವಿವಾದಗಳ ನಂತರ ಬಡಾವಣೆ ಪೊಲೀಸರು ವಾತಾವರಣ ತಿಳಿಗೊಳಿಸಿದರು.

ಯಾವುದೇ ಪೂರ್ವಾನುಮತಿ ಪಡೆಯದೇ ಸುಮಾರು 59 ಕ್ಕೂ ಹೆಚ್ಚು ಲ್ಯಾಪ್‌ಟಾಪ್ ಬಳಸಿ ಆನ್‌ಲೈನ್ ಮೂಲಕ ಫಸಲ್ ಬಿಮಾ ಯೋಜನೆಯ ಬಗ್ಗೆ ರೈತರಿಗೆ ಮಾಹಿತಿ ತಿಳಿಸುವ ನೆಪದಲ್ಲಿ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡಲಾಗುತ್ತಿತ್ತು ಎಂದು ಹೇಳಲಾಗಿದೆ.

ಮಾಹಿತಿ ತಿಳಿದ ಚುನಾವಣಾಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಟೆಲಿಕಾಲಿಂಗ್ ಗೆ ಬಳಸಲಾಗುತ್ತಿದ್ದ ಲ್ಯಾಪ್‌ಟಾಪ್ ಗಳನ್ನು ವಶಪಡಿಸಿಕೊಂಡು ಕಚೇರಿಯನ್ನು ಸೀಜ್ ಮಾಡಿದ್ದಾರೆ.

ಚೇತನಾ ಹೋಟೆಲ್ ಎದುರಿಗಿನ ಖಾಸಗಿ ಆಸ್ಪತ್ರೆಯ ಬಿಲ್ಡಿಂಗ್‌ನಲ್ಲಿದ್ದ ಕಚೇರಿಯಲ್ಲಿ ಸುಮಾರು 60 ಕ್ಕೂ ಹೆಚ್ಚು ಜನರನ್ನು ಈ ಕಾರ್ಯಕ್ಕೆ ಬಳಕೆ ಮಾಡಿಕೊಂಡಿದ್ದರು ಎನ್ನಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಐದು ವರ್ಷಗಳ ಸಾಧನೆಯನ್ನು ಹಾಗೂ ರಾಜ್ಯ ಬಿಜೆಪಿ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಹೇಳುವುದು. ಬಿಜೆಪಿ ಕಮಲದ ಗುರುತಿಗೆ ಮತ ಚಲಾಯಿಸುವಂತೆ ಆಮಿಷ ಒಡ್ಡುವ ರೀತಿಯಲ್ಲಿ ಆನ್‌ಲೈನ್ ಮೂಲಕ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡಲಾಗುತ್ತಿದೆ ಎಂಬ ದೂರು ಕೇಳಿಬಂದಿದೆ.

ಗುಜರಾತ್, ಬಿಹಾರ ಮೂಲದವರಿಗೆ ಕಾರ್ಯನಿರ್ವಹಣೆ ಜವಾಬ್ದಾರಿ ವಹಿಸಲಾಗಿದೆ ಎಂದು ಹೇಳಲಾಗಿದ್ದು, ಸ್ಥಳೀಯರಿಗೆ ಉದ್ಯೋಗ ನೀಡುವ ನೆಪದಲ್ಲಿ ಮತ ಪ್ರಚಾರಕ್ಕೆ ಬಳಸಿಕೊಳ್ಳಲಾಗುತ್ತಿದೆ ಎನ್ನಲಾಗಿದೆ.

ಕಾಂಗ್ರೆಸ್ ಕಾರ್ಯಕರ್ತರ ದಾಳಿ: ವಿಷಯ ತಿಳಿದ ಕಾಂಗ್ರೆಸ್ ಕಾರ್ಯಕರ್ತರು ಸ್ಥಳಕ್ಕೆ ಆಗಮಿಸಿ ಟೆಲಿಕಾಲಿಂಗ್ ಕಚೇರಿಗೆ ದಾಳಿ ನಡೆಸಿ, ಆನ್‌ಲೈನ್‌ನಲ್ಲಿ ಮತ ಕೇಳುವ ಮೂಲಕ ವಾಮಮಾರ್ಗ ಅನುಸರಿಸುತ್ತಿದ್ದಾರೆಂದು ಆರೋಪಿಸಿದರು. ತಪ್ಪಿತಸ್ಥರು ಯಾರೇ ಆಗಿದ್ದರೂ ಅವರ ವಿರುದ್ಧ ಕ್ರಮ ಜರುಗಿಸುವಂತೆ ಒತ್ತಾಯಿಸಿದರು.

**ಬಿಜೆಪಿ ಸ್ಪಷ್ಟನೆ:** ಯಾವುದೇ ವಾಮಮಾರ್ಗದಲ್ಲಿ ಪ್ರಚಾರ ನಡೆಸುತ್ತಿಲ್ಲ. ಕಾಂಗ್ರೆಸ್‌ನವರು ಮಾಡುತ್ತಿರುವ ಆರೋಪ ಹಸಿ ಸುಳ್ಳು ಎಂದು ಬಿಜೆಪಿ ಮುಖಂಡರು ಸ್ಪಷ್ಟನೆ ನೀಡಿದರು.

ಬಡಾವಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ವಾತಾವರಣವನ್ನು ತಿಳಿಗೊಳಿಸಿದರು.

## ಮೇ 10ರಂದು ಜಾತ್ರೆ ಮತ್ತು ಸಂತೆ ರದ್ದು

ದಾವಣಗೆರೆ, ಏ.12- ವಿಧಾನಸಭಾ ಚುನಾವಣೆ ನಿಮಿತ್ತ ನೀತಿ ಸಂಹಿತೆ ಜಾರಿಯಲ್ಲಿದ್ದು, ದಾವಣಗೆರೆ ಉತ್ತರ, ದಕ್ಷಿಣ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ಮೇ 10 ರಂದು ಜಾತ್ರೆ ಮತ್ತು ಸಂತೆಯನ್ನು ರದ್ದುಪಡಿಸಲಾಗಿದೆ ಎಂದು ಮಹಾನಗರ ಪಾಲಿಕೆ ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ.

## ಕೊಟ್ಟೂರು : ಪೊಲೀಸ್ ಪಥ ಸಂಚಲನ



ಕೊಟ್ಟೂರು, ಏ. 12 - ವಿಧಾನಸಭೆ ಚುನಾವಣೆಯ ಪೂರ್ವದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯಬಾರದು. ಮತದಾರರು ನಿರ್ಭಯವಾಗಿ ಮತದಾನ ಮಾಡಬೇಕು. ಶಾಂತಿ-ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ರಾಪಿಡ್ ಆ್ಯಕ್ಷನ್ ಫೋರ್ಸ್ ವತಿಯಿಂದ ಕೊಟ್ಟೂರು ಪೊಲೀಸ್ ಠಾಣೆಯ ಸಹಕಾರದೊಂದಿಗೆ ಕೊಟ್ಟೂರು ಪಟ್ಟಣದಲ್ಲಿ ಪಂಥ ಸಂಚಲನ ಕೈಗೊಂಡರು.

ಕೊಟ್ಟೂರು ಪಟ್ಟಣದಲ್ಲಿ ವಿವಿಧ ಪ್ರಮುಖ ಬೀದಿಗಳಲ್ಲಿ ಪಂಥ ಸಂಚಲನ ನಡೆಸಲಾಯಿತು. ಸಂಚರಿಸಿ ಮತದಾರರಲ್ಲಿ ಭಯದ ವಾತಾವರಣ ಹೋಗಲಾಡಿಸಿದರು. ಪಥ ಸಂಚಲನ ಕೇಂದ್ರ ಭದ್ರತಾ ಪಡೆ ಮತ್ತು ಪೊಲೀಸ್ ಇಲಾಖೆ ಸಹಯೋಗದೊಂದಿಗೆ ನಡೆಯಿತು.

ಈ ಸಂದರ್ಭದಲ್ಲಿ ಕೊಟ್ಟೂರು ಸರ್ಕಲ್ ಇನ್ಸ್‌ಪೆಕ್ಟರ್, ಕೊಟ್ಟೂರು ಪಿಎಸ್‌ಐ, ಎಎಸ್‌ಐ, ಕೂಡ್ಲಿಗಿ ಡಿವೈಎಸ್ಪಿ ಹಾಗೂ ಪೊಲೀಸ್ ಸಿಬ್ಬಂದಿ ಇದ್ದರು.

## ಚುನಾವಣೆ : ಪೊಲೀಸ್ ಪಥ ಸಂಚಲನೆ




ಹರಪನಹಳ್ಳಿ, ಏ.12- ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ವತಿಯಿಂದ ಸಿ.ಆರ್.ಪಿ.ಎಫ್., ಡಿ.ಎ.ಆರ್ ಮತ್ತು ಪೊಲೀಸ್ ಸಿಬ್ಬಂದಿಗಳಿಂದ ತಾಲ್ಲೂಕಿನ ವಿವಿದ ಗ್ರಾಮಗಳಲ್ಲಿ ಮತದಾರರಿಗೆ, ಯಾರ ಪ್ರಭಾವಕ್ಕೊಳಗಾಗದೆ ಮುಕ್ತವಾಗಿ, ನಿರ್ಭಯವಾಗಿ ತಪ್ಪದೇ ಮತ ಚಲಾಯಿಸುವಂತೆ ಹಾಗೂ ಚುನಾವಣೆ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ನೋಡಿಕೊಂಡು ಇಲಾಖೆಗೆ ಸಹಕರಿಸಿ ಕಾನೂನು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವಂತೆ ಪಥಸಂಚಲನೆ ನಡೆಸಲಾಯಿತು.

ತಾಲ್ಲೂಕಿನ ಸೂಕ್ಷ್ಮ ಪ್ರದೇಶಗಳಾದ ಕುಂಚೂರು, ಹಲವಾಗಲು, ತೆಲಗಿ, ದುಗ್ಗಾವತಿ ಮತ್ತು ರಾಗಿಮಸಲವಾಡ ಗ್ರಾಮಗಳಲ್ಲಿ ಧ್ವನಿ ವರ್ಧಕದ ಮೂಲಕ ಪಥಸಂಚಲನ ಮಾಡಿ ಮತದಾರರಿಗೆ ಆತ್ಮಸ್ಥೈರ್ಯ ತುಂಬುವ ಕಾರ್ಯ ಮಾಡಲಾಯಿತು. ಈ ಸಂದರ್ಭದಲ್ಲಿ ಸಿಪಿಐ ನಾಗರಾಜ ಕಮ್ಮಾರ, ಪಿಎಸ್‌ಐ ಗುರುರಾಜ್, ಎಎಸ್‌ಐ ನಿಂಗಪ್ಪ, ಮಲ್ಲಿಕಾರ್ಜುನ ನಾಯ್ಕ ಸಿಬ್ಬಂದಿಗಳಾದ ಹೊನ್ನಪ್ಪ ಸೇರಿದಂತೆ ಇತರರು ಪಥಸಂಚಲನದಲ್ಲಿ ಭಾಗವಹಿಸಿದ್ದರು.

### ಓದುಗರ ಪತ್ರ

## ರೈಲ್ವೇ ಸ್ಟೇಷನ್: 2ನೇ ಫ್ಲ್ಯಾಟ್ ಫಾರಂ ಸಮಸ್ಯೆ ಬಗೆಹರಿಸಿ..!

**ಮಾನ್ಯರೇ,**

ದಾವಣಗೆರೆ ರೈಲ್ವೆ ನಿಲ್ದಾಣವೇನೋ ಅಪಾರ ವೆಚ್ಚ ಮಾಡಿ ಆಧುನಿಕರಣವಂತೂ ಆಯಿತು. ಹಲವು ವರ್ಷಗಳ ಸಾರ್ವಜನಿಕ ಒತ್ತಡಗಳ ಕಾರಣ ಒಂದೇ ಇದ್ದ ಪ್ಲಾಟ್ ಫಾರಂಗಳು ಎರಡಾದವು. ಇದರಿಂದಾಗಿ ಅರಸೀಕೆರೆ -ಬೆಂಗಳೂರು ಮಾರ್ಗದಲ್ಲಿ ಪ್ರಯಾಣ ಮಾಡುವ ಪ್ರಯಾಣಿಕರು ಸಂಭ್ರಮ ಪಟ್ಟಿದ್ದೂ ಉಂಟು. ಆದರೆ ಆ ಸಂಭ್ರಮ ಜಾಸ್ತಿ ದಿನ ಉಳಿಯಲಿಲ್ಲ.

ಅವರ ಪಾಲಿಗೆ ಅವರ ಕಛೇರಿ ಕೊಠಡಿಗಳ ಬಳಿ ಇರುವ ಒಂದನೇ ಪ್ಲಾಟ್ ಫಾರಂ ಮಾತ್ರ ರೈಲ್ವೆ ನಿಲ್ದಾಣಕ್ಕೆ ಸಂಬಂಧಪಟ್ಟಿದ್ದು ಅನ್ನುವ ಧೋರಣೆ ಎದ್ದು ಕಾಣುತ್ತಿದೆ. ನಿಲ್ದಾಣದ ದಕ್ಷಿಣ ಭಾಗದಿಂದ ಎರಡನೇ ಫ್ಲ್ಯಾಟ್ ಫಾರಂಗೆ ಬರುವ ಪ್ರಯಾಣಿಕರು ಮತ್ತೆ ಟಿಕೆಟ್ ಪಡೆಯಲು ಪರದಾಡುತ್ತಾ ಒಂದನೇ ಪ್ಲಾಟ್ ಫಾರಂಗೆ ಧಾವಿಸಬೇಕು. ಆ ಸಮಯ ಮಹಿಳಾ ಮತ್ತು ವೃದ್ಧ ಪ್ರಯಾಣಿಕರ ಸ್ಥಿತಿ ಅನುಭವಿಸಿಯೇ ತೀರಬೇಕು. ಇನ್ನು ಎರಡನೇ ಪ್ಲಾಟ್ ಫಾರಂನ ಶೌಚಾಲಯ ಶುಚಿಯಿಲ್ಲದೆ ಗಬ್ಬು ವಾಸನೆ ಬೀರುತ್ತದೆ. ಫ್ಯಾನ್‌ಗಳು ಇದ್ದರೂ ಅವನ್ನು ಚಲಾಯಿಸದೇ ಮಹಿಳೆಯರು, ಮಕ್ಕಳು, ವೃದ್ಧ ಪ್ರಯಾಣಿಕರು ಸುಡು ಬೇಸಿಗೆಯ ಸೆಖೆ ತಾಳಲಾರದೆ, ಅವರ ಒದ್ದಾಟ ನೋಡಲಾಗದು. ಪ್ರಯಾಣಿಕರಿಗೆ ಈ ಕನಿಷ್ಠ ಸೇವೆ ಸಮರ್ಪಕವಾಗಿ ಸಿಗುವಂತಾಗಲಿ.

**- ಇಮ್ತಿಯಾಜ್ ಹುಸೇನ್,** ದಾವಣಗೆರೆ.

## 15 ರಿಂದ ಅನಧಿಕೃತ ಪಂಪ್‌ಸೆಟ್ ತೆರವುಗೊಳಿಸಲು ಸೂಚನೆ

ದಾವಣಗೆರೆ, ಏ. 12- ಬೇಸಿಗೆ ಹಂಗಾಮಿಗಾಗಿ ಕಾಲುವೆಯಲ್ಲಿ ನೀರು ಹರಿಸಲಾಗುತ್ತಿದ್ದು, ನೀರನ್ನೆತ್ತಲು ಕಾಲುವೆಗೆ ಅನಧಿಕೃತ ಪಂಪ್‌ಸೆಟ್ ಗಳನ್ನು ಬೆಸ್ಕಾಂ, ಪೊಲೀಸ್, ನೀರಾವರಿ, ತಹಶೀಲ್ದಾರ್ ಹಾಗೂ ಇತರೆ ಅಧಿಕಾರಿಗಳ ಸಹಯೋಗದೊಂದಿಗೆ ಸೂಕ್ತ ಪೊಲೀಸ್ ಭದ್ರತೆಯಲ್ಲಿ ತೆರವುಗೊಳಿಸಲು ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ.

ಇದೇ ದಿನಾಂಕ 15 ರಿಂದ ಅನಧಿಕೃತ ಪಂಪ್‌ಸೆಟ್‌ಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಪ್ರಾರಂಭಿಸಲು ಯೋಜಿಸಲಾಗಿದ್ದು, ಚನ್ನಗಿರಿ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ದಾವಣಗೆರೆ ಶಾಖಾ ಕಾಲುವೆ 0.00 ಕಿಮೀ ಯಿಂದ 30.00 ಕಿಮೀವರೆಗೆ ಅನಧಿಕೃತ ಪಂಪ್‌ಸೆಟ್ ತೆರವುಗೊಳಿಸುವ ಕಾರ್ಯಾಚರಣೆ ಹಮ್ಮಿಕೊಳ್ಳಲಾಗಿರುತ್ತದೆ. ಆದ ಕಾರಣ ಅನಧಿಕೃತವಾಗಿ ನೀರನ್ನು ಎತ್ತಿಕೊಳ್ಳಲು ಅಳವಡಿಸಲಾಗಿರುವ ಪಂಪ್‌ಸೆಟ್‌ಗಳನ್ನು ತಕ್ಷಣ ತೆರವುಗೊಳಿಸಲು ಸೂಚಿಸಿದೆ. ತಪ್ಪಿದಲ್ಲಿ ಕರ್ನಾಟಕ ನೀರಾವರಿ ಕಾಯ್ದೆ 1965 ರನ್ವಯ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತ್ಯಾವಣಗಿ ಭದ್ರಾ ನಾಲಾ ಉಪ ವಿಭಾಗದ ಇಂಜಿನಿಯರ್ ತಿಳಿಸಿದ್ದಾರೆ.

## ಬೇಸಿಗೆ ಶಿಬಿರ : 'ಮಕ್ಕಳ ಸಂತೆ ಸ್ಪರ್ಧೆ'

ದಾವಣಗೆರೆ, ಏ. 12- ಅನ್ವೇಷಕರು ಆರ್ಟ್ ಫೌಂಡೇಶನ್ ವತಿಯಿಂದ ಇದೇ ದಿನಾಂಕ 3 ರಿಂದ ಆರಂಭಗೊಂಡಿರುವ ಮಕ್ಕಳ ಬೇಸಿಗೆ ಶಿಬಿರವು 23 ರವರೆಗೆ ನಡೆಯಲಿದೆ. ಈ ಶಿಬಿರದ ಪ್ರಯುಕ್ತ ಮಕ್ಕಳ ಸಂತೆ ಸ್ಪರ್ಧೆಯನ್ನು ಸಹ ಆಯೋಜಿಸಲಾಗಿದೆ ಎಂದು ಸಂಚಾಲಕ ಎಸ್. ಎಸ್. ಸಿದ್ಧರಾಜು ತಿಳಿಸಿದ್ದಾರೆ.

ಸ್ಪರ್ಧಾ ವಿಜೇತರಿಗೆ ಪ್ರಥಮ 5000, ದ್ವಿತೀಯ 3000, ತೃತೀಯ 2000 ಹಾಗೂ ಎರಡು ಸಮಾಧಾನಕರ 1000 ರೂ. ನಗದು ಬಹುಮಾನ ನೀಡಲಾಗುವುದು. ಮಕ್ಕಳಲ್ಲಿ ವಾಕ್‌ಚಾತುರ್ಯ, ಹಣಕಾಸು ವ್ಯವಹಾರಗಳ ಗ್ರಹಿಕೆ, ಕೌಶಲ್ಯ, ಸಾಮರ್ಥ್ಯ, ತಲ್ಲೀನತೆ, ಆತ್ಮವಿಶ್ವಾಸ ಹೆಚ್ಚಿಸಲಿದ್ದು, ಇದೇ ದಿನಾಂಕ 16 ರಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1.30 ರ ವರೆಗೆ ನಗರದ ದೃಶ್ಯಕಲಾ ಮಹಾವಿದ್ಯಾಲಯದ ಆವರಣದಲ್ಲಿ ಮಕ್ಕಳ ಸಂತೆ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

ಇದೇ ದಿನಾಂಕ 23 ರಂದು ಮಕ್ಕಳಿಂದ ಶಿಬಿರದಲ್ಲಿ ಕಲಿತ ಪ್ರಾತ್ಯಕ್ಷಿಕೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ನಾಟಕ ಪ್ರದರ್ಶನ ಸಹ ಇರುತ್ತದೆ. ವಿಜೇತರಿಗೆ ಬಹುಮಾನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ 9844268176 ಗೆ ಸಂಪರ್ಕಿಸಬಹುದು.

## 16ರಂದು ಜಿಲ್ಲಾ ಮಟ್ಟದ ಕವಿಗೋಷ್ಠಿ

ಹರಿಹರ, ಏ. 12 - ಹೊಂಗಿರಣ ಪತ್ರಿಕಾ ಬಳಗ ಮತ್ತು ಚಿಂತನ ಪ್ರತಿಷ್ಠಾನದ ಸಹಯೋಗದಲ್ಲಿ ಇದೇ ದಿನಾಂಕ 16ರ ಭಾನುವಾರ ಹರಿಹರದಲ್ಲಿ ಜಿಲ್ಲಾ ಮಟ್ಟದ ಕವಿಗೋಷ್ಠಿ ಮತ್ತು ಹೊಳೆಸಿರಿಗೆರೆಯ ಎ.ಬಿ.ಮಂಜಮ್ಮನವರ ಮುಕ್ತಕ ಸಂಕಲನ ಕವಿನಾಮ ನಾವಿಕ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ. ಆಸಕ್ತರು 20 ಸಾಲಿನ ಸ್ವರಚಿತ ಕವನವನ್ನು ಸುಬ್ರಹ್ಮಣ್ಯ ನಾಡಿಗೇರ್ (9242046726), ಡಾ.ಡಿ.ಫ್ರಾನ್ಸಿಸ್ (97313 95908) ಅವರಿಗೆ ಮೊಬೈಲ್ ವಾಟ್ಸ್‌ಆಪ್ ಮೂಲಕ ಕಳಿಸಬೇಕು.



## ವಿಜೃಂಭಣೆಯ ಕೂಡಲ ಸಂಗಮೇಶ್ವರ ಜಾತ್ರೆ

ದಾವಣಗೆರೆ, ಏ. 12 - ಬಾಗಲಕೋಟೆ ಜಿಲ್ಲೆ ಕೂಡಲ ಸಂಗಮದಲ್ಲಿ ಶ್ರೀ ಸಂಗಮೇಶ್ವರ ಜಾತ್ರೆಯು ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಇಂದು ವಿಜೃಂಭಣೆಯಿಂದ ನೆರವೇರಿತು. ಜಾತ್ರೆಯಲ್ಲಿ ದೂಡಾ ಮಾಜಿ ಅಧ್ಯಕ್ಷರೂ, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷರೂ ಆದ ದೇವರಮನೆ ಶಿವಕುಮಾರ್, ಸಹೋದರ ದೇವರಮನೆ ಶಿವರಾಜ್ ಅವರುಗಳು ಜಾತ್ರೆಯಲ್ಲಿ ಭಾಗವಹಿಸಿದ್ದರು.

## ನಗರದಲ್ಲಿ ನಾಳೆ ಡಾ.ಅಂಬೇಡ್ಕರ್ ಜಯಂತಿ



ದಾವಣಗೆರೆ, ಏ.12- ನಾಡಿದ್ದು ದಿನಾಂಕ 14 ರಂದು ಬೆಳಿಗ್ಗೆ 10.30 ಗಂಟೆಗೆ ಡಾ. ಬಿ.ಆರ್ ಅಂಬೇಡ್ಕರ್‌ರವರ 132ನೇ ಜಯಂತಿ ಯನ್ನು ಜಿಲ್ಲಾ ಧಿಕಾರಿಗಳ ಕಚೇರಿ ಸಭಾಂಗಣ ದಲ್ಲಿ ಸರಳವಾಗಿ ಆಚರಿಸಲಾ ಗುತ್ತದೆ.

ವಿಧಾನಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಜಿಲ್ಲಾಮಟ್ಟದ ಅಧಿಕಾರಿಗಳು ಸಹ ತಮ್ಮ ಕಚೇರಿಗಳಲ್ಲಿ ಸರಳವಾಗಿ ಆಚರಿಸಲು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

## ಶ್ರೀ ಶೈಲ ಪೀಠದ ಏಜೆಂಟರಾದ ಬಸವರಾಜ ಸ್ವಾಮಿ ನಿಧನಕ್ಕೆ ಸಂತಾಪ



ದಾವಣಗೆರೆ, ಏ.12- ನಿನ್ನೆ ಹೃದಯಾಘಾತದಿಂದ ನಿಧನರಾದ ಶ್ರೀಶೈಲ ಪೀಠದ ಏಜೆಂಟರಾದ ಎಮ್. ಎಸ್. ಬಸವರಾಜ ಸ್ವಾಮಿ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆಯು ಅವರ ಹುಟ್ಟೂರಾದ ರಾಣೇಬೆನ್ನೂರು ತಾಲ್ಲೂಕಿನ ಮುದೇನೂರಿನಲ್ಲಿ ಇಂದು ನಡೆಯಿತು.

ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅವರು ಅಗಲಿದ್ದಾರೆ. ಹರಿಹರದಲ್ಲಿರುವ ಮೃತರ ನಿವಾಸಕ್ಕೆ ಭೇಟಿ ನೀಡಿದ್ದ ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ, ಉಜ್ಜಯಿನಿ ಪೀಠದ ಜಗದ್ಗುರುಗಳು ಬಸವರಾಜ ಸ್ವಾಮಿ ಅವರ ಪಾರ್ಥಿವ ಶರೀರಕ್ಕೆ ಹೂಮಾಲೆ ಹಾಕಿ ಶ್ರದ್ಧಾಂಜಲಿ ಸಲ್ಲಿಸಿದರು.

ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ, ಮಾಜಿ ಶಾಸಕರುಗಳಾದ ಹೆಚ್.ಎಸ್. ಶಿವಶಂಕರ್, ಬಿ.ಪಿ. ಹರೀಶ್, ಶ್ರೀಶೈಲ ಮಠದ ವ್ಯವಸ್ಥಾಪಕ ಬನ್ನಯ್ಯ ಸೇರಿದಂತೆ ಅನೇಕ ಗಣ್ಯರು ಮೃತರ ನಿವಾಸಕ್ಕೆ ತೆರಳಿ ಬಸವರಾಜ ಸ್ವಾಮಿ ಅವರ ಅಂತಿಮ ದರ್ಶನ ಪಡೆದರು.

## ವಿಧಾನಸಭಾ ಚುನಾವಣೆ- ಪ್ಲಾಸ್ಟಿಕ್ ವಸ್ತುಗಳ ಬಳಕೆ ನಿಷೇಧ

ದಾವಣಗೆರೆ, ಏ. 12- ಕರ್ನಾಟಕ ವಿಧಾನ ಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮಗಳು, 2016 ರನ್ವಯ ಪ್ಲಾಸ್ಟಿಕ್ ವಸ್ತುಗಳ ಉತ್ಪಾದನೆ, ಸಂಗ್ರಹಣೆ, ವಿತರಣೆ, ಮಾರಾಟ, ಮತ್ತು ಬಳಕೆಯನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾ ಕ.ರಾ.ಮಾ.ನಿ.ಮಂ ಪರಿಸರ ಅಧಿಕಾರಿಗಳು ತಿಳಿಸಿದ್ದಾರೆ.

ಯಾವುದೇ ವ್ಯಕ್ತಿ, ಅಂಗಡಿ ಮಾಲಿಕ, ಮಾರಾಟಗಾರ, ಸಗಟು ಮಾರಾಟಗಾರ, ಅಥವಾ ಚಿಲ್ಲರೆ ವ್ಯಾಪಾರಿ, ವ್ಯಾಪಾರಿ ಮತ್ತು ಮಾರಾಟಗಾರರು ಪ್ಲಾಸ್ಟಿಕ್‌ನ ಕ್ಯಾರಿಬ್ಯಾಗ್, ಭಿತ್ತಿಪತ್ರ, ತೋರಣ, ಫ್ಲೆಕ್ಸ್, ಬಾವುಟ, ತಟ್ಟೆ, ಲೋಟ, ಚಮಚ, ಕಿಂಗ್ ಫಿಲ್ಮ್ ಮತ್ತು ಊಟದ ಮೇಜಿನ ಮೇಲೆ ಹರಡುವ ಹಾಳೆ ಹಾಗೂ ಥರ್ಮೋಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋ ಬೀಡ್ಸ್ ನಿಂದ ತಯಾರಾದಂತಹ ಯಾವುದೇ ವಸ್ತುಗಳ ಬಳಕೆಯನ್ನು ನಿಷೇಧಿಸಲಾಗಿದೆ.

ರಾಜಕೀಯ ಪಕ್ಷಗಳು, ಚುನಾವಣೆಗೆ ಸ್ಪರ್ಧಿಸಲಿರುವ ಅಭ್ಯರ್ಥಿಗಳು ಮುದ್ರಣಗೊಳಿಸುವ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್, ಧ್ವಜಗಳನ್ನು ಪ್ಲಾಸ್ಟಿಕ್‌ನಿಂದ ಮುದ್ರಿಸುವುದು, ತಯಾರಿಸುವುದು ಮತ್ತು ಬಳಕೆ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

# ವಿವಿಧ ವರ್ಗದ ಪಡಿತರ ಚೀಟಿದಾರರಿಗೆ ಆಹಾರ ಧಾನ್ಯ ಹಂಚಿಕೆ

ದಾವಣಗೆರೆ, ಏ. 12 - ಕೇಂದ್ರ ಸರ್ಕಾರದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಎನ್.ಎಫ್.ಎಸ್.ಎ ಆದ್ಯತಾ ಪಡಿತರ ಚೀಟಿಗಳ ಪ್ರತಿ ಫಲಾನುಭವಿಗಳಿಗೆ ಒಂದು ವರ್ಷದ ಅವಧಿಗೆ ಆಹಾರ ಧಾನ್ಯಗಳನ್ನು ಉಚಿತವಾಗಿ ನೀಡುವುದರೊಂದಿಗೆ, ಹೆಚ್ಚುವರಿಯಾಗಿ 1 ಕೆ.ಜಿ ಅಕ್ಕಿಯನ್ನು ರಾಜ್ಯ ಸರ್ಕಾರದ ವೆಚ್ಚದಲ್ಲಿ ವಿತರಿಸಲಾಗುತ್ತದೆ.

ಅಂತ್ಯೋದಯ ಪಡಿತರ ಚೀಟಿ (ಎ.ಎ.ವೈ) ಹೊಂದಿದವರಿಗೆ ಪ್ರತಿ ಕಾರ್ಡಿಗೆ 21 ಕೆ.ಜಿ ಅಕ್ಕಿ, 14 ಕೆ.ಜಿ ರಾಗಿ ಸೇರಿದಂತೆ ಒಟ್ಟು 35 ಕೆ.ಜಿ ಆಹಾರಧಾನ್ಯ, ಆದ್ಯತಾ ಪಡಿತರ ಚೀಟಿ (ಪಿ.ಹೆಚ್.ಹೆಚ್/ಬಿ.ಪಿ.ಎಲ್) ಹೊಂದಿದ ಪ್ರತಿ ಸದಸ್ಯರಿಗೆ 4 ಕೆ.ಜಿ ಅಕ್ಕಿ, 2 ಕೆ.ಜಿ ರಾಗಿ ಸೇರಿದಂತೆ ಒಟ್ಟು 6 ಕೆ.ಜಿ ಆಹಾರ ಧಾನ್ಯ ಹಾಗೂ 1 ಕೆ.ಜಿ ಗೆ ರೂ. 15 ರಂತೆ ಒಪ್ಪಿಗೆ ನೀಡಿದ ಏಕ ಸದಸ್ಯ ಎ.ಪಿ.ಎಲ್ ಪಡಿತರ ಚೀಟಿಗಳಿಗೆ 5 ಕೆ.ಜಿ ಅಕ್ಕಿ ಹಾಗೂ ಎರಡು ಮತ್ತು ಹೆಚ್ಚಿನ ಸದಸ್ಯರನ್ನು ಹೊಂದಿದ ಪಡಿತರ ಚೀಟಿಗಳಿಗೆ 10 ಕೆ.ಜಿ ಅಕ್ಕಿಯನ್ನು ವಿತರಿಸಲಾಗುವುದು.

ಅಂತರ್ ರಾಜ್ಯ/ಜಿಲ್ಲೆ ಪೋರ್ಟಬಿಲಿಟಿ ಜಾರಿಯಲ್ಲಿ ಇರುವುದರಿಂದ ಯಾವುದೇ ವರ್ಗದ ಪಡಿತರ ಚೀಟಿಗೆ ಸ್ಥಳೀಯ ನ್ಯಾಯಬೆಲೆ ಅಂಗಡಿಗಳಲ್ಲಿ ಉಚಿತವಾಗಿ ಪಡಿತರ ಪಡೆಯಲು ಅವಕಾಶವಿದೆ.

ಮೇಲ್ಕಂಡ ವಿವಿಧ ವರ್ಗದ ಪಡಿತರ ಚೀಟಿದಾರರು ತಮ್ಮ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿಗಳಲ್ಲಿ ಬಯೋ/ಆಧಾರ್ ಆಧರಿತ ಧೃಡೀಕರಣ ಓ.ಟಿ.ಪಿ ಮೂಲಕ ಪಡಿತರ ಆಹಾರ ಧಾನ್ಯ ಪಡೆಯಲು ಜಿಲ್ಲಾ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

# ನಿಷ್ಠಾವಂತ ಕಾರ್ಯಕರ್ತರಿಗೆ ಅನ್ಯಾಯ ; ಆಕ್ರೋಶ



ದಾವಣಗೆರೆ, ಏ.12- ಕೇಂದ್ರ ಹಾಗೂ ರಾಜ್ಯದ ಕಾಂಗ್ರೆಸ್ ವರಿಷ್ಠರು, ಮುಖಂಡರು ಪಕ್ಷದ ನಿಷ್ಠಾವಂತ ಕಾರ್ಯಕರ್ತರನ್ನು ಕಡೆಗಣಿಸಿದ್ದರ ಪರಿಣಾಮ ಈಗಾಗಲೇ ಕಾಂಗ್ರೆಸ್ ಸರ್ವನಾಶವಾ ಗಿದೆ. ಈ ಚುನಾವಣೆಯಲ್ಲಿ ಯಾದರೂ ಮಾಡಿದ ತಪ್ಪನ್ನು ಸರಿಪಡಿಸಿಕೊಳ್ಳುವತ್ತ ವರಿಷ್ಠರು ಕ್ರಮ ಕೈಗೊಳ್ಳದೇ ಹೋದರೆ, ಕಾಂಗ್ರೆಸ್ ಪಕ್ಷ ಅಧೋಗತಿಯತ್ತ ಸಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಕಾಂಗ್ರೆಸ್ ಟಿಕೆಟ್ ವಂಚಿತ ಆಕಾಂಕ್ಷಿ, ಕೆಪಿಸಿಸಿ ಸದಸ್ಯ ಹೆಚ್. ದುಗ್ಗಪ್ಪ ಅಸಮಾಧಾನ ಹೊರಹಾಕಿದ್ದಾರೆ.

ಕಾಂಗ್ರೆಸ್ ನಿಷ್ಠಾವಂತ ಕಾರ್ಯಕರ್ತರಿಗೆ ಚುನಾವಣೆಯಲ್ಲಿಸ್ಪರ್ಧಿಸಲುಅವಕಾಶಕೊಡದೇ ವಂಶ ರಾಜಕಾರಣಕ್ಕೆ ಹೆಚ್ಚು ಪ್ರಾತಿನಿಧ್ಯ ನೀಡಿದೆ. ಒಂದೇ ಕುಟುಂಬಕ್ಕೆ 2 ಟಿಕೆಟ್ ನೀಡುತ್ತಿದೆ. ಅಧಿಕಾರ ಅನುಭವಿಸಿದವರಿಗೆ ಮತ್ತೆ ಅವಕಾಶ ನೀಡುತ್ತಿದೆ. ಟಿಕೆಟ್ ಪಡೆದು ಸೋತವರಿಗೂ ಮಣೆ ಹಾಕುತ್ತಿದೆ. ಒಬ್ಬರಿಗೆ ಹತ್ತಾರು ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡುತ್ತಿದ್ದು, ನಿಷ್ಠಾವಂತ ಕಾರ್ಯಕರ್ತರಿಗೆ ಇದರಿಂದ ಅನ್ಯಾಯವಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಿನ್ನೆ, ಮೊನ್ನೆ ಪಕ್ಷಕ್ಕೆ ಬಂದವರಿಗೂ ಅಧಿಕಾರ ಸಿಗುತ್ತಿದೆ. 40-50 ವರ್ಷಗಳಿಂದ ಪಕ್ಷಕ್ಕೆ ದುಡಿದ ನಿಷ್ಠಾವಂತ ಕಾರ್ಯಕರ್ತರು ಎಲ್ಲಿಗೆ ಹೋಗಬೇಕು? ಕಾಂಗ್ರೆ ನೀತಿ, ಸಿದ್ಧಾಂತ ಎಲ್ಲಿ ಹೋಗಿದೆ ? ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂಬ ಸಿದ್ಧಾಂತ ಕಾರ್ಯರೂಪಕ್ಕೆ ಬರದೇ ಬರೀ ಪುಸ್ತಕದ ಬದನೆಕಾಯಿ ಎಂಬಂತಾಗಿದೆ ಎಂದು ಅವರು ಕಿಡಿಕಾರಿದ್ದಾರೆ.

ಅಗತ್ಯವಿದ್ದಾಗ ದುಡಿಸಿಕೊಂಡು ನಂತರ ಯಾವುದೇ ಸ್ಥಾನಮಾನ ನೀಡದೇ ನಮ್ಮನ್ನು ಕಡೆಗಣಿಸುತ್ತಾರೆ. ನಮ್ಮಂತಹ ಕಾರ್ಯಕರ್ತರಿಗೆ ಮೋಸವಾಗುತ್ತಿದೆ. ಅಧಿಕಾರವೆಲ್ಲಾ ಅವರಿಗೆ, ಕೆಲಸ ಕಾರ್ಯಗಳು ಮಾತ್ರ ನಮಗೆ ಎಂಬಂತಾಗಿದೆ. ಪಕ್ಷಕ್ಕೆ ಸೇರಿ 6 ತಿಂಗಳು 1 ವರ್ಷಕ್ಕೆ ನಾವೇನೂ ಸ್ಥಾನಮಾನ ಕೇಳುತ್ತಿಲ್ಲ. ಸತತವಾಗಿ ಕಳೆದ 40-50 ವರ್ಷಗಳಿಂದ ಪಕ್ಷದಲ್ಲಿದ್ದು ಸೇವೆ ಸಲ್ಲಿಸಿದ್ದೇವೆ. ಹಿರಿತನಕ್ಕಾದರೂ ಬೆಲೆ ಬೇಡವೇ? ಸಣ್ಣಪುಟ್ಟ ಸ್ಥಾನಮಾನವಾದರೂ ನೀಡಬೇಕೆಂಬ ಸೌಜನ್ಯವಿಲ್ಲವೇ? ಎಂದು ಪ್ರಶ್ನಿಸಿದ್ದಾರೆ.

40-50 ವರ್ಷಗಳಲ್ಲಿ ಒಮ್ಮೆಯೂ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡದವರಿಗೆ, ನಿಗಮ-ಮಂಡಳಿಗಳ ಅಧ್ಯಕ್ಷರನ್ನಾಗಿಯೂ ಮಾಡದವರಿಗೆ, ಅವಕಾಶ ನೀಡಿ, ಕಾರ್ಯಕರ್ತರು ಕೆಲಸ ಮಾಡುವಂತೆ ಹುರಿದುಂಬಿಸಬೇಕು ಎಂದು ದುಗ್ಗಪ್ಪ ಆಶಯ ವ್ಯಕ್ತಪಡಿಸಿದ್ದಾರೆ.


mi WINGS

REQUIRE CENTER HEAD AND TEACHERS

A Concept Prep school with Multiple Intelligence.
Candidate Should have min.
2 years experience in Preschool teaching.
Good Communication in English.
Call : 63609 93735
Send your resume to miwings8@gmail.com

JOB VACANCY

TELE CALLER

*Qualification : Any,* *SKILLS:* Computer Basics (MS Word/Excel, Browsing, Email Handling)
*TIMINGS:* Day Shift (10 AM to 5.30 PM)
LOCATION:
FIRST SOURCE
VIDYANAGAR, DAVANAGERE
63643 13092

BJM & GNB ENGLISH MEDIUM SCHOOL

Kondajji Road, Davanagere.

Wanted Teaching & Non-Teaching Staff

Walk in interviews on 16-4-2023, Sunday

| | |
|---|---|
| NURSERY, LKG & UKG | Montessori trained graduate with minimum 3 years of experience. |
| PRIMARY 1-5th | B.Sc, B.Ed with Computer knowledge |
| HIGHER PRIMARY VI TO VIII | BA. B.Ed (English major) |
| HIGHER PRIMARY VI TO VIII | B.Sc, B.Ed [CBZ] |
| HIGH SCHOOL | B.Sc, B.Ed [PCM] |
| HIGH SCHOOL | B.Sc, B.Ed [MSC] |
| Physical Education | CP. Ed & BP.Ed |
| Computer Teacher | Teaching, Taly & internet work |
| Hindi Teacher | Hindi B.A. B.Ed |
| Helpers & Watchman | SSLC |

Contact : 9980725505 / 9980581307 / 8861592534

*Note :* Fluency in English is mandatory.
Salary Negotiable.
Experienced graduates will be preferred.

# ಸಿಇಟಿ: ಮಾಹಿತಿ ತಿದ್ದುಪಡಿಗೆ 15ರವರೆಗೆ ಅವಕಾಶ

ಬೆಂಗಳೂರು, ಏ.12- ಈ ವರ್ಷದ ಸಿಇಟಿ ಪರೀಕ್ಷೆಗೆ ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಯಲ್ಲಿ ಅರ್ಹತೆಗೆ ಅನುಗುಣ ವಾಗಿ ಸಮರ್ಪಕ ಮಾಹಿತಿ ತಿದ್ದುಪಡಿಗೆ ಏಪ್ರಿಲ್ 15ರ ಬೆಳಿಗ್ಗೆ 11 ಗಂಟೆಯವರೆಗೆ ಅವಕಾಶವಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ತಿಳಿಸಿದ್ದಾರೆ.

ಈ ಸಂಬಂಧ ಬುಧವಾರ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ವಿದ್ಯಾರ್ಥಿಗಳು ತಮ್ಮ ಪ್ರವರ್ಗ ಮೀಸಲಾತಿ, ವಾರ್ಷಿಕ ಆದಾಯ, ಕನ್ನಡ ಮಾಧ್ಯಮ, ಗ್ರಾಮೀಣ ಅಭ್ಯರ್ಥಿ, ವಿಶೇಷ ಕ್ಯಾಟಗರಿ ಇತ್ಯಾದಿಗಳನ್ನು ಸರಿಯಾಗಿ ತುಂಬಲು ಇದರಿಂದ ಅವಕಾಶವಾಗಲಿದೆ. ತಿದ್ದು ಪಡಿ ಮಾಡಿದ ಬಳಿಕ, 'ಡಿಕ್ಲರೇಷನ್ ಬಟನ್' ಆಯ್ಕೆ ಮಾಡಿಕೊಂಡು, ನಂತರವಷ್ಟೇ 'ಫೈನಲ್ ಸಬ್‌ಮಿಷನ್' ಸಲ್ಲಿಸಿ, ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು. ತಿದ್ದುಪಡಿ ಮಾಡಿದ ಅರ್ಜಿಯ ಮುದ್ರಿತ ಪ್ರತಿಯನ್ನು ವಿದ್ಯಾರ್ಥಿಗಳು ತಮ್ಮ ಸುರಕ್ಷತೆಗಾಗಿ ಇಟ್ಟುಕೊಳ್ಳಬೇಕು. ಇಲ್ಲದೆ ಹೋದರೆ, ಮೊದಲು ಸಲ್ಲಿಸಿದ್ದ ಅರ್ಜಿಯನ್ನೇ ಮುಂದಿನ ಹಂತಗಳಿಗೆ ಪರಿಗಣಿಸಲಾಗುವುದು ಎಂದು ತಿಳಿಸಿದ್ದಾರೆ.

ಇದರಲ್ಲಿ ಅಭ್ಯರ್ಥಿಯ ಹೆಸರು, ತಂದೆ-ತಾಯಿಯ ಹೆಸರು, ಜನ್ಮ ದಿನಾಂಕ ಇತ್ಯಾದಿಗಳ ಬದಲಾವಣೆಗೆ ಅವಕಾಶ ಇರುವುದಿಲ್ಲ. ಇದರಲ್ಲೇನಾದರೂ ಬದಲಾವಣೆಗಳಿದ್ದಲ್ಲಿ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಯನ್ನು ಸಂಪರ್ಕಿಸಬೇಕು. ಆದರೆ ಸಿಬಿಎಸ್‌ಇ/ಸಿಐಎಸ್‌ಸಿಇ ಪಠ್ಯಕ್ರಮಗಳಲ್ಲಿ 10ನೇ ತರಗತಿ ಓದಿರುವವರು ಈ ವಿವರಗಳನ್ನು ತಮ್ಮ ಅರ್ಜಿಯಲ್ಲಿ ತಿದ್ದುಪಡಿ ಮಾಡಿಕೊಳ್ಳಬಹುದು ಎಂದು ಅವರು ಹೇಳಿದ್ದಾರೆ. ಜೊತೆಗೆ, ರಾಷ್ಟ್ರೀಯತೆಯನ್ನು ತಿದ್ದುಪಡಿ ಮಾಡಿಕೊಳ್ಳಲು ಬಯಸುವ ಓಸಿಐ ಅಭ್ಯರ್ಥಿಗಳು ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕರ ಹೆಸರಿನಲ್ಲಿ ನಿಗದಿತ ಮೊತ್ತದ ಡಿಮ್ಯಾಂಡ್ ಡ್ರಾಫ್ಟ್ ಪಡೆದುಕೊಂಡು, ಏಪ್ರಿಲ್ 13 ಮತ್ತು 15ರಂದು ನೇರವಾಗಿ ಹಾಜರಾಗಬೇಕು ಎಂದು ಪ್ರಕಟಣೆ ತಿಳಿಸಿದೆ.

# ನಾಮಪತ್ರ ಸಲ್ಲಿಕೆಗೆ ಅಭ್ಯರ್ಥಿ ಜೊತೆ ನಾಲ್ವರಿಗೆ ಅವಕಾಶ

## ಮಾಯಕೊಂಡ ಕ್ಷೇತ್ರಕ್ಕೆ ತಹಶೀಲ್ದಾರ್ ಕಚೇರಿಯಲ್ಲಿ ನಾಮಪತ್ರ ಸಲ್ಲಿಕೆ : ಎಸಿ ದುರ್ಗಾಶ್ರೀ

ದಾವಣಗೆರೆ, ಏ. 12- ಮಾಯಕೊಂಡ ವಿಧಾನಸಭಾ ಕ್ಷೇತ್ರಕ್ಕೆ ಸ್ಪರ್ಧಿಸುವ ಅಭ್ಯರ್ಥಿಗಳು ನಾಳೆ ದಿನಾಂಕ 13ರಿಂದ ತಹಶೀಲ್ದಾರ್ ಕಚೇರಿಯಲ್ಲಿ ಬೆಳಿಗ್ಗೆ 11ರಿಂದ ಮಧ್ಯಾಹ್ನ 3ರವರೆಗೆ ನಾಮಪತ್ರ ಸಲ್ಲಿಬಹುದಾಗಿದೆ ಎಂದು ಉಪ ವಿಭಾಗಾಧಿಕಾರಿಯೂ ಆಗಿರುವ ಚುನಾವಣಾಧಿಕಾರಿ ಶ್ರೀಮತಿ ಎನ್. ದುರ್ಗಾಶ್ರೀ ಹೇಳಿದರು.



ತಹಶೀಲ್ದಾರ್ ಕಚೇರಿಯಲ್ಲಿ ಬುಧವಾರ ಪತ್ರಿಕಾಗೋಷ್ಠಿ ನಡೆಸಿ ಮಾಹಿತಿ ನೀಡಿದ ಅವರು, ನಾಮಪತ್ರ ಸಲ್ಲಿಸಲು ಏ.20 ಕೊನೆಯ ದಿನವಾಗಿದೆ. ನಾಮಪತ್ರ ಸಲ್ಲಿಸಲು ಬೇಕಾದ ಕ್ರಮಗಳ ಬಗ್ಗೆ ಈಗಾಗಲೇ ರಾಜಕೀಯ ಪಕ್ಷಗಳ ಮುಖಂಡರಿಗೆ ಮಾಹಿತಿ ನೀಡಲಾಗಿದೆ. ಆದಾಗ್ಯೂ ಕಚೇರಿ ಮುಂಭಾಗ ಒಂದು ಕೌಂಟರ್ ತೆರೆದು ಮಾಹಿತಿ ನೀಡಲಾಗುತ್ತಿದೆ ಎಂದು ಹೇಳಿದರು.

ನಾಮಪತ್ರ ಸಲ್ಲಿಸಲು ಅಭ್ಯರ್ಥಿ ಜೊತೆಗೆ ನಾಲ್ವರಿಗೆ ಮಾತ್ರ ಅವಕಾಶವಿರುತ್ತದೆ. ಕಚೇರಿಯ 100 ಮೀಟರ್ ಒಳಗಡೆ ಮೂರು ವಾಹನಗಳ ಪ್ರವೇಶಕ್ಕೆ ಮಾತ್ರ ಅವಕಾಶವಿದೆ ಎಂದವರು ಸ್ಪಷ್ಟಪಡಿಸಿದರು.

ಕ್ಷೇತ್ರದಲ್ಲಿ ಅಂತಿಮವಾಗಿ 1,87,672 ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಈ ಪೈಕಿ 18 ರಿಂದ 19 ವರ್ಷದೊಳಗಿನವರು 4229 ಮತದಾರರಿದ್ದಾರೆ. 240 ಮತಗಟ್ಟೆಗಳನ್ನು ಸ್ಥಾಪಿಸಲಾಗುವುದು. 2570 ವಿಕಲಚೇತನ ಮತದಾರರಿದ್ದಾರೆ. 3816 ಮತದಾರರು 80 ವರ್ಷಕ್ಕೂ ಹೆಚ್ಚಿನವರಾಗಿದ್ದಾರೆ. ಇವರೆಲ್ಲರಿಗೂ ಮನೆಯಲ್ಲಿಯೇ ಮತ ಚಲಾಯಿಸಲು 12ಡಿ ಫಾರಂ ನೀಡಲಾಗಿದೆ. ಇವರ ಪೈಕಿ ಬಹುತೇಕರು ಮತಗಟ್ಟೆಗೇ ಬಂದು ಮತ ಚಲಾಯಿಸುವ ಉತ್ಸುಕತೆಯಲ್ಲಿದ್ದಾರೆ ಎಂದು ಹೇಳಿದರು.

### 5 ಪಿಂಕ್ ಬೂತ್ ಸ್ಥಾಪನೆ

**ಮಾಯಕೊಂಡ ಕ್ಷೇತ್ರದಲ್ಲಿ ಮಹಿಳಾ ಮತದಾರರು ಹೆಚ್ಚಿರುವ ಕಡೆ 5 ಪಿಂಕ್ ಮತಗಟ್ಟೆಗಳನ್ನು ಸ್ಥಾಪಿಸಲಾಗುವುದು ಎಂದು ಚುನಾವಣಾಧಿಕಾರಿ ದುರ್ಗಾಶ್ರೀ ಹೇಳಿದರುತೋಳಹುಣಸೆಯ ಯಲ್ಲಮ್ಮ ನಗರ, ಆನಗೋಡು, ಚಿಕ್ಕತೊಗಲೇರಿ, ಮಲ್ಲೇನಹಳ್ಳಿ ಹಾಗೂ ಹೊನ್ನಮರಡಿಯಲ್ಲಿ ಪಿಂಕ್ ಬೂತ್ ಸ್ಥಾಪಿಸಲಾಗುವುದು ಎಂದು ಹೇಳಿದರು.ಬಾಡಾ ಹಾಗೂ ಲೋಕಿಕೆರೆಯಲ್ಲಿ ಯುವ ಬೂತ್‌ಗಳನ್ನು ಹಾಗೂ ಗಿರಿಯಾಪುರದಲ್ಲಿ ವಿಕಲಚೇತನರಿಗಾಗಿ ವಿಶೇಷ ಮತಗಟ್ಟೆ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಹೇಳಿದರು.**

ಹೆಬ್ಬಾಳು ಟೋಲ್‌ಗೇಟ್, ಕಾರಿಗನೂರು ಕ್ರಾಸ್ ಹಾಗೂ ಹೆಚ್.ಬಸಾಪುರದ ಬಳಿ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿ, ವಾಹನಗಳ ತಪಾಸಣೆ ನಡೆಸಲಾಗುತ್ತಿದೆ. ಹೆಬ್ಬಾಳು ಚೆಕ್‌ಪೋಸ್ಟ್ ಬಳಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ 39 ಕೆ.ಜಿ. ಬೆಳ್ಳಿ ವಶ ಪಡಿಸಿಕೊಳ್ಳಲಾಗಿತ್ತು ಎಂದು ಹೇಳಿದರು.

ಮತದಾನ ಕೇಂದ್ರದಲ್ಲಿ ನಾಲ್ಕು ಕೊಠಡಿಗಳಿದ್ದರೆ ಅಲ್ಲಿ ಒಂದು ಕೊಠಡಿಯನ್ನು ವಿಶ್ರಾಂತಿ ಕೊಠಡಿಯನ್ನಾಗಿ ಮಾಡಲಾಗುವುದು. ಮತದಾನ ಕೇಂದ್ರದಲ್ಲಿ ಶೌಚಾಲಯಗಳು ಸರಿ ಇಲ್ಲದಿದ್ದರೆ ದುರಸ್ತಿಪಡಿಸಲಾಗುವುದು. ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ವಹಿಸಲಾಗಿದೆ ಎಂದು ಹೇಳಿದರು.

ತಹಶೀಲ್ದಾರ್ ಡಾ.ಎಂ.ಬಿ. ಅಶ್ವತ್ಥ್ ಮಾತನಾಡಿ, ಮಾಯಕೊಂಡವನ್ನು ಪ್ರತ್ಯೇಕ ತಾಲ್ಲೂಕು ಕೇಂದ್ರವನ್ನಾಗಿಸುವಂತೆ ಒತ್ತಾಯಿಸಿ ಮತದಾನ ಬಹಿಷ್ಕರಿಸಲಾಗುವುದು ಎಂದು ಅಲ್ಲಿನ ಗ್ರಾಮಸ್ಥರು ಹೇಳಿದ್ದರು. ಆದರೆ ಸ್ಥಳಕ್ಕೆ ಭೇಟಿ ನೀಡಿ ಜನರ ಮತ ಒಲಿಸಲಾಗಿದೆ ಎಂದು ಹೇಳಿದರು.

## ಕೊವಿಶೀಲ್ಡ್ ಉತ್ಪಾದನೆ ಪುನರಾರಂಭ



ನವದೆಹಲಿ, ಏ. 12 – ಕೊರೊನಾ ಲಸಿಕೆಯಾದ ಕೊವಿಶೀಲ್ಡ್ ಉತ್ಪಾದನೆಯನ್ನು ಮತ್ತೆ ಆರಂಭಿಸುವುದಾಗಿ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಸಿ.ಇ.ಒ. ಅದರ್ ಪೂನಾವಾಲಾ ತಿಳಿಸಿದ್ದಾರೆ. ಕೊರೊನಾ ಸೋಂಕು ಮತ್ತೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಕಂಪನಿ ಈಗಾಗಲೇ ಆರು ದಶಲಕ್ಷ ಕೊವೊವ್ಯಾಕ್ಸ್ ಬೂಸ್ಟರ್ ಡೋಸ್‌ಗಳನ್ನು ಹೊಂದಿದೆ. ವಯಸ್ಕರು ಬೂಸ್ಟರ್ ಡೋಸ್ ಪಡೆಯಬಹುದು ಎಂದವರು ಹೇಳಿದ್ದಾರೆ.

ಮುನ್ನೆಚ್ಚರಿಕೆ ಕ್ರಮವಾಗಿ ಕೊವಿಶೀಲ್ಡ್ ಲಸಿಕೆ ಆಯ್ಕೆ ನೀಡಲು ಉತ್ಪಾದನಾ ಕ್ರಮ ತೆಗೆದುಕೊಳ್ಳುತ್ತಿದ್ದೇವೆ ಎಂದವರು ತಿಳಿಸಿದ್ದಾರೆ. 90 ದಿನಗಳಲ್ಲಿ 6 ರಿಂದ ಏಳು ದಶಲಕ್ಷ ಡೋಸ್ ಕೊವಿಶೀಲ್ಡ್ ಲಸಿಕೆ ಲಭ್ಯವಾಗ ಲಿದೆ. ಇದನ್ನು 9 ತಿಂಗಳವರೆಗೆ ಬಳಸಬಹುದಾಗಿದೆ ಎಂದವರು ಹೇಳಿದ್ದಾರೆ. ಡಿಸೆಂಬರ್ 2021ರಂದು ಕಂಪನಿ ಕೊವಿಶೀಲ್ಡ್ ಲಸಿಕೆ ಉತ್ಪಾದನೆ ನಿಲ್ಲಿಸಿತ್ತು.

## ಮೋದಿ ಉಪನಾಮ : ರಾಹುಲ್‌ಗೆ ಸಮನ್ಸ್



ಪಾಟ್ನಾ, ಏ. 12 - ಮೋದಿ ಉಪನಾಮಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಮಾನಹಾನಿ ಪ್ರಕರಣಕ್ಕೆ ಸಂಬಂಧಿಸಿದಂತೆ ಏಪ್ರಿಲ್ 25ರಂದು ಹಾಜರಾಗು ವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ಬಿಹಾರ ನ್ಯಾಯಾಲಯ ತಿಳಿಸಿದೆ.

ಬಿಜೆಪಿ ಸಂಸದ ಹಾಗೂ ಮಾಜಿ ಉಪಮುಖ್ಯ ಮಂತ್ರಿ ಸುಶೀಲ್ ಕುಮಾರ್ ಮೋದಿ ಅವರು ಸಂಸದರು ಹಾಗೂ ಶಾಸಕರ ವಿಶೇಷ ನ್ಯಾಯಾಲಯ ದಲ್ಲಿ ರಾಹುಲ್ ಗಾಂಧಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಸೂರತ್ ನ್ಯಾಯಾಲಯದಲ್ಲಿ ಈಗಾಗಲೇ ರಾಹುಲ್ ಗಾಂಧಿಗೆ ಎರಡು ವರ್ಷಗಳ ಜೈಲು ಶಿಕ್ಷೆಯಾಗಿದೆ. ಇದು ಅವರು ಲೋಕಸಭಾ ಸ್ಥಾನದಿಂದ ಅನರ್ಹಗೊಳ್ಳಲೂ ಕಾರಣವಾಗಿದೆ.

## ಜಿಲ್ಲೆಯಲ್ಲಿ 23 ಕೊವಿಡ್ ಪ್ರಕರಣ

ದಾವಣಗೆರೆ, ಏ.12- ಜಿಲ್ಲೆಯ 23 ಜನರಲ್ಲಿ ಕೋವಿಡ್ ಪಾಸಿಟಿವ್ ಪ್ರಕರಣ ವರದಿಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 2, ಜಗಳೂರಿನಲ್ಲಿ 8, ಚನ್ನಗಿರಿ 2 ಹಾಗೂ ಹೊನ್ನಾಳಿ ತಾಲ್ಲೂಕಿನಲ್ಲಿ 11 ಪ್ರಕರಣಗಳು ದಾಖಲಾಗಿವೆ. ಜಿಲ್ಲೆಯಲ್ಲಿ ಒಟ್ಟು 76 ಸಕ್ರಿಯ ಪ್ರಕರಣಗಳಿವೆ.

# ನನ್ನ ಕೆಲಸ ಮೆಚ್ಚಿ ಟಿಕೆಟ್ ನೀಡಿದೆ : ಬಿ.ಪಿ. ಹರೀಶ್

ಹರಿಹರ, ಏ.12- ಹಿಂದೆ ನಾನು ಶಾಸಕನಾಗಿ ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ಪಕ್ಷವು ಮತ್ತೆ ನನಗೆ ಸ್ಪರ್ಧಿಸಲು ಟಿಕೆಟ್ ಕೊಟ್ಟಿದ್ದು, ಕ್ಷೇತ್ರದಲ್ಲಿ ಗೆಲ್ಲುವುದರ ಮೂಲಕ ಮತ್ತೊಮ್ಮೆ ಅಧಿಕಾರದ ಚುಕ್ಕಾಣಿ ಹಿಡಿಯುವುದಾಗಿ ಮಾಜಿ ಶಾಸಕ ಬಿ.ಪಿ. ಹರೀಶ್ ಹೇಳಿದರು.



ವಿದ್ಯಾನಗರದಲ್ಲಿ ಬಿಜೆಪಿ ನೂತನ ಕಚೇರಿ ಉದ್ಘಾಟನೆ ಮಾಡಿ ಮಾತನಾಡಿ, ಆಕಾಂಕ್ಷಿಗಳಾದ ಹನಗವಾಡಿ ವೀರೇಶ್, ಚಂದ್ರಶೇಖರ್ ಪೂಜಾರ್ ಮತ್ತು ನಾನು ಮೂರೂ ಜನ ಮಾತನಾಡಿಕೊಂಡಿದ್ದು, ನಾವುಗಳು ಟಿಕೆಟ್ ಕೊಡಿ ಎಂದು ಯಾವುದೇ ನಾಯಕರನ್ನು ಬೆನ್ನು ಹತ್ತಿ ಹೋಗುವುದು ಬೇಡ. ಕಾರಣ ಪಕ್ಷದ ವರಿಷ್ಠರು ಎಲ್ಲವನ್ನೂ ಗಮನಿಸುತ್ತಿರುತ್ತಾರೆ. ಹಾಗಾಗಿ ಟಿಕೆಟ್‌ಗಾಗಿ ಪೈಪೋಟಿ ಮಾಡುವುದಕ್ಕಿಂತ ಮೂರು ಜನ ಜನರ ಬಳಿ ಮತಯಾಚನೆ ಮಾಡುವುದು ಸೂಕ್ತ ಎಂಬ ತೀರ್ಮಾನ ತೆಗೆದುಕೊಂಡಿದ್ದೆವು.

ಪಕ್ಷದ ಕಾರ್ಯಕರ್ತರು ಕೂಡ ಹರಿಹರ ಕ್ಷೇತ್ರದಲ್ಲಿ ಕಳೆದ ಹತ್ತು ವರ್ಷಗಳಿಂದ ಅಭಿವೃದ್ಧಿ ಕುಂಠಿತವಾಗಿದೆ 2008 ರಿಂದ 2013 ರವರೆಗೆ ಬಿಜೆಪಿ ಪಕ್ಷವು ಅಧಿಕಾರ ಮಾಡಿದ ಸಮಯದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ, ಕುಡಿಯುವ ನೀರಿನ ವ್ಯವಸ್ಥೆ, ಆಸ್ಪತ್ರೆ, ಸೇತುವೆ, ಸ್ವಿಮ್ಮಿಂಗ್ ಪೂಲ್, ತಹಶೀಲ್ದಾರ್ ಕಚೇರಿ, ಪಾಲಿಟೆಕ್ನಿಕ್ ಕಾಲೇಜು, ಡಿಗ್ರಿ ಕಾಲೇಜು ಇವುಗಳು ಇರಲಿಲ್ಲ. ನಾನು ಅಧಿಕಾರಕ್ಕೆ ಬಂದ ನಂತರ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಯಿತು.

### ಹರಿಹರ ಕ್ಷೇತ್ರದ ನೂತನ ಬಿಜೆಪಿ ಕಛೇರಿ ಉದ್ಘಾಟನೆ

ನಂತರ ಹತ್ತು ವರ್ಷ ಜೆಡಿಎಸ್, ಕಾಂಗ್ರೆಸ್ ಪಕ್ಷದವರು ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಮಾಡದೇ ಇರುವುದರಿಂದ ಅಭಿವೃದ್ಧಿ ಬಿಜೆಪಿ ಪಕ್ಷದಿಂದ ಮಾತ್ರ ಸಾಧ್ಯ ಎನ್ನುವ ತೀರ್ಮಾನವನ್ನು ಜನರು ಮಾಡಿದ್ದಾರೆ ಎಂದು ಹೇಳಿದರು. ಬಿಜೆಪಿ ಜಿಲ್ಲಾ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಮಾತನಾಡಿ ಪಕ್ಷದ ಆಜ್ಞೆಯನ್ನು ಮೀರುವಂತಹ ಯಾವುದೇ ಕೆಲಸವನ್ನು ನಾನು ಯಾವತ್ತು ಮಾಡಿಕೊಂಡು ಬಂದಿಲ್ಲ ಎಂದು ತಿಳಿಸಿದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಹರಿಹರ ಕ್ಷೇತ್ರದಲ್ಲಿ ಸುಭದ್ರ ಆಡಳಿತ ಮಾಡುವಂತಹ ನಾಯಕರು ಇಲ್ಲದೇ ಇರುವುದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿದ್ದವು. ಇದಕ್ಕೆಲ್ಲ ಪರಿಹಾರ ವಾಗಿ ಬಿಜೆಪಿ ಪಕ್ಷವನ್ನು ಮತ್ತೆ ಗೆಲ್ಲಿಸಬೇಕು ಎಂದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯರಾದ ವಿಜಯಕುಮಾರ್, ಅಶ್ವಿನಿ ಕೃಷ್ಣ, ನಗರಸಭೆ ಮಾಜಿ ಸದಸ್ಯರಾದ ಅಂಬುಜಾ ರಾಜೊಳ್ಳಿ, ನಗರ ಘಟಕದ ಬಿಜೆಪಿ ಅಧ್ಯಕ್ಷ ಅಜಿತ್ ಸಾವಂತ್, ಕಾರ್ಯದರ್ಶಿ ಹೆಚ್. ಮಂಜಾನಾಯ್ಕ್, ತಾಪಂ ಮಾಜಿ ಅಧ್ಯಕ್ಷ ಅಣ್ಣಪ್ಪ ಐರಣಿ, ಮುಖಂಡರಾದ ಬಸವನಗೌಡ, ಕೆಂಚನಹಳ್ಳಿ ಮಹಾಂತೇಶಪ್ಪ, ದೇವೇಂದ್ರಪ್ಪ, ಕೃಷ್ಣ ಕೆ.ಜಿ, ಆಟೋ ರಾಜು, ಎನ್.ಇ. ಸುರೇಶ್, ಸಿದ್ದೇಶ್, ಮಹಾಂತೇಶ್, ಹನುಮಂತ ಗೌಡ ಜಿಗಳಿ, ರವಿಕುಮಾರ್, ಸಂತೋಷ ಗುಡಿಮನಿ, ಸುನಿಲ್, ಪ್ರವೀಣ್ ಇತರರು ಹಾಜರಿದ್ದರು.

## ಮೇಲ್, ಎಕ್ಸ್‌ಪ್ರೆಸ್‌ಗಳಲ್ಲಿ ವಿಕಲಚೇತನರಿಗೆ ಸೀಟಿನ ವ್ಯವಸ್ಥೆ

ನವದೆಹಲಿ, ಏ. 12 – ಮೇಲ್ ಹಾಗೂ ಎಕ್ಸ್‌ಪ್ರೆಸ್ ರೈಲುಗಳಲ್ಲಿ ವಿಕಲಚೇತನರು ಹಾಗೂ ಅವರ ಸಹಾಯಕರಿಗೆ ಬರ್ತ್‌ಗಳನ್ನು ಕಾಯ್ದಿರಿಸಲು ರೈಲ್ವೆ ಸಚಿವಾಲಯ ನಿರ್ಧರಿಸಿದೆ. ಸಾಧ್ಯವಾದಷ್ಟು ಕೆಳ ಸೀಟುಗಳಲ್ಲಿ ಅವರಿಗೆ ಅವಕಾಶ ನೀಡಲಾಗುವುದು. ಇದುವರೆಗೂ ಹಿರಿಯರು ಹಾಗೂ ಮಹಿಳೆಯರಿಗೆ ಈ ಸೌಲಭ್ಯ ಇತ್ತು. ಅದನ್ನು ವಿಕಲಚೇತನರಿಗೆ ವಿಸ್ತರಿಸಲು ನಿರ್ಧರಿಸಲಾಗಿದೆ.

## ಕು. ಗಂಗವ್ವ ಅಂಧರ ಮಹಿಳಾ ಕ್ರಿಕೆಟ್ ತಂಡದ ಉಪ ನಾಯಕಿ



ರಾಣೇಬೆನ್ನೂರು, ಏ.12- ಶ್ರೀರಾಮ ನಗರದಲ್ಲಿರುವ ಸ್ನೇಹದೀಪ ಅಂಧ ಅಂಗವಿಕಲರ ಸಂಸ್ಥೆಯ ಅಂಧ ವಿದ್ಯಾರ್ಥಿನಿ ಕು. ಗಂಗವ್ವ ನೀಲಪ್ಪ ಹರಿಜನ ಅವರು ಭಾರತ ಅಂಧರ ಮಹಿಳಾ ಕ್ರಿಕೆಟ್ ತಂಡದ ಉಪನಾಯಕಿಯಾಗಿ ಆಯ್ಕೆಯಾಗಿ ಹಾವೇರಿ ಜಿಲ್ಲೆ ಹಾಗೂ ಕರ್ನಾಟಕಕ್ಕೆ ಕೀರ್ತಿ ತಂದಿದ್ದಾಳೆ. ಭಾರತ ಅಂಧರ ಕ್ರಿಕೆಟ್‌ಗೆ ಆಯ್ಕೆಯಾಗಿ ಸಂಸ್ಥೆಗೆ ಹೆಸರು ಮತ್ತು ಕೀರ್ತಿ ತಂದಿದ್ದಾಳೆ. ಇವರಿಗೆ ಸಂಸ್ಥೆಯ ಆಡಳಿತ ಮಂಡಳಿ, ಸಂಸ್ಥೆಯ ಧರ್ಮದರ್ಶಿಗಳಾದ ಕೆ.ಜಿ.ಮೋಹನ್ ಮತ್ತು ಡಾ.ಪಾಲ್ ಮುದ್ದಾ ಅಭಿನಂದಿಸಿದ್ದಾರೆ.

## ಸಿ.ಆರ್.ಪಿ.ಎಫ್. ಪರೀಕ್ಷೆಯಿಂದ ದಕ್ಷಿಣದವರಿಗೆ ತೊಡಕಾಗಿಲ್ಲ

ನವದೆಹಲಿ, ಏ. 12 – ಸಿ.ಆರ್.ಪಿ.ಎಫ್.ನ ಆಂತರಿಕ ನೇಮಕಾತಿ ಪ್ರಕ್ರಿಯೆ ಹಿಂದಿನಿಂದಲೂ ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳಲ್ಲೆ ನಡೆಯುತ್ತಾ ಬಂದಿದೆ. ಇದರಿಂದಾಗಿ ದಕ್ಷಿಣದ ರಾಜ್ಯಗಳ ಅಭ್ಯರ್ಥಿಗಳಿಗೆ ಎಂದೂ ಸಮಸ್ಯೆಯಾಗಿಲ್ಲ ಎಂದು ಸಿ.ಆರ್.ಪಿ.ಎಫ್. ತಿಳಿಸಿದೆ. ಸಿ.ಆರ್.ಪಿ.ಎಫ್. ಪರೀಕ್ಷೆಯನ್ನು ಪ್ರಾಂತೀಯ ಭಾಷೆಗಳಲ್ಲಿ ನಡೆಸುವಂತೆ ಒತ್ತಾಯ ಕೇಳಿ ಬಂದ ಹಿನ್ನೆಲೆಯಲ್ಲಿ ಈ ಸ್ಪಷ್ಟನೆ ನೀಡಲಾಗಿದೆ. 9,212 ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ ಎಂದು ಸಿ.ಆರ್.ಪಿ.ಎಫ್. ವಕ್ತಾರರು ಹೇಳಿದ್ದಾರೆ.

## ರಾಣೇಬೆನ್ನೂರಿಗೆ ಇಂದು ನಿಜಗುಣ ಶ್ರೀ



ಮಾರ್ಚ್ 15 ರಿಂದ ಏಪ್ರಿಲ್ 5 ರವರೆಗೆ ನಡೆದ ತೋಂಟದಾರ್ಯ ಮಠದ ಶ್ರೀ ನಿಜಗುಣಾನಂದ ಪ್ರಭು ಶ್ರೀಗಳ ವಿಶ್ವಧರ್ಮ ಪ್ರವಚನಕ್ಕೆ ಅಪಾರ ಜನರು ಕಾಣಿಕೆ ಸಲ್ಲಿಸಿದ್ದು, ಅವರಿಗೆ ಕೃತಜ್ಞತೆ ಸಲ್ಲಿಸುವ ಹಾಗೂ ಸಂಗ್ರಹವಾದ ಮತ್ತು ಖರ್ಚಾದ ದೇಣಿಗೆ ಲೆಕ್ಕಪತ್ರ ಒಪ್ಪಿಸುವ ಸಭೆಯು ರತ್ನಾಕರ ಕುಂದಾಪೂರ ಸಭಾಭವನದಲ್ಲಿ ಇಂದು ನಡೆಯಲಿದೆ. ಸಭೆಗೆ ನಿಜಗುಣಾನಂದ ಪ್ರಭು ಸ್ವಾಮಿಜಿ ಆಗಮಿಸುವರು ಎಂದು ಪ್ರವಚನ ಸಮಿತಿ ತಿಳಿಸಿದೆ.

# ವಿಜೃಂಭಣೆಯ ಚಿಗಟೇರಿ ನಾರದಮುನಿ ರಥೋತ್ಸವ





ಹರಪನಹಳ್ಳಿ, ಏ. 12- ತಾಲ್ಲೂಕಿನ ಚಿಗಟೇರಿಯ ಶ್ರೀ ನಾರದಮುನಿ ಸ್ವಾಮಿಯ ರಥೋತ್ಸವವು ಮೂಲಾ ನಕ್ಷತ್ರದಲ್ಲಿ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಿನ್ನೆ ಜರುಗಿತು.

ನಾರದಮುನಿ ಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷ ಅಣಬೇರು ರಾಜಣ್ಣ, ಪಾಲಿಕೆ ಮಾಜಿ ಸದಸ್ಯ ಶ್ಯಾಬನೂರಿನ ಸಂಕೋಳ್ ಚಂದ್ರಶೇಖರ್, ಕಲಪನಹಳ್ಳಿ ಬಸವಲಿಂಗಪ್ಪ, ಪಲ್ಲಾಗಟ್ಟೆ ನಾಗರಾಜ್, ಹೊಳಲ್ಕೆರೆ ವೇದಮೂರ್ತಿ, ಹುಣಸಿಹಳ್ಳಿ ಜಾತಪ್ಪ, ಇಂಜಿನಿಯರ್ ಜಿ.ಬಿ.ಸುರೇಶಕುಮಾರ್ ಮತ್ತಿತರರು ರಥೋತ್ಸವದಲ್ಲಿ ಭಾಗವಹಿಸಿದ್ದರು.

ಚಿತ್ರದುರ್ಗ-ದಾವಣಗೆರೆ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯರೂ ಆದ ಶ್ರೀ ನಾರದಮುನಿ ಸೇವಾ ಟ್ರಸ್ಟ್ ಸದಸ್ಯ ಶಾಮನೂರು ಬಸಣ್ಣ ಮತ್ತು ಮಕ್ಕಳು ಶ್ರೀ ನಾರದಮುನಿ ದೇವಸ್ಥಾನ ಮತ್ತು ರಥಕ್ಕೆ ವಿಶೇಷ ಹೂವಿನ ಅಲಂಕಾರ ಮಾಡಿಸಿದ್ದರು.

# ಎಲಿಸವ್ವ ಜಾನಪದ ಕಲಾ ತಂಡದಿಂದ ಮಹಿಳಾ ದಿನ




ದಾವಣಗೆರೆ, ಏ.12- ನಗರದ ಎಲಿಸವ್ವ ಜಾನಪದ ಕಲಾ ತಂಡದಿಂದ ಮಹಿಳಾ ದಿನಾಚರಣೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ತಂಡದ ಅಧ್ಯಕ್ಷರಾದ ಮೀನಾಕ್ಷಿ ವೆಂಕಟೇಶ್ ಅಧ್ಯಕ್ಷತೆ ವಹಿಸಿದ್ದರು. ಸಂಗೀತ ಶಿಕ್ಷಕಿಯರಾದ ವಿಜಯಮ್ಮ, ಕನ್ಯಾಕುಮಾರಿ, ಸ್ವರ್ಣಲತಾ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ತಂಡದ ಪದಾಧಿಕಾರಿಗಳಾದ ಜ್ಯೋತಿ, ದೀಪಕ್, ಪವಿತ್ರ, ಚಂದ್ರಕಲಾ, ಮಮತಾ ಕಣವಿ, ಮಧು ಉಮೇಶ್, ಪ್ರೀತಿ ಉಪಸ್ಥಿತರಿದ್ದರು.

ಶೈಲಜಾ ಕೊಟ್ರೇಶ್ ಪ್ರಾರ್ಥಿಸಿದರು. ಮಂಗಳಾ ಮಲ್ಲಿಕಾರ್ಜುನ್ ಸ್ವಾಗತಿಸಿದರು. ಸುಜಾತ ನಾಗೇಶ್ ವಂದಿಸಿದರು. ಸುಧಾ ಸಂತೋಷ್ ನಿರೂಪಿಸಿದರು.

## ರಾಣೇಬೆನ್ನೂರಿಗೆ ಇಂದು ಹೆಚ್.ಡಿ. ಕುಮಾರಸ್ವಾಮಿ




ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು ಇಂದು ರಾಣೇ ಬೆನ್ನೂರಿಗೆ ಆಗಮಿಸಿ ಜೆಡಿಎಸ್ ಅಭ್ಯರ್ಥಿ ಮಂಜುನಾಥಗೌಡ ಶಿವಣ್ಣ ನವರ ಪರವಾಗಿ ಮತಯಾಚಿಸಲು ನಗರಸಭೆ ಕ್ರೀಡಾಂಗಣದಲ್ಲಿ ನಡೆಯುವ ಬಹಿರಂಗ ಸಭೆಯಲ್ಲಿ ಮಾತನಾಡಲಿದ್ದಾರೆ. ಪಕ್ಷದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ, ಮಾಜಿ ಶಾಸಕ ಶಿವಶಂಕರ್ ಪಾಲ್ಗೊಳ್ಳುವರು. ಈ ಸಭೆಗೂ ಮುನ್ನ ಕೆಇಬಿ ಗಣೇಶ ದೇವಸ್ಥಾನದಿಂದ ಕ್ರೀಡಾಂಗಣದವರೆಗೆ ಮುಖಂಡರಗಳನ್ನು ಮೆರವಣಿಗೆಯಲ್ಲಿ ಕರೆ ತರಲಾಗುವುದು.

STAFF REQUIRED
Nursing Staff - 10 No. Duty Doctor - 4 No.
ICU Staff - 6 No. Aaya - 6 No. Receptionist-2 No.
SUCHETHANA HOSPITAL
No. 284/1,2,3, 4th main Road, Opp. Vishweshwaraiah Park Gate, P.J. Extension, Davangere - 577 002.
08192-230203, +91 9742733116
8095997444, 94499 90000

REQUIRED
Experienced MARKETING EXECUTIVE (MALE)
for IDEAL ICE CREAM in cities of KARNATAKA/GOA with Good Communication Skills & owning a Two Wheeler
Preference will be given to candidates with minimum 2 years experience in FMCG
Submit resume with expected salary to
recruitment@idealicecream.com

MATA AMRITANANDAMAYI MATH (TRUST)
Since 1987
Enter to Learn, Exit to Serve
A gateway to empower students to attain and maintain extraordinary education
AMRITA INSTITUTIONS IN DAVANGERE
AMRITA PU COLLEGE
SCIENCE PCMB / PCMCs
COMMERCE EBACs / EBAS
AMRITA VIDYALAYAM
CLASS 1 TO 10 (CBSE) With Olympiads
AMRITA NURSERY
PRE-KG LKG UKG
Integrated KCET NEET IIT- JEE
SESSION 2023 - 2024
ADMISSIONS OPEN
Hurry Up..!





AMMA - SRI MATA AMRITANANDAMAYI DEVI
Chancellor
AMRITA VISHWAVIDYAPEETAM
THE HONOURABLE CHAIR OF G20
Enroll Now !!
Contact: # 1179/7, Nijalingappa Layout, DAVANGERE - 577 004.
Ph : 08192-295723 Mob : 9844494879, 9535626702
Email: davangere@vidyalayam.amrita.edu.in
www.dvgn.amritavidyalayam.org

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte